ಕಲ್ಯಾಣ ಕಿರಣ



ಬಸವ ತತ್ವ ಪ್ರಚಾರದ ಮಾಸಪತ್ರಿಕೆ

ಆಗಸ್ಟ್ 2012 ಬೆಲೆ 20/-



ವಿಶ್ವಗುರು ಬಸವಣ್ಣನವರ 817ನೆಯ ಲಿಂಗೈಕ್ಯ ಸಂಸ್ಮರಣೆಯಂದು ಶ್ರದ್ಧಾಂಜಲಿ ಸಮರ್ಪಣೆ
ವಿಧಾನ ಪರಿಷತ್ ಸಭಾಪತಿ ಡಿ.ಹೆಚ್. ಶಂಕರಮೂರ್ತಿ ಮತ್ತು ಮುಖ್ಯಮಂತ್ರಿ ಚಂದ್ರು ಅವರಿಂದ



ಕಾರ್ಯಕ್ರಮ ಉದ್ಘಾಟನೆ ಡಿ.ಹೆಚ್. ಶಂಕರಮೂರ್ತಿ ಅವರಿಂದ





ಶರಣ. ಪ್ರದೀಪಕುಮಾರ ಹೆಜ್ರಿಯವರಿಗೆ
"ಶರಣ ರತ್ನ" ಪ್ರಶಸ್ತಿ ಪ್ರಧಾನ.

ಶರಣೆ. ಭಾರತಿ ಕೆಂಪಯ್ಯನವರಿಗೆ
"ಶರಣ ರತ್ನ" ಪ್ರಶಸ್ತಿ ಪ್ರಧಾನ.



ಶರಣ. ನಂದೀಶರವರಿಗೆ
"ಶರಣ ರತ್ನ" ಪ್ರಶಸ್ತಿ ಪ್ರಧಾನ.



ಶರಣ. ಕಾರ್ತಿಕರವರಿಗೆ
"ಶರಣ ರತ್ನ" ಪ್ರಶಸ್ತಿ ಪ್ರಧಾನ.

ಧಾರವಾಡದಲ್ಲಿ ಬಸವ ಜ್ಯೋತಿ ವಿಶೇಷ ಕಾರ್ಯಕ್ರಮ, ದಿ.29-7-2012, ಧ್ವಜಾರೋಹಣ ಶ್ರೀಶೈಲ ಹುದ್ದಾರ, ಉಪನ್ಯಾಸಕರು ಜಯಶ್ರೀ ಕಲ್ಲೊಳಗಿ, ಶರಣೆ. ಪೂರ್ಣಿಮಾ ಕೂಬಕಡ್ಡಿ.



|| ಓಂ ಶ್ರೀ ಗುರು ಬಸವಲಿಂಗಾಯ ನಮಃ ||

866666

ಸಂಪುಟ-42 ಬಸವ ಶಕೆ -879 ಪಂಚ ವಾರ್ಷಿಕ ಸದಸ್ಯತ್ವ 1000 ರೂ.
ಸಂಚಿಕೆ-08 ಆಗಸ್ಟ್-2012 ವಾರ್ಷಿಕ ಚಂದಾ 200 ರೂ.

ಕರುಣಾಳು ಬಸವ ಬೆಳಕೆ

– ಕೆ.ಬಸವರಾಜ. ಬೆಳಗಾವಿ

ಕರುಣಾಳು ಬಸವ ಬೆಳಕೆ
ಬಾಳನ್ನು ಬೆಳಗಿಸಲು ನೀ ತೋರು ಬಾ ||ಪ||
ಭವದ ಕತ್ತಲೆಯಲಿ ಬೆಳಕಾಗಿ ನೀ ಬಂದೆ
ಬರಡು ಜೀವನದಲಿ ಝೇಂಕಾರ ನೀ ತಂದೆ
ಸರಳ ಬಾಳೆ ಸುಂದರವೆಂದು ನೀ ತೋರಿದೆ
ಜೀವನ ಜಯಿಸುವ ಸೂತ್ರಗಳ ಸಾಧಿಸಿ ನೀ ಇತ್ತೆ.
ಕಾಯಕ್ಕೆ ಕಾಯಕದ ಶೃಂಗಾರ ತೊಡಿಸಿದೆ.
ಕಾಯದಲಿ ದೇವತ್ವ ನೀ ತುಂಬಿದೆ
ಕಾಣದ ದೇವನನ್ನು ಕೈಯ ತೊಟ್ಟಿಲಲ್ಲಿರಿಸಿ
ಮನುಜಗೆ ಮನು-ತಂದೆ ಎನ್ನಿಸಿದೆ ಬೆಳಕೆ
ದೇವತೆಗಳ ಕಾರಡವಿಯೊಳು ದೇವನೊಬ್ಬನೆ ಎಂದೆ
ದೇವತೆಗಳ ಕಲ್ಪನೆಗೆ ತಿಲಾಂಜಲಿ ನೀ ಇತ್ತೆ
ಧನ್ಯರಾದರು ಅಂದು ಇಷ್ಟಲಿಂಗ ದೇವನನು ಧರಿಸಿ
ಮಾನ್ಯರಾದರು ಇಂದಿಗೂ ಈ ನಿನ್ನ ಸಾಧಕರು
ಸತ್ತ ಮೇಲೆ ಸಿಗುವ ಸ್ವರ್ಗಕ್ಕೆ ಹಂಬಲಿಸಿ
ದೇವನಿತ್ತ ಬಾಳನ್ನು ನರಕ ಮಾಡುವರಿಗೆ
"ಅರಿತರೆ ಶರಣ, ಮರೆತರೆ ಮಾನವ" ಎಂದು,
ಇಳೆಯ ಬಾಳನ್ನು ನೀ ಸ್ವರ್ಗಮಾಡಿ ತೋರಿದೆ.
ಅರ್ಧ ಸೃಷ್ಟಿಯೇ ಆದ ಸ್ತ್ರೀ ಸಂಕುಲಕ್ಕೆ
ಸಮಾನತೆಯ ಹಕ್ಕನ್ನು ನೀ ಅಂದು ನೀಡಿದೆ
ಶತಶತಮಾನಗಳ ಕೊರಗನ್ನು ಕರಗಿಸಿ
ಸ್ತ್ರೀ ಕುಲೋದ್ಧಾರಕ ಗುರು ಬೆಳಕೆ ನೀನಾದೆ
ಸಸ್ಯ ಪ್ರಾಣಿಗಳ ಪ್ರಾಣಕುತ್ತನಿಂದ ಪಾರುಮಾಡಿ
ದಿವ್ಯ "ಪ್ರಸಾದ ತತ್ತ್ವ" ನೀನಿತ್ತೆ ಪ್ರಭೆಯೆ.
"ಸಕಲ ಜೀವಾತ್ಮರಿಗೆ ಲೇಸನ್ನೆ ಬಯಸಿ"
ಪರಮ ಗುರು ಪ್ರಾಣ ನೀನಾದೆ ಬೆಳಕೆ
ಮಾನವರೆಲ್ಲರು ದೇವನ ಮಕ್ಕಳು
ಜಾತಿ ಭೇದಗೈಯುವುದು ದೇವನಿಗೆ ಅವಮಾನ
ದೇವನೊಲಿದಾತನೆ ಜಾತನೆಂದು
ವಿಶ್ವಧರ್ಮ ಸಾರಿದ ವಿಶಿಷ್ಟ ಗುರು ಜ್ಯೋತಿ ನೀನಾದೆ.
ಏನು ಬಣ್ಣಿಸಲಿ ನಿನ್ನ ಸಾಧನೆಯ
ಏನೆಂದು ಹೊಗಳುವೆ ನಿನ್ನ ಘನ ಹಿರಿಮೆಯ
ಏನೇನಂದರೂ ನೀನು 'ಎನಗಿಂತ ಕಿರಿಯರಿಲ್ಲೆಂದೆ'
ಸರಳತನವ ತೋರಿ ಬದುಕನ್ನು ದಿವ್ಯ ಮಾಡಿದ ಪ್ರಭೆಯೆ
ನಿನ್ನ ಸಂದೇಶ ಸಾಹಿತ್ಯ ಸಾಕಷ್ಟು ಇರಲು
ನೀ ಬದುಕಿ ಬಾಳಿದ ರೀತಿ ನೀತಿಗಳಿರಲು
ನೀ ಜನ್ಮವೆತ್ತಿ ಮತ್ತೊಮ್ಮೆ ಬಾ ಎಂದರೆ
ನಿನ್ನ ಬೆಳಕನ್ನು ನೋಡದ ಕುರುಡರು ನಾವಲ್ಲವೇ ?
ಬದುಕನ್ನು ಭವ್ಯಗೊಳಿಸುವ ಬಾಳಬಟ್ಟೆಯ ನೀಡ್ದ
ಜೀವನ ಸಾರ್ಥಕಗೊಳಿಸುವ ಸಾಧನವೇ ನೀನು
ಎಲ್ಲರೂ ನನ್ನವರು ಎಂದು ಕಲಿಸಿದ ಕಲಿಯೇ
ನಮ್ಮನ್ನು ಬೆಳಗಿಸಲು ಬಾ ಬೆಳಕೆ, ಬಾ ಬಾ !

ಕಿರಣ ಗನ್ನಡಿ

ಸೆಪ್ಟಂಬರ್–ಅಕ್ಟೋಬರ್ ತಿಂಗಳಿನಲ್ಲಿ ಬರುವ ಹಬ್ಬ ಹುಣ್ಣಿಮೆ ಉತ್ಸವಗಳು

ಸೆಪ್ಟಂಬರ್ 19 – ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಲಿಂಗಾನಂದ ಸ್ವಾಮಿಗಳವರ 82ನೆಯ ಜನ್ಮ ದಿನೋತ್ಸವ

ಸೆಪ್ಟಂಬರ್ 19 – ರಾಷ್ಟ್ರೀಯ ಬಸವ ದಳದ ಹುಟ್ಟುಹಬ್ಬ

ಸೆಪ್ಟಂಬರ್ 19 – ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರ 54ನೆಯ ಜನ್ಮದಿನೋತ್ಸವ

ಅಕ್ಟೋಬರ್ 27,28,29 – ಬಸವ ಕಲ್ಯಾಣದಲ್ಲಿ ಹನ್ನೊಂದನೆಯ ಕಲ್ಯಾಣ ಪರ್ವ

ಅಕ್ಟೋಬರ್ 28, ಬೆಳಿಗ್ಗೆ 11 ಗಂಟೆಗೆ – 108 ಅಡಿ ಬಸವ ಪುತ್ಥಳಿಯ ಅನಾವರಣ

ಕಲ್ಯಾಣ ಕಿರಣ ಚಂದಾ

ಕಲ್ಯಾಣ ಕಿರಣದ ವಾರ್ಷಿಕ ಚಂದಾ 200ರೂ. ಪಂಚವಾರ್ಷಿಕ ಚಂದಾ 1000ರೂ. ಕಳಿಸಬೇಕು ಎನ್ನುವವರು ಎಂ.ಓ. ಮೂಲಕ, ಬ್ಯಾಂಕ್ ಡ್ರಾಫ್ಟ್ ಮೂಲಕ ಕಳಿಸಬಹುದು. ವಿಶ್ವಕಲ್ಯಾಣ ಮಿಷನ್ ಚಾರಿಟಬಲ್ ಟ್ರಸ್ಟ್ ಹೆಸರಿಗೆ ಡಿ.ಡಿ. ತೆಗೆಸಬೇಕು.

ವಿಶ್ವಕಲ್ಯಾಣ ಮಿಷನ್ ಚಾರಿಟಬಲ್ ಟ್ರಸ್ಟ್
ಬಸವ ಮಂಟಪ, 2035, 20ನೇ ಮೇನ್, ರಾಜಾಜಿನಗರ 2ನೇ ಬ್ಲಾಕ್
ಬೆಂಗಳೂರು–560010
ದೂರವಾಣಿ : 080–23131476 / 9945806297

Kalyana Kirana -Reg No.19988/70. Monthly Magazine Edited and Published by Pujya Mate Kasturidevi on behalf of Vishwa kalyana Mission Charitable Trust, Basava Mantapa, 2035, 20th Main, 2nd Block, Rajajinagar, Bangalore-560010. Phone : 080-23131476, Send SMS to 9945806297/ 9738028585/ 8892912123
Email :- kalyanakirana1970@gmail.com

ಓಂ ಶ್ರೀ ಗುರು ಬಸವಲಿಂಗಾಯ ನಮಃ

866666

ಕಾಯಕವೇ ಕೈಲಾಸವೆಂಬ ಮಹಾಮಂತ್ರವನ್ನು ಸಾರಿದ ಬಸವ ಕಲ್ಯಾಣ ಸುಕ್ಷೇತ್ರದಲ್ಲಿ ಹನ್ನೊಂದನೆಯ

ಕಲ್ಯಾಣ ಪರ್ವ

2012ರ ಅಕ್ಟೋಬರ್ 27,28 ಮತ್ತು 29ರಂದು

ಶರಣ ಬಂಧುಗಳಿಗೆ ಶರಣು ಶರಣಾರ್ಥಿ.

ಮಹಾಮಾನವತಾವಾದಿ, ಲಿಂಗಾಯತ ಧರ್ಮ ಸಂಸ್ಥಾಪಕ, ಶರಣ ಗಣಮಣಿ ಧರ್ಮಗುರು ಬಸವಣ್ಣನವರ ಕಾರಣಿಕತ್ವ ಮತ್ತು ಸಂದೇಶಗಳಲ್ಲಿ ನಂಬಿಕೆ ಇಟ್ಟು ನಡೆಯುವ ಬಸವ ಭಕ್ತರು, ಬಸವ ಧರ್ಮೀಯರಾದ ಲಿಂಗಾಯತರು ಮತ್ತು ಬಸವಾಯತರೆಲ್ಲರೂ ವರ್ಷಕ್ಕೆ ಒಮ್ಮೆಯಾದರೂ ಒಂದು ಸ್ಥಳದಲ್ಲಿ ಸಮಾವೇಶವಾಗುವುದು ಅತ್ಯಂತ ಅವಶ್ಯಕ. ಇದು ಸಮಾನತೆ ಮತ್ತು ಸಹೋದರತ್ವ ಬೆಳೆಸಲು ಸಹಕಾರಿಯಾಗುವುದು ಎಂಬ ಉದ್ದೇಶದಿಂದ ಆದಿ ಶರಣರ ಸಂಕಲ್ಪದಂತೆ ವಿಶ್ವಗುರು ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ, ಐಕ್ಯಕ್ಷೇತ್ರ ಕೂಡಲಸಂಗಮದಲ್ಲಿ ಶರಣ ಮೇಳ ಎಂಬ ಬೃಹತ್ ಧಾರ್ಮಿಕ ಸಮಾವೇಶವನ್ನು 1988ರಿಂದ ಪ್ರತಿವರ್ಷವೂ ಜನವರಿ 11 ರಿಂದ 15ರವರೆಗೆ ನಡೆಸಿಕೊಂಡು ಬರಲಾಗುತ್ತಿದ್ದು 25ನೆಯ ಶರಣ ಮೇಳವು ಇದೇ 2012ರ ಜನವರಿಯಲ್ಲಿ ಯಶಸ್ವಿಯಾಗಿ ಜರುಗಿದೆ. ಬೀದರ ಜಿಲ್ಲೆಯಲ್ಲಿರುವ ಬಸವ ಕಲ್ಯಾಣವು 12ನೆಯ ಶತಮಾನದಲ್ಲಿ ವಿಶ್ವಗುರು ಬಸವಣ್ಣನವರ ಕಾರ್ಯಕ್ಷೇತ್ರವಾಗಿತ್ತು. ಲಿಂಗದೇವನ ಅನುಗ್ರಹವಾಗಿ ಇಷ್ಟಲಿಂಗದ ಪರಿಕಲ್ಪನೆ ಮೂಡಿ ಧರ್ಮಪಿತರು ಲಿಂಗಾಯತ ಧರ್ಮದ ರೂಪು ರೇಷೆ ಹಾಕಿದುದು ಕೂಡಲ ಸಂಗಮದಲ್ಲಿ, ಆ ನೀಲನಕ್ಷೆಯು ಕಾರ್ಯರೂಪಕ್ಕೆ ಬಂದುದು ಬಸವ ಕಲ್ಯಾಣದಲ್ಲಿ.

"ಕಪಿಲಸಿದ್ಧಮಲ್ಲಿಕಾರ್ಜುನಾ, ನಿಮ್ಮ ಸಂಗನ ಬಸವಣ್ಣ ಬಂದು
ಕಲ್ಯಾಣದಲ್ಲಿ ಮಹಾಮನೆಯ ಕಟ್ಟಿದಡೆ
ಮರ್ತ್ಯಲೋಕವೆಲ್ಲವೂ ಭಕ್ತಿಸಾಮ್ರಾಜ್ಯವಾಯಿತು"

ಎಂದು ಬಸವಯೋಗಿ ಸಿದ್ಧರಾಮೇಶ್ವರರು ಹೇಳುವಂತೆ, "ಅಯ್ಯಾ, ಭಕ್ತಿಗೆ ಬೀಡಾದುದು ಕಲ್ಯಾಣ 36 ವರ್ಷ, ಅನುಭವಕ್ಕೆ ಶಿವಸದನವಾದುದು 27 ವರ್ಷ" ಎಂದು ಧರ್ಮಪಿತರು ಸಾರುವಂತೆ ಬಸವ ಕಲ್ಯಾಣವು ವಿಕ್ರಮನಾಮ ಸಂವತ್ಸರ (ಕ್ರಿ.ಶ.1160) ದಿಂದ ರಾಕ್ಷಸನಾಮ ಸಂವತ್ಸರ (ಕ್ರಿ.ಶ.1196)ದ ವರೆಗೆ ಶ್ರೀ ಗುರು ಬಸವಣ್ಣನವರ ಪರುಷ ಪಾದದಿಂದ ಭಕ್ತಿಯ ಬೀಡಾಗಿತ್ತು. ಈ ಪವಿತ್ರ ಶರಣ ಭೂಮಿಯು ಇಂದು ನಮಗೆಲ್ಲ ಧರ್ಮಭೂಮಿ (Holy land). ಇಂಥ ಸುಕ್ಷೇತ್ರದಲ್ಲಿ ವರ್ಷಕ್ಕೊಮ್ಮೆಯಾದರೂ ಬಸವ ಭಕ್ತರು ಸಮಾವೇಶವಾಗಬೇಕೆಂದು 2002ನೆಯ ಇಸವಿಯಿಂದಲೂ ಕಲ್ಯಾಣಪರ್ವ ಎಂಬ ವಾರ್ಷಿಕ ಉತ್ಸವವನ್ನು ನಡೆಸಲಾಗುತ್ತಿದೆ. 2012ನೆಯ ಇಸವಿಯಲ್ಲಿ 11ನೆಯ ಕಲ್ಯಾಣ ಪರ್ವವು ಜರುಗಲಿದ್ದು, ಆಶ್ವಯುಜ ಮಾಸದ ತ್ರಯೋದಶಿ, ಚತುರ್ದಶಿ ಮತ್ತು ಹುಣ್ಣಿಮೆ ಯಂದು ಅಕ್ಟೋಬರ್ 27,28 ಮತ್ತು 29ರಂದು ನಡೆಯಲಿದೆ.

ಶರಣ(ಶನಿ)ವಾರ ದಿ. 27ರಂದು ಬೆಳಿಗ್ಗೆ 10–30ಕ್ಕೆ ಉದ್ಘಾಟನೆ ಮತ್ತು ಸಾಮೂಹಿಕ ಪ್ರಾರ್ಥನೆ, ಮಧ್ಯಾಹ್ನ 3–30ರಿಂದ 5–30ರವರೆಗೆ ಧಾರ್ಮಿಕ ರಸಪ್ರಶ್ನೆ ; ಸಂಜೆ -6–30ರಿಂದ ಚಿಂತನಗೋಷ್ಠಿ. ದಿ.28 ದೇವ(ಭಾನು) ವಾರದಂದು ಬೆಳಿಗ್ಗೆ 10–30ಕ್ಕೆ 108ಅಡಿ ಪುತ್ಥಳಿಯ ಉದ್ಘಾಟನೆ, ಮಧ್ಯಾಹ್ನ 3–30ರಿಂದ 5–30ರವರೆಗೆ ಆಶುಭಾಷಣ ಸ್ಪರ್ಧೆ, ಸಂಜೆ 6–30ರಿಂದ ಚಿಂತನಗೋಷ್ಠಿ, ದಿ.29 ಶಿವ(ಸೋಮ)ವಾರದಂದು ಅಕ್ಕನಾಗಲಾಂಬಿಕೆಯ ಪೌರ್ಣಿಮೆಯ ನಿಮಿತ್ತ ಬಸವ ಧರ್ಮ

ವಿಜಯೋತ್ಸವ ಕಾರ್ಯಕ್ರಮ, ಬಸವ ಭಾವಚಿತ್ರ ಮೆರವಣಿಗೆ ಶರಣರಿಂದ ಪಥ ಸಂಚಲನ, ನಂತರ ಅಲ್ಲಮಪ್ರಭು ಶೂನ್ಯಪೀಠಾರೋಹಣ ಮತ್ತು ಸಮಾರೋಪ ಸಮಾರಂಭ ಜರುಗಲಿವೆ.

108 ಅಡಿ ಬಸವ ಪುತ್ಥಳಿಯ ಅನಾವರಣ

ವಿಶ್ವಗುರು ಬಸವಣ್ಣನವರ ಕಾರಣಿಕೋತ್ಸವದ ದಿನ. 1-9-2004ರಂದು ನಾಂದಿ ಪೂಜೆಯೊಡನೆ 108ಅಡಿ ಪುತ್ಥಳಿಯ ನಿರ್ಮಾಣ ಕಾರ್ಯ ಆರಂಭವಾಯಿತು. ಅಂದಾಜು ವೆಚ್ಚ ಒಂದೂವರೆ ಕೋಟಿಯೊಡನೆ ಪ್ರಾರಂಭವಾದ ಪುತ್ಥಳಿ ನಿರ್ಮಾಣಕ್ಕೆ ಈಗಾಗಲೇ ಸುಮಾರು ನಾಲ್ಕು ಕೋಟಿ ವೆಚ್ಚವಾಗಿದೆ. ಅಂತಿಮ ಹಂತದ ಕೆಲಸ ನಡೆಯುತ್ತಿದ್ದು ಇನ್ನೂ ಅಪಾರ ಹಣದ ಆವಶ್ಯಕತೆ ಇದೆ. ಮೂರ್ತಿಯ ಉದ್ಘಾಟನೆ ಭಾನು(ದೇವ)ವಾರ ದಿ.28-10-2012ರಂದು ಬೆಳಿಗ್ಗೆ 11 ಗಂಟೆಗೆ ನೆರವೇರಲಿದೆ. ಇದೊಂದು ಐತಿಹಾಸಿಕ ಸನ್ನಿವೇಶವಾಗಿದ್ದು ಹೆಲಿಕಾಪ್ಟರಿನಿಂದ ಪುಷ್ಪವೃಷ್ಟಿ ನೆರವೇರಲಿದೆ. ಈ ಪವಿತ್ರ ಸೇವೆಯ ಕೈಂಕರ್ಯವನ್ನು ಬೀದರಿನ ರಾಜಕೀಯ ಧುರೀಣರಾದ ಶರಣ. ಸೂರ್ಯಕಾಂತ ಗುರುಪಾದಪ್ಪ ನಾಗಮಾರಪಳ್ಳಿ ವಹಿಸಿಕೊಂಡಿದ್ದಾರೆ. ಮಾತ್ರವಲ್ಲ, ನಡೆಯುವ ಬೃಹತ್ ದಾಸೋಹಕ್ಕೆ 75 ಕ್ವಿಂಟಾಲ್ ಅಕ್ಕಿಯನ್ನು ಕೊಡಿಸುವವರಿದ್ದು ಅಭಿನಂದನೆಗೆ ಪಾತ್ರರಾಗಿದ್ದಾರೆ. 108 ಅಡಿ ಪುತ್ಥಳಿಯ ಲೋಕಾರ್ಪಣ ಸಮಾರಂಭದಲ್ಲಿ ಹೆಚ್ಚಿನ ಜನ ಭಾಗಿಗಳಾಗಬೇಕೆಂದು ಕೋರುತ್ತೇವೆ.

ಕಲ್ಯಾಣ (ಗಣ) ಪರ್ವಕ್ಕೆ ಧನ ಸಹಾಯ

ಕಲ್ಯಾಣ ಎಂಬುದು ಒಂದು ಸ್ಥಳದ ಹೆಸರು; ಮತ್ತು ವಿಶ್ವಗುರು ಬಸವಣ್ಣನವರ ಧ್ಯೇಯವೇ ಎಲ್ಲ ಮಾನವರ ಲೇಸು -ಕಲ್ಯಾಣ. ಆದರ್ಶ ಕಲ್ಯಾಣ ರಾಜ್ಯ (Welfare state) ನಿರ್ಮಾಣವೇ ಅವರ ಹೋರಾಟದ ಗುರಿಯಾಗಿತ್ತು, ಗಣ ಎಂದರೆ ಸಮೂಹ, ಪರ್ವ ಎಂದರೆ ಹಬ್ಬ, ಶರಣ ಗಣವು ಶರಣ ಭೂಮಿ ಬಸವ ಕಲ್ಯಾಣದಲ್ಲಿ ನೆರೆದು ಆದಿ ಶರಣರ ಜೀವನ-ಸಾಧನೆ-ಸಂದೇಶಗಳನ್ನು ಕೊಂಡಾಡುವ ಹಬ್ಬ ಈ ಕಲ್ಯಾಣ ಪರ್ವ. ಅಂದು ಧರ್ಮಪಿತ ಬಸವಣ್ಣನವರು ಗಣಪರ್ವಗಳನ್ನು ಕಲ್ಯಾಣದಲ್ಲಿ ನಡೆಸುತ್ತಿದ್ದು, ಭಕ್ತರು ಅಂಗ, ವಂಗ, ಕಳಿಂಗ, ಗುರ್ಜರ, ಸಿಂಹಳ ಮುಂತಾದ ಭಾಗಗಳಿಂದೆಲ್ಲ ಸಮಾವೇಶವಾಗುತ್ತಿದ್ದುದಾಗಿ ಹರಿಹರ, ಸಿಂಗಿರಾಜ ಮುಂತಾದವರು ತಮ್ಮ ಕಾವ್ಯಗಳಲ್ಲಿ ಬಣ್ಣಿಸುತ್ತಾರೆ. ಅಂಥ ಗಣಪರ್ವವನ್ನು ಇಂದು ನೀವು ನಾವು ಮಾಡಿ ತೋರಿಸಬೇಕಾಗಿದೆ. ಅಕ್ಟೋಬರ್ 26ರ ರಾತ್ರಿಯಿಂದ ಅಕ್ಟೋಬರ್ 30 ರ ಬೆಳಗಿನವರೆಗೆ ಕಲ್ಯಾಣ ಪರ್ವದಲ್ಲಿ ಸಮಾವೇಶವಾಗುವ ಶರಣ ಬಂಧುಗಳಿಗೆ ವಸತಿ ಮತ್ತು ಪ್ರಸಾದದ ವ್ಯವಸ್ಥೆಯನ್ನು ಮಾಡಬೇಕಾಗುತ್ತದೆ. ಭವ್ಯವಾದ ಸಭಾ ಮಂಟಪ, ಶಾಮಿಯಾನಾ ಕೊಠಡಿಗಳು, ವಿಶಾಲವಾದ ಪ್ರಸಾದ (ಊಟ)ಮಂಟಪ ಮುಂತಾದವುಗಳ ವ್ಯವಸ್ಥೆ ಮಾಡಲು ಅಪಾರವಾದ ಹಣದ ಆವಶ್ಯಕತೆ ಇರುತ್ತದೆ. ದಾನಿಗಳು ಮುಂದೆ ಸೂಚಿಸಿದಂತೆ ಧನ ಸಹಾಯ ಮಾಡಬಹುದು.ಶರಣ ಬಂಧುಗಳು ಒಂದು ಹೊತ್ತಿನ ಪ್ರಸಾದ ದಾಸೋಹದ ವೆಚ್ಚವನ್ನು ಭರಿಸಲೂ ಅವಕಾಶ ಉಂಟು.

1. ಮಹಾಪೋಷಕರು	:	10000 ರೂ. ಮತ್ತು ಮೇಲೆ ಕೊಟ್ಟವರು
2. ಪೋಷಕರು	:	5000 ರೂ. ಮತ್ತು ಮೇಲೆ ಕೊಟ್ಟವರು
3. ದಾನಿಗಳು	:	2000 ರೂ. ಮತ್ತು ಮೇಲೆ ಕೊಟ್ಟವರು
4. ಹಿತೈಷಿಗಳು	:	1000 ರೂ
5. ಸ್ವಾಗತ ಸಮಿತಿ ಸದಸ್ಯತ್ವ	:	500 ರೂ
6. ಪ್ರತಿನಿಧಿ ಶುಲ್ಕ	:	150 ರೂ.

ಅನ್ನ ದಾಸೋಹಕ್ಕಾಗಿ ಭಕ್ತಿಪೂರ್ವಕ ಕಾಣಿಕೆಗಳನ್ನು ಶಕ್ತ್ಯಾನುಸಾರ ಕೊಡಬಹುದು.

ವಿ.ಸೂ. : ವಾರ್ಷಿಕ ಸಮಾವೇಶವಾದ ಕಲ್ಯಾಣಪರ್ವಕ್ಕೆ ತಮ್ಮ ಕೊಡುಗೆ ನಿರಂತರವಾಗಿ ಇರಲಿ ಎಂಬ ಇಷ್ಟವಿದ್ದವರು 5000/10000 ರೂಪಾಯಿಗಳ ಪುದುವಟ್ಟು (F.D) ಇಡಲು ದೇಣಿಗೆ ನೀಡಿದರೆ, ಈ ಪುದುವಟ್ಟಿನ ಬಡ್ಡಿಯ ಹಣವನ್ನು ಕಲ್ಯಾಣಪರ್ವದ ದಾಸೋಹಕ್ಕೆ ವಿನಿಯೋಗಿಸಲಾಗುವುದು. ರಸೀತಿ ಪುಸ್ತಕ, ಕರಪತ್ರಗಳನ್ನು ಪಡೆದು ದೇಣಿಗೆ ಸಂಗ್ರಹಿಸುವವರಿಗೂ ಅವಕಾಶವಿದೆ.

ಶರಣ ಭೂಮಿ ಬಸವ ಕಲ್ಯಾಣದಲ್ಲಿ ವಿವಿಧ ಯೋಜನೆಗಳು

ಬಸವ ಧರ್ಮ ಪೀಠ (ರಿ.) ಟ್ರಸ್ಟ್ ವತಿಯಿಂದ ಬಸವ ಕಲ್ಯಾಣದಲ್ಲಿ ಶರಣ ಸಂಸ್ಕೃತಿಯ ಪುನರುತ್ಥಾನ ಮಾಡಬೇಕೆಂದು ಸಂಕಲ್ಪಿಸಿ ದಿ.21 -12-2001 ರಂದು ರಾಷ್ಟ್ರೀಯ ಹೆದ್ದಾರಿ 9 ರಿಂದ ಬಸವ ಕಲ್ಯಾಣಕ್ಕೆ ಹೋಗುವ ಮುಖ್ಯರಸ್ತೆಯ ಬದಿಗೆ 3 ಎಕರೆ ಜಮೀನನ್ನು ಖರೀದಿಸಲಾಯಿತು. ಪುನಃ ಹದಿನೇಳೂವರೆ ಎಕರೆ ಖರೀದಿಸಿ ಬಸವ ಮಹಾಮನೆ ಎಂಬ ಹೆಸರಿನಲ್ಲಿ ಮಠವನ್ನು ಸ್ಥಾಪಿಸಿರುವುದೇ ಅಲ್ಲದೆ ನಿತ್ಯ ದಾಸೋಹ, ಹುಣ್ಣಿಮೆ ಕಾರ್ಯಕ್ರಮ ನಡೆಸಿಕೊಂಡು ಬರಲಾಗುತ್ತಿದೆ. 12ನೆಯ ಶತಮಾನದ ಧಾರ್ಮಿಕ ವೈಭವ 21ನೆಯ ಈ ಶತಮಾನದಲ್ಲಿ ನಡೆಯುವಂತೆ ಕಾರ್ಯೋನ್ಮುಖವಾಗಬೇಕಾಗಿದೆ. ಅದು ಶರಣರ ಸಂಕಲ್ಪ ಕೂಡ. ಹೇಗೆಂದರೆ ಬಸವಣ್ಣನವರು ಕಲ್ಯಾಣವನ್ನು ಗಡಿಪಾರಾಗಿ ಬಿಟ್ಟು ಹೋದ 770 ವರ್ಷಗಳ ನಂತರ ನಾವು ಬರುತ್ತೇವೆ ಎಂದು ಭವಿಷ್ಯವಾಣಿ ನುಡಿದಿದ್ದಾರೆ. ಶರಣರು ಮುಕ್ತಾತ್ಮರಾದ ಕಾರಣ ಅವರು ಶರೀರಧಾರಿಗಳಾಗಿ ಬರುವುದಿಲ್ಲ ; ಅವರ ಸಂದೇಶಗಳು ಪುನಃ ಪ್ರಚಾರಗೊಳ್ಳುತ್ತವೆ. ಅವರ ಸಂಕಲ್ಪಗಳು ಕಲ್ಯಾಣ ಕ್ರಾಂತಿಯಿಂದಾಗಿ ಅಪೂರ್ಣವಾಗಿ ಉಳಿದಿದ್ದವು, ಈಗ ಪೂರ್ಣಗೊಳ್ಳುವ ಕಾಲ ಬರುತ್ತದೆ ಎಂಬುದೇ ಅವರ ಸಂಕಲ್ಪದ ಮರ್ಮ. ಜಗ ಬದುಕಲಿ, ಜನ ಬದುಕಲಿ ಎಂದು ಆದಿ ಶರಣರು ವಚನಗಳನ್ನು ರಚಿಸಿದುದು ಮಾತ್ರವಲ್ಲ ವಚನ ಸಾಹಿತ್ಯವನ್ನು ನಾಶ ಮಾಡಬೇಕೆಂದು ಜಾತಿವಾದಿಗಳು ಪಣ ತೊಟ್ಟಾಗ, ತಮ್ಮ ಪ್ರಾಣವನ್ನು ಪಣಕ್ಕಿಟ್ಟು, ಹೋರಾಡಿ ವಚನ ವಾಙ್ಮಯವನ್ನು ರಕ್ಷಿಸಿದರು. ಆದಿ ಶರಣರ ಆ ಬಲಿದಾನದ ಋಣವನ್ನು ತೀರಿಸಬೇಕಾದ್ದು ಪ್ರತಿಯೊಬ್ಬ ಅನುಯಾಯಿಯ ಅಭಿಮಾನದ ಕರ್ತವ್ಯವಾಗಿದೆ.ಈ ಹಿನ್ನೆಲೆಯಲ್ಲಿ ಬಸವ ಧರ್ಮ ಪೀಠ ಟ್ರಸ್ಟಿನ ಬಸವ ಕಲ್ಯಾಣ ಶಾಖೆಯಲ್ಲಿ ಹಲವಾರು ಯೋಜನೆಗಳನ್ನು ರೂಪಿಸಲಾಗಿದೆ. ಕಾಣಿಕೆ ನೀಡುವವರಿಗೆ ಕೆಳಗಿನಂತೆ ಅವಕಾಶವಿದೆ .

1. **ನಿತ್ಯ ಪೂಜಾ ನಿಧಿ :** ಶ್ರೀ ಗುರು ಬಸವಣ್ಣನವರ ಅರ್ಚನೆಗಾಗಿ ಪೂಜಾ ನಿಧಿ ಸಂಗ್ರಹ ; ದಾನಿಗಳ ಹೆಸರಿನಲ್ಲಿ ಪೂಜೆ-1000ರೂ.
2. **ದಾಸೋಹ ನಿಧಿ :** ದಾಸೋಹಿಗಳು ಕೊಡುವ ಹಣವನ್ನು ನಿಧಿಯಾಗಿ ಇಟ್ಟು ಅದರ ಬಡ್ಡಿಯ ಹಣದಿಂದ ನಿತ್ಯ ದಾಸೋಹ ಏರ್ಪಡಿಸುವುದು. 1500 ರೂ.
3. **ಬಸವ ಮಂಟಪ ನಿರ್ಮಾಣ :** ಸಾಮೂಹಿಕ ಪ್ರಾರ್ಥನೆಗಾಗಿ ಬಸವ ಮಂಟಪ, ಭವ್ಯವಾದ ಪ್ರಾರ್ಥನಾ ಮಂದಿರ ಕಟ್ಟುವುದು.
   "ಬಸವ ಮಂಟಪ " ನಿರ್ಮಾಣಕ್ಕೆ 10,000 ರೂ. ಮತ್ತು ಮೇಲೆ ದೇಣಿಗೆ ಕೊಟ್ಟವರ ಹೆಸರನ್ನು ನಾಮಫಲಕದಲ್ಲಿ ಬರೆಸಲಾಗುವುದು.
4. **ಬಸವ ಧ್ಯಾನ ಮಂಟಪ :** ಬಸವ ಕಲ್ಯಾಣದಲ್ಲಿ ಲಭ್ಯವಿರುವ ಲಾಟರೈಟ್ ಶಿಲಾಪದರ ಬಳಸಿಕೊಂಡು ಗವಿಯನ್ನು ಕೆತ್ತಿಸುವುದು.
5. **ಶರಣ ಧಾಮ :** ಬರುವ ಯಾತ್ರಿಕರಿಗಾಗಿ ಉಳಿಯಲು ವಸತಿ ಗೃಹವನ್ನು ನಿರ್ಮಾಣ ಮಾಡುವುದು. ಸಿಂಗಲ್ ಕೋಣೆ ನಿರ್ಮಾಣಕ್ಕೆ 1,00,000 (ಒಂದು ಲಕ್ಷ) ರೂ. ಡಬ್ಬಲ್ ಕೋಣೆ ನಿರ್ಮಾಣಕ್ಕೆ 1,50,000 (ಒಂದೂವರೆ ಲಕ್ಷ)ರೂ.ದಂತೆ ದಾನಿಗಳಿಂದ ಪಡೆಯಲಾಗುವುದು. ಒಂದು ಬಸ್ ಜನ ಉಳಿಯುವಂತೆ ಸಾಮೂಹಿಕ ವಸತಿ ಗೃಹ (dormitory) ಕಟ್ಟಿಸಲು 2,00,000 (ಎರಡು ಲಕ್ಷ)ರೂ.ಗಳು.
6. **108 ಅಡಿ ಎತ್ತರದ ಬಸವಣ್ಣನವರ ಬೃಹತ್ ಪುತ್ಥಳಿ ನಿರ್ಮಾಣ :** ಅಂದಾಜು ವೆಚ್ಚ 4ಕೋಟಿ ರೂಪಾಯಿಗಳು. ರೂ. 11,000 ಮತ್ತು ಮೇಲೆ ಕೊಟ್ಟವರ ಹೆಸರನ್ನು ಬೋರ್ಡಿನಲ್ಲಿ ಬರೆಸಲಾಗುವುದು. ರೂ. 25,000(ಇಪ್ಪತ್ತೈದು ಸಾವಿರ) ಮತ್ತು ಮೇಲೆ ಕೊಟ್ಟವರ ಹೆಸರನ್ನು ಗ್ರಾನೈಟ್ ಕಲ್ಲಿನಲ್ಲಿ ಸಾಮೂಹಿಕವಾಗಿ ಕೆತ್ತಿಸಲಾಗುವುದು. ರೂ. 50,000 (ಐವತ್ತು ಸಾವಿರ)ಮತ್ತು ಮೇಲೆ ಕೊಟ್ಟವರ ಹೆಸರನ್ನು ಗ್ರಾನೈಟ್ ಕಲ್ಲಿನಲ್ಲಿ ಕೆತ್ತಿಸಲಾಗುವುದು. ಒಂದು

ಲಕ್ಷ ರೂ. ಮತ್ತು ಮೇಲೆ ಕೊಟ್ಟವರ ಹೆಸರನ್ನು ಗ್ರಾನೈಟ್ ಕಲ್ಲಿನ ಮೇಲೆ ಕೆತ್ತಿಸಲಾಗುವುದಲ್ಲದೆ ಅವರ ಭಾವಚಿತ್ರವನ್ನು ಹಾಕಲಾಗುವುದು. 2004ರ ಸೆಪ್ಟಂಬರ್ 1 ರಂದು ಬೃಹತ್ ಬಸವ ಪುತ್ಥಳಿಯ ನಿರ್ಮಾಣಕ್ಕೆ ನಾಂದಿ ಪೂಜೆ ನೆರವೇರಿಸಲಾಗಿದೆ. ಈಗ ಮೂರ್ತಿಯ ಕೆಲಸವು 90%ಭಾಗ ಪೂರೈಸಿದೆ ಎಂದು ತಿಳಿಸಲು ಹೆಮ್ಮೆ ಎನಿಸುತ್ತಿದೆ. ಕೆಲಸವು ತ್ವರಿತಗತಿಯಲ್ಲಿ ಸಾಗಿರುವುದರಿಂದ ಹಣದ ಆವಶ್ಯಕತೆ ಬಹಳಷ್ಟಿದೆ.

7. **108 ಸೋಪಾನದ ಯೋಜನೆ :** ಗುರು ಬಸವಣ್ಣನವರ 108 ಅಡಿ ಪುತ್ಥಳಿಯ ಮುಂಭಾಗದಲ್ಲಿ ಏರಲು, ಇಳಿಯಲು ಮೆಟ್ಟಲನ್ನು ಮಾಡಲಾಗುತ್ತಿದೆ. ಏರಲು 108 ಇಳಿಯಲು 108 ಹೀಗೆ ಒಟ್ಟು 216 ಸೋಪಾನಗಳಾಗುತ್ತವೆ. ಅಳತೆ 10 ಅಡಿ ಉದ್ದ 8 ಅಂಗುಲ ಎತ್ತರ, 1 ಅಡಿ ಅಗಲ - ಈ ಮೆಟ್ಟಲುಗಳಿಗೆ ಗ್ರಾನೈಟನ್ನು ಹಾಕಿಸುವ ಅಪೇಕ್ಷೆ ಇದೆ. 8 ಅಂಗುಲ ಎತ್ತರದ ಕಲ್ಲಿನ ಮೇಲೆ ದಾನಿಗಳ ಹೆಸರನ್ನು ಕೆತ್ತಿಸಲಾಗುವುದು. ಈ ಸೋಪಾನ ಯೋಜನೆಗೆ ಒಂದು ಮೆಟ್ಟಲಿಗೆ 15000 (ಹದಿನೈದು ಸಾವಿರ) ಕೊಟ್ಟರೆ ಧನ ದಾಸೋಹಿಗಳ ಹೆಸರನ್ನು ಗ್ರಾನೈಟ್ 'ಕಲ್ಲಿನ ಮೇಲೆ ಕೆತ್ತಿಸಲಾಗುವುದು. ಶರಣ ಬಂಧುಗಳು ಸ್ವಯಂ ಪ್ರೇರಣೆಯಿಂದ ದೇಣಿಗೆ ನೀಡಲು ಮುಂದಾಗಬೇಕೆಂದು ಕೋರುತ್ತೇವೆ.

8. **ಜೀವನ ಚರಿತ್ರೆಯ ಚಿತ್ರಣ :** ಗುರು ಬಸವ ಮೂರ್ತಿಯ ಕೆಳಗಿನ ಪೀಠದಲ್ಲಿ 24 ಅಡಿ ಎತ್ತರದ ಎರಡು ಅಂತಸ್ತಿನ ಕಟ್ಟಡವಿದ್ದು ಅದರಲ್ಲಿ ಗುರು ಬಸವಣ್ಣನವರ ಸಮಗ್ರ ಜೀವನದ ಪರಿಚಯ ಮಾಡಿಕೊಡಲಾಗುವುದು. ಅವರ ಜೀವನದ 32 ಪ್ರಸಂಗಗಳನ್ನು ಆಯ್ಕೆ ಮಾಡಿದ್ದು ಅವುಗಳ 3ಡಿ ಚಿತ್ರಣ ಮಾಡಲಾಗುವುದು. ಒಂದೊಂದು ಚಿತ್ರಣಕ್ಕೆ ಒಂದೂವರೆ ಲಕ್ಷ ರೂ.ಗಳ ವೆಚ್ಚವಾಗುತ್ತಿದ್ದು ಕೊಡುವ ಧನ ದಾಸೋಹಿಗಳ ಹೆಸರಿನ ನಾಮಫಲಕ ಹಾಕಿ, ಅವರ ಭಾವ ಚಿತ್ರವನ್ನು ಆ ಚಿತ್ರದ ಕೋಣೆಯ ಮುಂಭಾಗದಲ್ಲಿ ಪ್ರದರ್ಶಿಸಲಾಗುವುದು. ಈಗಾಗಲೇ ಆರೇಳು ದಾನಿಗಳು ಕೊಟ್ಟಿದ್ದು ಇನ್ನೂ ಬಹಳಷ್ಟಕ್ಕೆ ಅವಕಾಶವಿದೆ. ಆದ್ದರಿಂದ ಈ ಅಪರೂಪದ ಕೊಡುಗೆಗೆ ಮುಂದಾಗಬೇಕೆಂದು ಸೂಚಿಸುತ್ತೇವೆ.

9. **ವಿಶ್ವಗುರು ಬಸವಣ್ಣನವರು ಮತ್ತು ಅವರ ಸಮಕಾಲೀನ ಶರಣರನ್ನು ನೆನಪಿಸುವಂತೆ ಒಂದು ಬೃಹತ್ ಸ್ಮಾರಕ ರಚನೆ ಇತ್ಯಾದಿ.** ಜನರ ನೆರವು ಸಿಕ್ಕಿದಂತೆ ಇನ್ನೂ ಹಲವಾರು ಯೋಜನೆಗಳನ್ನು ಹಾಕಲಾಗುವುದು. ಈಗಾಗಲೇ ಕೊಳವೆ ಭಾವಿ ಮತ್ತು ತೆರೆದ ಭಾವಿ ತೋಡಿಸಲಾಗಿದೆ. ನೀರಿನ ಟ್ಯಾಂಕ್‌ಗಳು, ಕಾರ್ಯಾಲಯ ಕಟ್ಟಡ , ಬಸವಾಲಯ ಪೂರ್ಣಗೊಂಡಿವೆ. ಆದ್ದರಿಂದ ಸಹೃದಯರು ಆದಷ್ಟು ಬೇಗನೆ ಉದಾರವಾಗಿ ಕಾಣಿಕೆಯನ್ನು ಸಲ್ಲಿಸಿ ಕೆಲಸವು ತ್ವರಿತಗತಿಯಲ್ಲಿ ಸಾಗುವಂತೆ ಪ್ರೋತ್ಸಾಹಿಸಬೇಕೆಂದು ಕೋರುತ್ತೇವೆ. ಶರಣ ಬಂಧುಗಳೇ, ನಿಮ್ಮ ಗಳಿಕೆಯ ಒಂದು ಪಾಲನ್ನು ಗುರು-ಲಿಂಗ-ಜಂಗಮದ ದಾಸೋಹಕ್ಕೆ ಸಲ್ಲಿಸುವುದು ನಿಮ್ಮ ಆದ್ಯ ಕರ್ತವ್ಯವೆಂದು ತಿಳಿದು ಉದಾರವಾಗಿ ಕಾಣಿಕೆ ಸಲ್ಲಿಸಿರಿ. ಬಸವ ಧರ್ಮ ಪೀಠದ ಧ್ಯೇಯೋದ್ದೇಶ ಪೂರೈಕೆಗೆ ನೀವು ಸಲ್ಲಿಸುವ ಕಾಣಿಕೆಯನ್ನು ಕೆಳಗಿನ ಮೂರು ವಿಳಾಸಗಳಲ್ಲಿ ಯಾವ ವಿಳಾಸಕ್ಕೂ ಕಳಿಸಬಹುದು.

ಇನ್‌ಕಮ್ ಟ್ಯಾಕ್ಸದಲ್ಲಿ 80ಜಿ ರಿಯಾಯಿತಿಯ ಸೌಲಭ್ಯವೂ ಇದೆ.

ಸಂಪರ್ಕಿಸುವ ವಿಳಾಸಗಳು

ಬಸವ ಧರ್ಮ ಪೀಠ (ರಿ.)
ಬಸವ ಮಂಟಪ, 2035
20ನೆಯ ಮುಖ್ಯರಸ್ತೆ, 2ನೇ ಬ್ಲಾಕ್
ರಾಜಾಜಿನಗರ, ಬೆಂಗಳೂರು-560010
☎:080-22923736/9663385657

ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿ
ಕಾರ್ಯಾಧ್ಯಕ್ಷೆ, ಬಸವ ಧರ್ಮ ಪೀಠ (ರಿ.)
ಬಸವ ಮಹಾಮನೆ, ಬಸವ ಕಲ್ಯಾಣ-585 327
ತಾ-ಬಸವಕಲ್ಯಾಣ, ಜಿ-ಬೀದರ್
☎: 08481-252856/9448732456

ಸಂಪಾದಕೀಯ :

ಶ್ರೀ ರಾಮನು ಮರ್ಯಾದಾ ಪುರುಷೋತ್ತಮನೆ ?

ಉದಯ ದೂರದರ್ಶನ ವಾಹಿನಿಯಲ್ಲಿ 'ಸೀತೆ' ಎಂಬ ಒಂದು ಧಾರಾವಾಹಿ ಬರುತ್ತಿತ್ತು. ಈಗಲೂ ಆ ಶೀರ್ಷಿಕೆಯ ಧಾರಾವಾಹಿ ಬರುತ್ತಿದೆಯಾದರೂ ಸೀತೆಯ ಕಥೆ ಮುಗಿದು ದಶಾವತಾರಗಳ ಕಥೆ ಬರುತ್ತಲಿದೆ. ಕಥೆಯುದ್ದಕ್ಕೂ ಶ್ರೀರಾಮನನ್ನು ವೈಭವೀಕರಿಸಲಾಗಿದೆ, ಶೀರ್ಷಿಕೆಯ ಹಾಡಿನಲ್ಲಿ ಸೀತೆಯನ್ನು ಲೋಕಮಾತೆ ಎಂದು ಹೊಗಳಲಾಗಿದೆ. ಲೋಕಮಾತೆ ಎನ್ನಲು ಆಕೆ ಜ್ಞಾನಿಯೆ? ಯೋಗಿಣಿಯೆ ? ಆಕೆಯ ಸಾಧನೆ ಏನಿದೆ ? ಸಂದೇಶವೇನಿದೆ ? ಆದರ್ಶವೇನಿದೆ ? ಆದರ್ಶ ಪತ್ನಿ ಮತ್ತು ಆದರ್ಶ ತಾಯಿ ಎಂಬ ವಿಶೇಷಣಗಳನ್ನು ಆಕೆಗೆ ಕೊಡಬಹುದು. ಅನಾಥ ಮಗುವಾಗಿ ಸಿಕ್ಕ ಸೀತೆ ಜನಕ ಮಹಾರಾಜನ ಪ್ರೇಮದ ಪುತ್ರಿಯಾಗಿ ರಾಜಕುಮಾರಿಯಾಗಿ ಬೆಳೆದರೂ ಪತಿಯು ವನವಾಸಕ್ಕೆ ಹೊರಟಾಗ ತಾನೂ ಹೊರಟು ನಿಂತುದು ಒಂದು ಆದರ್ಶವೆ. ಆದರೆ ಆಕೆ ಒಬ್ಬ ಸಾಮಾನ್ಯ ಮಹಿಳೆಯಂತೆ ಬಂಗಾರ ವರ್ಣದ ಜಿಂಕೆಯನ್ನು ಕಂಡು ಅದು ತನಗೆ ಬೇಕೆಂದು ಹಠ ಹಿಡಿದುದು ಮುಂದಿನ ದುರಂತಕ್ಕೆ ನಾಂದಿಯಾಯಿತಲ್ಲವೆ ? ಈಗಿನ ಅನೇಕ ಮಹಿಳೆಯರು ಸೀರೆ, ಆಭರಣಗಳಿಗಾಗಿ ಹಠ ಹಿಡಿದು ಪತಿಯನ್ನು ಪೀಡಿಸಿದಂತೆಯೇ ಅದೂ ಅಲ್ಲವೆ ?

ಪರಮ ಪತಿವ್ರತೆಯಾಗಿ ಪತಿಯ ನೆನಪಿನಲ್ಲಿಯೇ, ಬರುವನೆಂಬ ನಿರೀಕ್ಷೆಯಲ್ಲಿಯೇ ಸುದೀರ್ಘ ಅವಧಿಯನ್ನು ಅಶೋಕವನದಲ್ಲಿ ಕಳೆದ ಸೀತೆಯ ಸಹನೆಯನ್ನು ಮೆಚ್ಚಿಕೊಳ್ಳಬೇಕು. ಆದರ್ಶ ಪತ್ನಿಯಾದ ಸೀತೆ ಆದರ್ಶ ತಾಯಿಯೂ ಅಹುದು. ಶ್ರೀರಾಮನು ಲಕ್ಷ್ಮಣನಿಗೆ ಆದೇಶ ನೀಡಿ ತುಂಬುಗರ್ಭಿಣಿ ಸೀತೆಯನ್ನು ಕಾಡಿನಲ್ಲಿ ಬಿಟ್ಟು ಬರುವಂತೆ ಮಾಡಿದಾಗ ಆಕೆ ಹತಾಶಳಾಗಿ ಆತ್ಮಹತ್ಯೆ ಮಾಡಿಕೊಳ್ಳದೆ ತನ್ನ ಗರ್ಭದಲ್ಲಿರುವ ಜೀವದ ಬಗ್ಗೆ ಮರುಕ ತಾಳಿ ಬದುಕಿ ಉಳಿದುದು ಮೆಚ್ಚಿಕೊಳ್ಳಬೇಕಾದ ಸಂಗತಿ ಮತ್ತು ಇಂಥ ಸಂಕಷ್ಟ ಎದುರಾದ ಮಹಿಳೆಯರಿಗೆ ಮಾರ್ಗದರ್ಶನ ಮಾಡುವಂಥದು. ನಂತರವೂ ತಾನು ಹೆತ್ತ ಮಕ್ಕಳನ್ನು ಸರಿಯಾದ ರೀತಿಯಲ್ಲಿ ಮಾರ್ಗದರ್ಶನ ನೀಡಿ ಬೆಳೆಸಿದ್ದು ಅನುಕರಣೀಯ ಆದರ್ಶ. ಇಂದು ಸಹ ಎಷ್ಟೋ ಮಹಿಳೆಯರು ಚಿಕ್ಕವಯಸ್ಸಿನಲ್ಲಿಯೇ ವಿಧವೆಯರಾಗಿ, ಪತಿಯಿಂದ ಪರಿತ್ಯಕ್ತರಾಗಿ ಬಾಳುವರು. ಮಕ್ಕಳನ್ನು ಹೊಂದಿದ ಇವರು ಹತಾಶರಾಗದೆ ಮಕ್ಕಳ ಭವಿಷ್ಯವನ್ನು ರೂಪಿಸಬೇಕು. ಇಂಥವರಿಗೆ ಸೀತೆಯು ಒಂದು ಮಾದರಿಯಾಗಿ ನಿಲ್ಲುವಳು.

ಸೀತೆ ಒಬ್ಬ ದುರಂತ ನಾಯಕಿ, ಬದುಕಿನುದ್ದಕ್ಕೂ ದುಃಖವನ್ನೇ ಉಂಡವಳು. ವೈದಿಕ ವಿಚಾರಧಾರೆ ಪ್ರಕಾರ ಪತ್ನಿಯು ಪತಿಯ ಬಗ್ಗೆ ಸಂಶಯ ಪಡಬೇಕಾಗಿಲ್ಲ. ಆದರೆ ಪತಿಯು ತನ್ನ ಪತ್ನಿಯ ಶೀಲದ ಬಗ್ಗೆ ಸಂಶಯ ಪಡಬಹುದು. ಮೊದಲನೆ ಬಾರಿ, ರಾವಣನ ಸಂಹಾರದ ಬಳಿಕ ಸೀತೆಯ ಪಾವಿತ್ರ್ಯತೆಯ ಬಗ್ಗೆ ಪರೀಕ್ಷೆ ನಡೆಸಿದಾಗ ಆಕೆಗೆ ಅಷ್ಟು ಆಘಾತವಾಗಲಿಲ್ಲ. ಆದರೆ ಕಡೆಯಲ್ಲಿ ವಾಲ್ಮೀಕಿ ಆಶ್ರಮದಲ್ಲಿ ಮಕ್ಕಳನ್ನು ಹೆತ್ತು, ಬೆಳೆಸಿ, ದೊಡ್ಡವರನ್ನು ಮಾಡಿದಾಗ ಶ್ರೀರಾಮನು ಪತ್ನಿಯನ್ನು ನೋಡಿದ ಸಂತೋಷಕ್ಕಿಂತಲೂ ಪುನಃ ಆಕೆಯು ತನ್ನ ಪಾವಿತ್ರ್ಯವನ್ನು ಸಿದ್ಧಪಡಿಸಬೇಕೆಂದು ಕೇಳಿದಾಗ ಸೀತೆಗಾದ ಆಘಾತ ಅಷ್ಟಿಷ್ಟಲ್ಲ. ಅದನ್ನು ಸಹಿಸುವ ಶಕ್ತಿ ಆಕೆಗೆ ಉಳಿಯಲಿಲ್ಲ. ಹೀಗಾಗಿ ಸೀತೆಯು ಭೂಮಿಯ ಗರ್ಭವನ್ನು ಸೇರಬಯಸಿದಳು. ಅರ್ಥಾತ್ ಸಾವಿಗೆ ಶರಣಾದಳು. ಈ ದೃಶ್ಯ ನೋಡುವಾಗ ನನಗೆ ಸೀತೆ ಕುರಿತು ಕಣ್ಣೀರು ಉಕ್ಕಿದರೆ ರಾಮನ ಕುರಿತು ಕೋಪ ಉಕ್ಕಿತು. ಸೀತೆಯ ತ್ಯಾಗ, ಮನಸ್ಥಿತಿ ಅರಿಯದ ಕ್ರೂರಿ ಆತ ಎನ್ನಿಸಿತು. ವಂಶದ ಮರ್ಯಾದೆಗಾಗಿ ಪಿತೃವಾಕ್ಯವನ್ನು ಪರಿಪಾಲನೆ ಮಾಡಬಯಸಿ ವನವಾಸಕ್ಕೆ ಹೋಗಿದ್ದೇನೋ

ಸರಿ. ಆದರೆ ರಘು ವಂಶದ ಮರ್ಯಾದೆ ಕಾಪಾಡಬೇಕೆಂದು ಒಬ್ಬ ಅನಾಮಿಕ ಅಗಸನ ಮಾತು ಕೇಳಿ ತುಂಬು ಗರ್ಭಿಣಿ ಸೀತೆಯನ್ನು ಕಾಡಿಗೆ ಅಟ್ಟಿದ್ದು ಅಮಾನವೀಯವಲ್ಲವೇ? ಆದರ್ಶ ಪತಿಯೇ ಆಗಿದ್ದಿದ್ದರೆ ಪತಿಯನ್ನು ಸೀತೆ ವನವಾಸಕ್ಕೆ ಹಿಂಬಾಲಿಸಿದಂತೆ ತಾನೂ ಸೀತೆಯನ್ನು ಹಿಂಬಾಲಿಸಿ ಆಕೆಯ ಸಂರಕ್ಷಣೆ ಮಾಡುತ್ತಿದ್ದ. ಹೆಣ್ಣೆಂದರೆ ಎಷ್ಟು ಸುಲಭವಾಗಿ ಪರಿತ್ಯಜಿಸುವ ವಸ್ತು ಎಂಬುದು ಇಲ್ಲಿ ಗೋಚರವಾಗುತ್ತದೆ.

ಶ್ರೀರಾಮನಿಗೆ ಪುರುಷೋತ್ತಮ-ಪುರುಷರಲ್ಲಿ ಉತ್ತಮ ಎಂಬ ಬಿರುದು ಬೇರೆ. ಎಲ್ಲ ಪುರುಷರೂ ಹೀಗೆ ಪಿಸುಣರ ಮಾತು ಕೇಳಿ ಹೆಂಡತಿಯ ಮೇಲೆ ಸಂಶಯ ಪಟ್ಟರೆ ಸಂಸಾರಗಳು ಉಳಿಯುವುದಾದರೂ ಹೇಗೆ ?

ಶ್ರೀ ರಾಮನು ಹೀಗೆ ಆದರ್ಶ ಪುರುಷನೂ ಅಲ್ಲ, ಆದರ್ಶ ಪತಿಯೂ ಅಲ್ಲ. ಶೂದ್ರನಾದ ಶಂಭುಕ ತಪಸ್ಸು ಮಾಡಿದ, ಅದಕ್ಕಾಗಿ ಧರ್ಮಶಾಸ್ತ್ರದ ಉಲ್ಲಂಘನೆಯಾಯಿತು ಎಂದು ಬ್ರಾಹ್ಮಣನೊಬ್ಬ ಹೇಳಿದಾಗ ರಾಮ ಆ ಶಂಭುಕನನ್ನು ಬಾಣಬಿಟ್ಟು ಕೊಂದ. ವೈದಿಕರು-ರಾಮಬಾಣ ಎಂದು ವೈಭವೀಕರಿಸಿ ಹೇಳುವ ರಾಮನ ಬಾಣವು ವಾಲಿಯನ್ನು ಕೊಲ್ಲಲಾಗದೆ ಇದ್ದಾಗ, ಮರೆಯಲ್ಲಿ ನಿಂತು ಮೋಸದಿಂದ ವಾಲಿಯನ್ನು ಕೊಲ್ಲಲಾಯಿತು. ಶ್ರೀರಾಮನೊಬ್ಬ ಸಂತನೆ ? ಸಂತ, ಮಹಾತ್ಮರಲ್ಲಿರುವ ದಯೆ, ಮಾನವೀಯತೆ ಎಳ್ಳಷ್ಟು ಕಾಣಬರದು. ಸಂತರು ಹೃದಯ ಪರಿವರ್ತನೆ ಮಾಡಬಯಸುವರೇ ವಿನಾ ಬರೀ ಕೊಲ್ಲುವ ಕೆಲಸವನ್ನು ಮಾಡರು. ಸಂತ, ಮಹಾತ್ಮರು ಆತ್ಮ ಸಾಕ್ಷಿಯಾಗಿ ಬದುಕುವರೇ ವಿನಾ ಲೋಕದ ಕೀರ್ತಿವಾರ್ತೆಗಾಗಿ ಅಲ್ಲ, ಜನ ಮನ್ನಣೆಗಾಗಿ ಅಲ್ಲ.

ಸೀತೆಯ ಸಂಕಷ್ಟವನ್ನು ಧಾರಾವಾಹಿಯಲ್ಲಿ ನೋಡಿದಾಗಲಷ್ಟೇ ಅಲ್ಲ, ತುಂಬು ಗರ್ಭಿಣಿಯನ್ನು ಕಾಡಿಗೆ ಅಟ್ಟಿದ ಕ್ರೂರ ಪ್ರಸಂಗವನ್ನು ನೆನಪಿಸಿಕೊಂಡಾಗಲೆಲ್ಲ ನನ್ನ ಹೃದಯ ಮಿಡಿದು, ಕಣ್ಣು ಸಜಲವಾಗುತ್ತವೆ. ಹೀಗಾಗಿ ಸಂವೇದನಾ ಪೂರ್ಣ ಹೃದಯವಿದ್ದವರಾರೂ ಶ್ರೀರಾಮನನ್ನು ಆತನ 'ಮರ್ಯಾದಾ' ಕೃತಿಗಾಗಿ ಕ್ಷಮಿಸರು. ಬಹುಶಃ ಶ್ರೀರಾಮನ ಈ 'ಮರ್ಯಾದಾ' ಆದರ್ಶದಿಂದ ಪ್ರೇರಿತರಾಗಿಯೋ ಏನೋ ಉತ್ತರ ಭಾರತದ ಹಲವಾರು ಜಾತಿಗಳವರು ತಮ್ಮ ಮಕ್ಕಳು ಅನ್ಯಜಾತಿಯವರನ್ನು ಪ್ರೀತಿಸಿದರೆ, ಮದುವೆಯಾದರೆ ತಮ್ಮ ವಂಶದ ಗೌರವಕ್ಕಾಗಿ ನಿರ್ದಯವಾಗಿ ತಮ್ಮ ಮಕ್ಕಳ ಹತ್ಯೆ ಮಾಡುವುದುಂಟೇನೊ ! ಈ ದೃಷ್ಟಿಯಿಂದ ರಾಮಾಯಣ ಮಹಾಭಾರತದ ಕಥೆಗಳು ಇಂದಿನ ನಮ್ಮ ಸಂವಿಧಾನದ ಉಲ್ಲಂಘನೆಯಾಗಿಯೇ ತೋರಿ ಬರುತ್ತವೆ. ವಚನ ಸಾಹಿತ್ಯವು ನಮ್ಮ ಇಂದಿನ ಸಂವಿಧಾನದ ಪೂರ್ವ ಪೀಠಿಕೆಯಂತಿದೆ ಎನ್ನಲು ಅಭಿಮಾನವೆನಿಸುತ್ತದೆ.

ಮಾತಾಜಿ ಎಂಬ ಮೂರಕ್ಷರ

ಮಾ ಎಂಬಲ್ಲಿ ಮಾನವೀಯತೆಯು ಕುಡಿಯೊಡೆದಿತ್ತು
ತಾ ಎಂಬಲ್ಲಿ ತಾನಾರೆಂಬ ಅರಿವು ಸ್ವಯವಾಯಿತ್ತು
ಜಿ ಎಂಬಲ್ಲಿ ಜೀವನಕ್ಕೊಂದು ಗುರಿ ದೊರೆಯಿತ್ತು.
ಇಂತೀ ಮಾತಾಜಿ ತ್ರಯಕ್ಷರವೆನ್ನ ಬಸವ ತತ್ತ್ವಾಚರಣೆ ಮಾಡಿಸಿತ್ತಾಗಿ
ನಾನು ಮಾತಾಜಿ ಮಾತಾಜಿ ಮಾತಾಜಿ
ಎನ್ನುತ್ತಿರ್ದೆನಯ್ಯಾ ಬಸವ ಕಂದ ಪ್ರಿಯ ಸರ್ವೇಶ್ವರಾ.

'ಬಸವ ಕಂದ'
ಸರೋಜಮ್ಮ ನಾಗರಾಜು

ಡಾ॥ ಎಂ. ಚಿದಾನಂದಮೂರ್ತಿಯವರಿಗೆ ಪ್ರಶ್ನೆಗಳು

1. ಮಾನವ ಸಮಾಜವನ್ನು ವೈದಿಕ ಧರ್ಮ ನಾಲ್ಕು ವರ್ಣಗಳಲ್ಲಿ ವಿಂಗಡಿಸಿದೆ. ದೇವಸ್ಥಾನ ಸಂಸ್ಕೃತಿ, ಮೂರ್ತಿಪೂಜೆ, ಪುರೋಹಿತರ ಮೂಲಕ ಪೂಜೆ, ಚತುರ್ವರ್ಣ, ಬಹುದೇವತೋಪಾಸನೆ, ಉದ್ಯೋಗದಲ್ಲಿ ಮೇಲು-ಕೀಳು, ಹೋಮ-ಹವನ, ಯಜ್ಞ-ಯಾಗ, ದ್ವಿಜರಿಗೆ ಮಾತ್ರ ಉಪನಯನ, ಶೂದ್ರರು, ಅಸ್ಪೃಶ್ಯರು, ಎಲ್ಲ ವರ್ಣಗಳ ಸ್ತ್ರೀಯರಿಗೆ ಉಪನಯನವಿಲ್ಲ. ವಿವಾಹದಲ್ಲಿ ಅಗ್ನಿಸಾಕ್ಷಿ, ತೀರ್ಥಯಾತ್ರೆ, ವಾಸ್ತು, ಜ್ಯೋತಿಷ್ಯ, ಮುಹೂರ್ತ, ಸೂತಕಗಳಲ್ಲಿ ನಂಬಿಕೆ ಇತ್ಯಾದಿ ಹಿಂದು ಧರ್ಮದ ಲಕ್ಷಣಗಳು. ಸಾಮಾನ್ಯವಾಗಿ ವೈದಿಕ ಧರ್ಮ, ವರ್ಣಾಶ್ರಮ ಧರ್ಮವನ್ನು ಅನುಸರಿಸುವವರಿಗೆ ಹಿಂದುಗಳೆಂದು ಕರೆಯಲಾಗುತ್ತಿದೆ. ಆದರೆ ಡಾ॥ ಎಂ. ಚಿ.ಮೂರವರು ವೀರಶೈವರನ್ನು ಹಿಂದುಗಳೆಂದು ಹೇಳಿರುವುದರಿಂದ ಅವರು ವೈದಿಕ ವರ್ಣಾಶ್ರಮ ಧರ್ಮಕ್ಕೆ ಸೇರಿದವರೆಂದಾಯಿತು. ಹಾಗಾದರೆ ಡಾ॥ ಎಂ. ಚಿದಾನಂದಮೂರ್ತಿಯವರು ಈ ವರ್ಣಾಶ್ರಮಗಳಲ್ಲಿ ಯಾವ ವರ್ಣಕ್ಕೆ ಸೇರಿದವರು ? ವೀರಶೈವರಲ್ಲಿ ಬ್ರಾಹ್ಮಣರು ಯಾರು? ಕ್ಷತ್ರಿಯರು ಯಾರು? ಶೂದ್ರರು ಯಾರು? ಎಂಬುದನ್ನು ಡಾ॥ ಚಿಮೂರವರು ಸ್ಪಷ್ಟಪಡಿಸಬೇಕು.

2. ಡಾ॥ ಚಿಮೂರವರು ವೀರಶೈವವು (ಲಿಂಗಾಯತ) ಹಿಂದು ಧರ್ಮದ ಶಾಖೆ ಎಂದು ಹೇಳಿದ್ದಾರೆ! ಆದರೆ ಅಖಿಲ ಭಾರತ ವೀರಶೈವ ಮಹಾಸಭಾದ ಹಿಂದಿನ ಅಧ್ಯಕ್ಷರಾದ ಜೆ.ಬಿ.ಮಲ್ಲಾರಾಧ್ಯರು 1981ರ ಜನಗಣತಿಯಲ್ಲಿ 'ವೀರಶೈವರು ಹಿಂದು ಧರ್ಮದ ಬಾಲಂಗೋಚಿಯಲ್ಲ' ಎಂದು ಹೇಳಿದ್ದು, ಇನ್ನೂ ನನಗೆ ಜ್ಞಾಪಕವಿದೆ. ಈಗಿನ ಭೀಮಣ್ಣ ಖಂಡ್ರೆಯವರ ಅಧ್ಯಕ್ಷತೆಯ ವೀರಶೈವ ಮಹಾಸಭಾದವರು ಸಹ ವೀರಶೈವರು ಅಥವಾ ಲಿಂಗಾಯತರು ಯಾವುದೇ ಕಾರಣಕ್ಕೂ ಖಂಡಿತವಾಗಿಯೂ ಹಿಂದುಗಳಲ್ಲವೆಂದು 2001 ಮತ್ತು 2011ರ ಜನಗಣತಿಯಲ್ಲಿ ಪ್ರಚಾರ ಮಾಡಿದ್ದಾರೆ. ಖ್ಯಾತ ಸಂಶೋಧಕ ಮಾಜಿ ಕುಲಪತಿ ಡಾ॥ ಎಂ. ಎಂ. ಕಲಬುರ್ಗಿಯವರು ಮೈಸೂರಿನ ಮಾರ್ಚ 2003ರ 'ಪ್ರಸಾದ' ಪತ್ರಿಕೆಯಲ್ಲಿ ಲಿಂಗಾಯತವು ವೈದಿಕಜನ್ಯವಲ್ಲ, ಶೈವದ ಮುಂದುವರಿಕೆಯಲ್ಲ, ವೇದಾಂತಕ್ಕೆ ಬರೆದ ಭಾಷ್ಯವಲ್ಲ. ಬಸವಣ್ಣನವರ ಸ್ವತಂತ್ರ ಪರಿಕಲ್ಪನೆಯ ಸ್ವತಂತ್ರ ಧರ್ಮ. ಲಿಂಗಾಯತರು ನೂರಕ್ಕೆ ನೂರು ಹಿಂದುಗಳಲ್ಲ. ವೇದ ಧರ್ಮವನ್ನು ಪ್ರತಿಭಟಿಸಿ, ಇಷ್ಟಲಿಂಗವನ್ನೇ ಧಾರಣ ಮಾಡುವ ಲಿಂಗಾಯತ ಎಂಬ ಹೊಸ ಧರ್ಮವನ್ನು ಬಸವಣ್ಣನವರು ಸ್ಥಾಪಿಸಿದರೆಂದು ಹೇಳಿದ್ದಾರೆ. ಮೈಸೂರಿನ ಆಂದೋಲನ ದಿನ ಪತ್ರಿಕೆಯಲ್ಲಿ 27-9-2004ರಂದು ವರದಿಯಾಗಿರುವಂತೆ, ಖ್ಯಾತ ವಿದ್ವಾಂಸ ಡಾ॥ ಎಲ್. ಬಸವರಾಜು ಅವರು. ಜ.ಶ್ರೀ.ಶಿವರಾತ್ರೀಶ್ವರ ಶಾಲೆಯಲ್ಲಿ ನಡೆದ ವಚನ ವಾಙ್ಮಯದ ಸಮಾರೋಪ ಸಮಾರಂಭದಲ್ಲಿ ವೇದೋಪನಿಷತ್ತುಗಳಿಗೂ, ವಚನಸಾಹಿತ್ಯಕ್ಕೂ ಯಾವುದೇ ಸಂಬಂಧವಿಲ್ಲವೆಂದು ಅಭಿಪ್ರಾಯಪಟ್ಟಿದ್ದಾರೆ. ಕೂಡಲಸಂಗಮದ ಬಸವ ಧರ್ಮದ ಮಹಾಜಗದ್ಗುರು ಪೀಠಾಧ್ಯಕ್ಷರಾದ ಪೂಜ್ಯ ಶ್ರೀ ಮಾತೆ ಮಹಾದೇವಿಯವರು 'ಲಿಂಗಾಯತರು ಹಿಂದುಗಳಲ್ಲ' (14-1-2008) ಎಂಬ ಗ್ರಂಥದಲ್ಲಿ ಲಿಂಗಾಯತವು ಅಹಿಂದು ಅವೈದಿಕವಾದ ಪರಿಪೂರ್ಣ ಸ್ವತಂತ್ರ ಧರ್ಮವೆಂಬುದನ್ನು ಸಾಬೀತುಪಡಿಸಿದ್ದಾರೆ. ಇದಕ್ಕೆಲ್ಲ ಡಾ॥ ಚಿಮೂರವರ ಉತ್ತರವೇನು?

3. ಡಾ॥ ಚಿಮೂರವರು ವೀರಶೈವ-ಲಿಂಗಾಯತ ಇವೆರಡೂ ಒಂದೇ ಎಂದು ಮಾತ್ರವಲ್ಲ ವೀರಶೈವವು ವೈದಿಕ ಹಿಂದು ಧರ್ಮದ ಶಾಖೆ ಎಂದೂ ಹೇಳುತ್ತಾರೆ. ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿಯವರು 'ಲಿಂಗಾಯತರು ವೀರಶೈವರಲ್ಲ' (1996) ಎಂಬ ಕೃತಿಯಲ್ಲಿ ಲಿಂಗಾಯತರು ವೀರಶೈವರಲ್ಲ ಎಂಬುದನ್ನು ಸ್ಪಷ್ಟಪಡಿಸಿದ್ದಾರೆ. ಅದೂ ಅಲ್ಲದೆ ವಿಜಯ ಕರ್ನಾಟಕ ಪತ್ರಿಕೆಯಲ್ಲಿ 18-1-2004ರಂದು ವರದಿಯಾಗಿರುವಂತೆ, ಧಾರವಾಡದಲ್ಲಿ ನಡೆದ ಲಿಂಗಾಯತ ಧರ್ಮ ಜಾಗೃತಿ ಸಮ್ಮೇಳನದಲ್ಲಿ ಪೂಜ್ಯ ಮಾತಾಜಿಯವರು ವೀರಶೈವ-ಲಿಂಗಾಯತ ಬೇರೆ ಬೇರೆ ಎಂಬುದನ್ನು ಯಾವುದೇ ವೇದಿಕೆ ಅಥವಾ ಯಾರೇ ವಿದ್ವಾಂಸರ ಎದುರಿಗೆ ದಾಖಲೆ ಸಮೇತ ಸಾಬೀತುಪಡಿಸಲು ಸಿದ್ಧವಿರುವುದಾಗಿ ಬಹಿರಂಗ ಚರ್ಚೆಗೆ ಪಂಥಾಹ್ವಾನ ನೀಡಿ 8 ವರ್ಷಗಳೇ

ಆಗಿದ್ದು ಈ ಸವಾಲನ್ನು ಸ್ವೀಕರಿಸಿ ಇನ್ನೂ ಯಾರೂ ಮುಂದೆ ಬಂದಿಲ್ಲ. ಡಾ॥ ಎಂ.ಎಂ. ಕಲಬುರ್ಗಿಯವರು ಲಿಂಗಾಯತವು ವೇದಧರ್ಮವನ್ನು ಪ್ರತಿಭಟಿಸಿ ಹುಟ್ಟಿದ ಸ್ವತಂತ್ರ ಧರ್ಮವೆಂದು ಮೈಸೂರಿನ ಮಾರ್ಚ್ 2003ರ 'ಪ್ರಸಾದ' ಪತ್ರಿಕೆಯಲ್ಲಿ ಹೇಳಿದ್ದಾರೆ. ಅಂದಾಗ ಒಂದು ಧರ್ಮದ ಶಾಖೆ ಎಂದು ಹೇಳಲಾದ ವೀರಶೈವವನ್ನೂ ಪ್ರತಿಭಟಿಸಿದಂತೆಯೆ. 1-7-2004 ರಂದು ವಿಜಯ ಕರ್ನಾಟಕ ಪತ್ರಿಕೆಯಲ್ಲಿ ವರದಿಯಾಗಿರುವಂತೆ, ಹೆಸರಾಂತ ಸಾಹಿತಿ, ಮಾಜಿ ಕುಲಪತಿ ಡಾ॥ ದೇ.ಜವರೇಗೌಡರು ಜ.ಶ್ರೀ.ಶಿವರಾತ್ರೀಶ್ವರ ಮಹಾವಿದ್ಯಾಪೀಠದ ಸುವರ್ಣ ಮಹೋತ್ಸವ ಅಂಗವಾಗಿ ನಡೆದ ಬಸವ ದರ್ಶನ ಕೃತಿ ಬಿಡುಗಡೆ ಸಮಾರಂಭದಲ್ಲಿ 'ಬಸವ ಧರ್ಮ ಪರ್ಯಾಯ ಧರ್ಮವಲ್ಲ' ಎಂದು ಹೇಳಿರುವುದು ಗಮನಾರ್ಹ. ಇದಕ್ಕೆಲ್ಲ ಚಿಮೂರವರು ಹೇಳುವುದು ಏನು?

4. ಬಸವಣ್ಣನವರು ಲಿಂಗಾಯತ ಧರ್ಮ ಸ್ಥಾಪಕರೆಂಬುದು ಬರಿಯ ಭ್ರಮೆ ಎನ್ನುವರು ಡಾ॥ ಚಿಮೂರವರು. ಬಸವಣ್ಣನವರು ಲಿಂಗಾಯತ ಎಂಬ ಹೊಸ ಧರ್ಮವನ್ನು ಸ್ಥಾಪಿಸಿದ್ದರಿಂದ ಅವರ ಹೆಸರೇ "ಶ್ರೀಗುರುಬಸವಲಿಂಗಾಯನಮಃ' ಎಂದು ಮಹಾಮಂತ್ರವಾಗಿದೆ. ಬಸವಣ್ಣನವರು ಲಿಂಗಾಯತ ಧರ್ಮ ಸ್ಥಾಪಕರೆಂಬುದಕ್ಕೆ ವಚನಗಳ ಆಧಾರಗಳಿವೆ. ಬಸವಣ್ಣ 'ಆದಿಯಲ್ಲಿ ನೀನೇ ಗುರುವಾದ ಕಾರಣ ನಿನ್ನಿಂದ ಹುಟ್ಟಿತ್ತು ಲಿಂಗ' ಎಂದು ಅಲ್ಲಮಪ್ರಭುದೇವರು, 'ಆದಿ ಲಿಂಗ ಅನಾದಿ ಬಸವಣ್ಣ, ಲಿಂಗವು ಬಸವಣ್ಣನ ಉದರದಲ್ಲಿ ಹುಟ್ಟಿತ್ತು' ಎಂದು ಚೆನ್ನಬಸವಣ್ಣನವರು, 'ಲಿಂಗವು ಬಸವಣ್ಣನಿಂದ' ಎಂದು ಮಾಚಿದೇವರು, 'ಲಿಂಗಕ್ಕೆ ಆಧಾರ ಬಸವಣ್ಣ' ಎಂದು ಅಂಬಿಗರ ಚೌಡಯ್ಯನವರು. 'ನಿಮಗೂ ಎನಗೂ ಬಸವಣ್ಣನ ಧರ್ಮವಯ್ಯಾ' ಎಂದು ಸಿದ್ಧರಾಮೇಶ್ವರರು, 'ಬಸವ ಗುರುವಿನ ಹೆಸರ ಬಲ್ಲವರಾರಿಲ್ಲ ಹುಸಿ ಮಾತನಾಡಿ ಕೆಡದಿರಿ! ಲಿಂಗಾಯತಕೆ ಬಸವನೇ ಕರ್ತೃ ಸರ್ವಜ್ಞ' ಎಂದೆಲ್ಲ ಹೇಳಿರುವರು. ಆದ್ದರಿಂದ 850 ವರ್ಷಗಳ ಪರಂಪರೆಯ ಲಿಂಗಾಯತ ಧರ್ಮದ ಸ್ಥಾಪನೆ ಮತ್ತು ಇತಿಹಾಸ ಐತಿಹಾಸಿಕ ಮಹಾಪುರುಷ ಗುರು ಬಸವಣ್ಣನವರಿಂದಲೇ ಪ್ರಾರಂಭ. ಇದಕ್ಕೆ ಡಾ॥ ಚಿಮೂರವರು ಅನ್ಯ ಜಾತಿ ಧರ್ಮಗಳ ಬಗ್ಗೆ ಕೊಟ್ಟಿದ್ದರೆ ಅದರ ಪರಿಣಾಮವೇನಾಗುತ್ತಿತ್ತು ಎಂಬುದನ್ನು ಊಹಿಸಬಲ್ಲರೆ ?

5. ಪ್ರತಿಯೊಬ್ಬರಿಗೂ ಅಭಿವ್ಯಕ್ತಿ ಸ್ವಾತಂತ್ರ್ಯವಿದೆ ನಿಜ. ಆದರೆ ಅದು ಸ್ವೇಚ್ಛಾಚಾರವಲ್ಲ. ಅದಕ್ಕೂ ಇತಿಮಿತಿ ಇದೆ. ಅದನ್ನು ಇನ್ನೊಬ್ಬರ ಮನಸ್ಸನ್ನು ನೋಯಿಸಲು ದುರುಪಯೋಗ ಮಾಡಿಕೊಳ್ಳಬಾರದು. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಎಲ್ಲರಿಗೂ ಬರೆಯುವ ಸ್ವಾತಂತ್ರ್ಯವಿರಬಹುದು. ಆದರೆ ಅಂತಹ ಸ್ವಾತಂತ್ರ್ಯದಿಂದ ಒಂದು ಸಮಾಜಕ್ಕೆ ಅಥವಾ ಧರ್ಮಗುರುವಿಗೆ ಅಪಮಾನವಾಗಬಾರದು. ಐತಿಹಾಸಿಕ ಸತ್ಯಕ್ಕೆ ಅಪಚಾರವಾಗಬಾರದು: ಯಾವುದೇ ಬರಹಗಳಿಗೆ ಸತ್ಯ ಶುದ್ಧವಾದ ಮೂಲಾಧಾರಗಳಿರಬೇಕು. ಸಂಶೋಧನೆ ಎಂದರೆ ಸತ್ಯದ ಶೋಧನೆ, ಸತ್ಯಾನ್ವೇಷಣೆ. ಆದರೆ ಸಂಶೋಧನೆಯ ನೆಪದಲ್ಲಿ ಅನಾವಶ್ಯಕವಾಗಿ ಹೇಳಿಕೆಗಳನ್ನು ನೀಡಿ, ಅನಗತ್ಯ ವಿವಾದ ಸೃಷ್ಟಿಸಿ, ಬಸವಾಭಿಮಾನಿಗಳ ನಂಬಿಕೆಗೆ ಚ್ಯುತಿ ತಂದು, ಅವರ ಧಾರ್ಮಿಕ ಭಾವನೆಯನ್ನು ಕೆರಳಿಸುವುದು ನ್ಯಾಯವಲ್ಲ. ಊಹೆಯು ಸತ್ಯವಲ್ಲ. ಸತ್ಯವು ನಿಖರವಾಗಿರಬೇಕು. ಸತ್ಯವನ್ನು ಅಸತ್ಯದಿಂದಲೂ, ನ್ಯಾಯವನ್ನು ಅನ್ಯಾಯದಿಂದಲೂ ಸೋಲಿಸಲು ಸಾಧ್ಯವಿಲ್ಲ.

ಲಿಂಗಾಯತವು ವೀರಶೈವಕ್ಕೆ ಪರ್ಯಾಯವಲ್ಲ ಸ್ವತಂತ್ರ ಧರ್ಮ

ಲಿಂಗಾಯತ ಮತ್ತು ವೀರಶೈವ ಸಮಾನಾರ್ಥಕ ಪದಗಳಲ್ಲ. ಲಿಂಗ+ಆಯತ=ಲಿಂಗಾಯತ. 'ಲಿಂಗ' ಎಂದರೆ ನಿರಾಕಾರ ದೇವನ ಕುರುಹಾದ ಇಷ್ಟಲಿಂಗ. 'ಆಯತ' ಎಂದರೆ ಧರಿಸಿದವ. 'ಲಿಂಗಾಯತ' ಎಂದರೆ ಇಷ್ಟಲಿಂಗವನ್ನು ಧರಿಸಿದವನು. ಹೀಗೆ ಲಿಂಗಾಯತ ಪದ ಲಿಂಗವನ್ನು ಸಂಬಂಧ ಮಾಡಿಕೊಂಡವನೆಂಬುದನ್ನು ಹೇಳುತ್ತದೆ.

ಶಿವನಲ್ಲಿ ವೀರತಮವಾದ ಭಕ್ತಿಯುಳ್ಳವನೇ ವೀರಶೈವ. ಜೀವ-ಶಿವೈಕ್ಯ ವಿದ್ಯೆಯಲ್ಲಿ ರಮಿಸುವವನು ವೀರಶೈವ. ಈ ಎರಡೂ ವ್ಯಾಖ್ಯಾನಗಳು ಇಷ್ಟಲಿಂಗಧಾರಿ-ಲಿಂಗಾಯತ ಸಮಾಜಕ್ಕೆ

ಹೊಂದಲಾರವು. ಲಿಂಗಾಯತದ ಮುಖ್ಯಾಂಶ ಶಿವನಲ್ಲಿ ವೀರತಮವಾದ ಭಕ್ತಿಯನ್ನು ಹೊಂದುವುದಲ್ಲ. ತ್ರಿಮೂರ್ತಿಗಳಿಗೂ ಅತೀತನಾದ ಪರಮಾತ್ಮನನ್ನು ವಿಶ್ವದಾಕಾರದ ಇಷ್ಟಲಿಂಗ ರೂಪದಲ್ಲಿ ಪೂಜಿಸುವುದು. ಶಿವ-ಜೀವೈಕ್ಯ ವಿದ್ಯೆಯಲ್ಲಿ ರಮಿಸುವ ಅನೇಕ ಶಿವಭಕ್ತರು ಬ್ರಾಹ್ಮಣ, ಕ್ಷತ್ರಿಯ, ವೈಶ್ಯರಲ್ಲಿದ್ದಾರೆ. ಶೂದ್ರರು ಮತ್ತು ಅಸ್ಪೃಶ್ಯರು ಪಾರಂಪರಿಕವಾಗಿ ಶಿವಭಕ್ತರು. ಲಿಂಗಾಯತರು ಮದುವೆ ಮುಂತಾದ ಸಂಬಂಧ ಬೆಳೆಸುವಾಗ ಶಿವಭಕ್ತರೆಂಬುದನ್ನು ಗಮನಿಸಿ ಸಂಬಂಧ ಬೆಳೆಸದೆ ಇಷ್ಟಲಿಂಗಧಾರಣೆ ನೋಡಿ ಸಂಬಂಧ ಬೆಳೆಸುವರು. 'ವೀರ' ಎಂದರೆ ಅನ್ಯಧರ್ಮಗಳ ಬಗ್ಗೆ ವಿರೋಧರಹಿತ ಭಾವ ಹೊಂದಿದವನು. 'ಶೈವ' ಎಂದರೆ ಶಿವನನ್ನು ಅನನ್ಯ ಶ್ರದ್ಧೆಯಿಂದ ಪೂಜಿಸುವವನು ಎಂದೂ ಹೇಳುವುದುಂಟು. ವೀರಶೈವ ಎಂಬುದು ಮತವಲ್ಲ ವೀರವ್ರತದ ಹೆಸರು. 'ವೀರ' ಎಂದರೆ ಶೂರ ಎಂದು ಅರ್ಥವಿದ್ದು, 'ವೀರಶೈವ' ಪದದ ಉತ್ತರಾರ್ಧವೇ ಶೈವ ಎಂಬುದನ್ನು ಸೂಚಿಸುತ್ತದೆ ಎಂದೆಲ್ಲ ಹೇಳಲಾಗಿದೆ. ಅದರಿಂದ ವೀರಶೈವ ಪದವೇ ಅಸ್ಪಷ್ಟ. ಹೀಗಾಗಿ ವೀರಶೈವವು ಲಿಂಗಾಯತ ಸಮಾಜದ ಮೇಲೆ ಬಲವಂತವಾಗಿ ಹೇರಲ್ಪಟ್ಟ ಮತ್ತು ಆಗಂತುಕವಾಗಿ ಕಲಿಸಲ್ಪಟ್ಟ ಪದ.

ಲಿಂಗಾಯತ ಮತ್ತು ವೀರಶೈವಕ್ಕೆ ವ್ಯತ್ಯಾಸಗಳಿವೆ. ಲಿಂಗಾಯತವು ಅವೈದಿಕವಾದ ಬಸವ ಪ್ರಣೀತ ಸ್ವತಂತ್ರ ಧರ್ಮ. ಆದರೆ ವೀರಶೈವವು ವೈದಿಕ ಪಂಥ. ಲಿಂಗಾಯತರ ಧರ್ಮಸಂವಿಧಾನ ವಚನ ಸಾಹಿತ್ಯ, ಧರ್ಮಭಾಷೆ ಕನ್ನಡ. ಆದರೆ ವೀರಶೈವರ ಸಿದ್ಧಾಂತ ಶಿಖಾಮಣಿಯು ವೇದಾಗಮಗಳ ಕೆಲವು ಆಚಾರವಿಚಾರಗಳನ್ನು ಸಂಗ್ರಹಿಸಿ, ಸಂಸ್ಕೃತದಲ್ಲಿ ಕೃತಕವಾಗಿ ಬರೆಯಲ್ಪಟ್ಟ ವೈದಿಕ ಗ್ರಂಥ. ವಿಪ್ರ ಮೊದಲಾಗಿ ಅಂತ್ಯಜ ಕಡೆಯಾಗಿ ಅಂಗದ ಮೇಲೆ ಲಿಂಗವುಳ್ಳ ಭಕ್ತರನ್ನೆಲ್ಲ ಒಂದೇ ಎನ್ನುವುದು ವಚನ ಪ್ರಣೀತ ಲಿಂಗಾಯತ ಧರ್ಮ. ಆದರೆ ಗುರುವರ್ಗ ಬೇರೆ, ಭಕ್ತವರ್ಗ ಬೇರೆ ಎಂದು ಜಾತಿ ವ್ಯತ್ಯಾಸ ಮಾಡುವುದು ಸಿದ್ಧಾಂತ ಶಿಖಾಮಣಿ ಪ್ರಣೀತ ವೀರಶೈವ ಮತ. ಲಿಂಗಾಯತ ಒಂದು ಸಮುದ್ರವಿದ್ದಂತೆ. ಆದರೆ ವೀರಶೈವ ಆ ಸಮುದ್ರದಲ್ಲಿ ಸೇರಿಕೊಂಡಿರುವ ನದಿಯಂತೆ. ಇಂದಗೂ ಸಹ ಬಸವ ಪೂರ್ವದಲ್ಲಿದ್ದ ವೀರಶೈವ ಗುಂಪುಗಳು ಆಂಧ್ರ, ತಮಿಳುನಾಡು, ಕೇರಳ ರಾಜ್ಯಗಳಲ್ಲಿ ಲಿಂಗಾಯತರಿಗಿಂತ ಬೇರೆಯೇ ಆಚಾರವಿಚಾರ ಹೊಂದಿರುವುದನ್ನು ಕಾಣಬಹುದು. ಹಾಗಾಗಿ ಲಿಂಗಾಯತ-ವೀರಶೈವ ಒಂದೇ ಆಗಿರಲು ಸಾಧ್ಯವೇ ಇಲ್ಲ.

12ನೆಯ ಶತಮಾನದಿಂದ 20ನೆಯ ಶತಮಾನದ ಆದಿಯವರೆಗೂ ಲಿಂಗಾಯತ ಪದವೇ ರೂಢಿಯಲ್ಲಿದ್ದು, ಎಲ್ಲರೂ ಬಸವಣ್ಣನವರನ್ನೇ ಧರ್ಮಗುರು ಎನ್ನುತ್ತಿದ್ದರು. ವೀರಶೈವ ಎಂದರೆ ಲಿಂಗಾಯತದ ಒಳಗಿರುವ ಒಂದು ಪಂಥವೆಂದೇ ರೂಢಿಗೊಂಡಿತ್ತು. 20ನೆಯ ಶತಮಾನದ ಆದಿಭಾಗದಲ್ಲಿ ಪಂಚಾಚಾರ್ಯ ವರ್ಗದವರು ಲಿಂಗಾಯತವನ್ನೇ ವೀರಶೈವ ಎಂದು ಕರೆದರು. ಹಾನಗಲ್ಲ ಕುಮಾರಶಿವಯೋಗಿಗಳು ಅಖಿಲ ಭಾರತ ವೀರಶೈವ ಮಹಾಸಭಾ ಎಂಬ ಸಂಘವನ್ನು 1904ರಲ್ಲಿ ಹುಟ್ಟುಹಾಕಿ ಇಷ್ಟಲಿಂಗಧಾರಿ ಲಿಂಗಾಯತರಲ್ಲಿ ವೀರಶೈವರು ಎಂಬ ಭ್ರಮೆ ಹುಟ್ಟಿಸಿದರು. ಒಬ್ಬ ಲಿಂಗಾಯತನು ತನಗೆ ಆದಾಯಪತ್ರ ಬೇಕೆಂದು ಅರ್ಜಿ ಸಲ್ಲಿಸಿದರೆ ತಹಸಿಲ್ದಾರರು ಆತನಿಗೆ ವೀರಶೈವ-ಲಿಂಗಾಯತ ಎಂದು ವೀರಶೈವ ಸೇರಿಸಿ ಬರೆದುಕೊಡುತ್ತಿದ್ದಾರೆ. ಗೌಡ-ಲಿಂಗಾಯತ, ಬಣಜಿಗ ಲಿಂಗಾಯತ, ಕುಂಬಾರ-ಲಿಂಗಾಯತ, ಮಡಿವಾಳ-ಲಿಂಗಾಯತ, ಹಡಪದ-ಲಿಂಗಾಯತ ಎಂದಂತೆ ವೀರಶೈವ-ಲಿಂಗಾಯತ ಸಹ ಒಂದು ಪಂಥ. ಅಂದಾಗ ಎಲ್ಲರನ್ನೂ ವೀರಶೈವರನ್ನಾಗಿಸಿ ವೀರಶೈವ-ಲಿಂಗಾಯತ ಎಂದು ಆದಾಯ ಪತ್ರ ಕೊಡುತ್ತಿರುವುದು ಅಕ್ರಮ. ಇದಕ್ಕೆ ಕಾರಣರಾರೆಂಬುದನ್ನು ತಿಳಿದು ಅದನ್ನು ನಿಲ್ಲಿಸಬೇಕಾಗಿದೆ.

ವೈದಿಕ ಶೈವ ಬ್ರಾಹ್ಮಣ ಜಾತಿಯಲ್ಲೇ ಹುಟ್ಟಿ, ವೈದಿಕ ಆಚರಣೆಗಳನ್ನೇ ವಿರೋಧಿಸಿದ ಬಸವಣ್ಣನವರು ಅದೇ ವೈದಿಕ ಆಚರಣೆಗಳಿಗೆ ನಿಷ್ಠವಾದ ವೀರಶೈವವನ್ನು ಸ್ಥಾಪಿಸಿರುವ ಅಥವಾ ಸೇರಿಕೊಂಡಿರುವ ಸಾಧ್ಯತೆ ಇಲ್ಲವೇ ಇಲ್ಲ. ಅವರು ಹೊಸದಾಗಿ ಲಿಂಗಾಯತ ಧರ್ಮ ಸ್ಥಾಪಿಸಿದಾಗ ಅನೇಕ ಜಾತಿ ಕಸುಬುಗಳವರು ಬಂದು ಲಿಂಗಾಯತ ಧರ್ಮ ಸೇರಿದಂತೆ, ಆಂಧ್ರಪ್ರದೇಶ, ತಮಿಳುನಾಡು, ಕೇರಳಗಳಲ್ಲಿದ್ದ ವೀರಶೈವರು ಸಹ ಸೇರಿದಾಗ ಅವರೆಲ್ಲರ ಪೂರ್ವಜಾತಿ ಅಳಿದು ಪುನರ್ಜಾತರಾಗಿ ಲಿಂಗಾಯತರಾದರು. ಅಂದಾಗ ಅವರೆಲ್ಲರೂ ಧಾರ್ಮಿಕವಾಗಿ ಲಿಂಗಾಯತರೆಂದು

ಗುರುತಿಸಲ್ಪಡುತ್ತಾರೆಯೇ ವಿನಾ ಅವರ ದೀಕ್ಷಾಪೂರ್ವದ ಜಾತಿಪಂಥಗಳನ್ನು ಒಡಿದು ಗುರುತಿಸಲ್ಪಡರು. ಇಷ್ಟಲಿಂಗಧಾರಿಗಳಾದ ನಾವು ಅನುಸರಿಸುವ ಧರ್ಮ ಲಿಂಗತತ್ವದ ಲಿಂಗಾಯತವೇ ಹೊರತು ವೀರಶೈವವಲ್ಲ.

ಲಿಂಗಾಯತ ಧರ್ಮದ ಅನುಯಾಯಿತ್ವ ಬರುವುದು ಲಿಂಗಧಾರಣೆಯಿಂದಲೇ. ಲಿಂಗವಂತರೆಲ್ಲರೂ 2011ರ ಜನಗಣತಿಯಲ್ಲಿ ಲಿಂಗಾಯತ ಎಂದು ಬರೆಸಬೇಕೆಂದು ಕರೆಕೊಡಬೇಕಿತ್ತು. ಆದರೆ ಮಹಾಸಭಾದವರು ಹಾಗೆ ಮಾಡಲಿಲ್ಲ. ವೀರಶೈವ, ಲಿಂಗಾಯತ, ವೀರಶೈವ-ಲಿಂಗಾಯತ ಈ ಮೂರರಲ್ಲಿ ಯಾವುದನ್ನಾದರೂ ಬರೆಸಿ ಎಂದು ಅವರು ಹೇಳಿದುದರಿಂದ ಕೆಲವರು ವೀರಶೈವರೆಂದು, ಹಲವರು ಲಿಂಗಾಯತರೆಂದು, ಇನ್ನೂ ಕೆಲವರು ವೀರಶೈವ-ಲಿಂಗಾಯತರೆಂದು, ಮತ್ತೆ ಕೆಲವರು ಹಿಂದುಗಳೆಂದು ಬರೆಸುವಂತಾಗಿ ಸಮಗ್ರ ಲಿಂಗಾಯತ ಸಮಾಜ ಒಡೆಯಲು ಕಾರಣವಾಯಿತು. ಅತ್ತ ವೀರಶೈವರೂ ಆಗದೆ, ಇತ್ತ ಲಿಂಗಾಯತ ತತ್ವಗಳನ್ನೂ ಪಾಲಿಸದೆ ಲಿಂಗಾಯತರು ಎಡಬಿಡಂಗಿಯಗಲು ದಾರಿಯಾಯಿತು. ಒಂದು ಧರ್ಮಕ್ಕೆ ಒಂದೇ ಹೆಸರಿರುವುದೇ ವಿನಾ ಹಲವಾರು ಹೇಸರಿರುವುದಿಲ್ಲ. ವೀರಶೈವ-ಲಿಂಗಾಯತ ಪದಗಳಲ್ಲಿನ ವ್ಯತ್ಯಾಸವನ್ನು ಯಾರೋ ಮಾಡಿದ್ದಲ್ಲ. ಮೂಲದಲ್ಲಿಯೇ ಈ ಪದಗಳಲ್ಲಿ ವ್ಯತ್ಯಾಸವಿದೆ. ಲಿಂಗಾಯತ ಪದದ ಹಿಂದೆ ವೀರಶೈವ ಪದದ ಜೋಡಣೆ ತಪ್ಪು. ಲಿಂಗಾಯತರಲ್ಲಿ ಹಲವು ಪಂಗಡಗಳಿದ್ದು, ಅವರೆಲ್ಲರೂ ವೀರಶೈವ ಲಿಂಗಾಯತರಲ್ಲ. ಹಾಗಾಗಿ ಇವೆರಡನ್ನೂ ಸಮೀಕರಿಸಿ ಕಲಸುಮೇಲೋಗರ ಮಾಡುವುದು ನ್ಯಾಯವಲ್ಲ.

ಶತಮಾನಗಳಿಂದ ಶೋಷಣೆಗೊಳಗಾಗಿದ್ದ ಜನರನ್ನು ವೈದಿಕ ಪುರೋಹಿತಶಾಹಿ, ಶೈವದ ದೇವಾಲಯಶಾಹಿ, ಆಗಮದ ಬಹುದೇವತೋಪಾಸನೆಗಳಿಂದ ಮುಕ್ತಗೊಳಿಸಿದವರು .ಬಸವಣ್ಣನವರು. ಅವರ ಹೊಸ ಸಂಘಟನೆಯ ಹೆಸರೇ ಲಿಂಗಾಯತ. ಅಂದಿನಿಂದ ಇಂದಿನವರೆಗೆ ಈ ಪದವನ್ನು ಉಳಿಸಿಕೊಂಡು ಬಂದಿರುವುದು ಇತಿಹಾಸ. ಆದ್ದರಿಂದ ವೀರಶೈವ ಪದ ಬಳಕೆ ತಾತ್ವಿಕವಾಗಿ ಮತ್ತು ಐತಿಹಾಸಿಕವಾಗಿ ಉಚಿತವೆನಿಸುವುದಿಲ್ಲ. ವೀರಶೈವವು ಶೈವದ ಶಾಖೆಯಾಗಿ, ಹಿಂದೂ ಧರ್ಮದ ಅಂಗವಾಗಿ ಬಳಕೆಯಲ್ಲಿರುವುದರಿಂದ, ವೀರಶೈವ ಪದವನ್ನು ಉಳಿಸಿಕೊಂಡು ನಾವೆಂದೂ ಸ್ವತಂತ್ರ ಧರ್ಮೀಯರು ಎನ್ನಿಸಿಕೊಳ್ಳಲು ಸಾಧ್ಯವಿಲ್ಲ.

ಬ್ರಿಟಿಷ್ ಸರಕಾರ, ಮುಂಬಯಿ, ಮದ್ರಾಸು, ಮೈಸೂರು, ಕರ್ನಾಟಕ ಸರ್ಕಾರದ ದಾಖಲೆಗಳಲ್ಲಿ ಲಿಂಗಾಯತ ಪದವೇ ಹೆಚ್ಚಾಗಿ ಬಳಸಲ್ಪಟ್ಟಿದೆ ಎನ್ನಲಾಗಿದೆ. ಡೆಪ್ಯೂಟಿ ಚನ್ನಬಸಪ್ಪನವರು 1868ರಲ್ಲಿ ಬೆಳಗಾವಿಯಲ್ಲಿ ಸ್ಥಾಪಿಸಿದ ಉಚಿತ ಪ್ರಸಾದನಿಲಯ, ಅರಟಾಳ ರುದ್ರಗೌಡರು ಧಾರವಾಡದಲ್ಲಿ 1883ರಲ್ಲಿ ಸ್ಥಾಪಿಸಿದ ವಿದ್ಯಾಭಿವೃದ್ಧಿ ಸಂಸ್ಥೆ. 1905ರಲ್ಲಿ ಮೈಸೂರು ವಿದ್ಯಾನಿಧಿ ಸಂಘ, ವಾರದ ಮಲ್ಲಪ್ಪನವರು ಸೊಲ್ಲಾಪುರದಲ್ಲಿ 1907ರಲ್ಲಿ ಸ್ಥಾಪಿಸಿದ ಸಂಘ, ಹಳಕಟ್ಟಿಯವರು ಬಿಜಾಪುರದಲ್ಲಿ 1910ರಲ್ಲಿ ಸ್ಥಾಪಿಸಿದ ಬಿಜಾಪುರ ಜಿಲ್ಲಾ ಶಿಕ್ಷಣ ಸಂಸ್ಥೆ. ಬೆಳಗಾವಿಯ 1916ರ ಕರ್ನಾಟಕ ವಿದ್ಯಾಸಂಸ್ಥೆ, ಅಖಿಲ ಭಾರತ ಲಿಂಗಾಯತ ಮಹಾಸಭಾ ಮುಂತಾದ ಸಂಘಸಂಸ್ಥೆಗಳು, ಧಾರವಾಡದ ಲಿಂಗಾಯತ ಭವನ, ಉತ್ತರ ಕರ್ನಾಟಕದ ಲಿಂಗಾಯತ ಖಾನಾವಳಿಗಳು, ಬೆಳಗಾವಿಯ ಒಂದು ಮಾಸಪತ್ರಿಕೆ ಅವುಗಳೆಲ್ಲ 'ಲಿಂಗಾಯತ' ಹೆಸರಿನಲ್ಲಿಯೇ ಇವೆ. ಗದುಗಿನ ಡಾ॥ ಸಿದ್ಧಲಿಂಗಸ್ವಾಮಿಯವರು ವೀರಶೈವ ಅಧ್ಯಯನ ಸಂಸ್ಥೆಯನ್ನು 29-3-2004 ರಂದು ಲಿಂಗಾಯತ ಅಧ್ಯಯನ ಸಂಸ್ಥೆ ಎಂದು ಮರುನಾಮಕರಣ ಮಾಡಿರುವುದು ಗಮನಾರ್ಹ. ಎಲ್ಲ ಜಾತಿ ಒಳಪಂಗಡಗಳ ಹೆಸರುಗಳ ಹಿಂದೆ ಲಿಂಗಾಯತ ಪದವಿದೆ. ಉದಾಹರಣೆಗೆ ಲಿಂಗಾಯತ-ಗೌಳಿ, ಲಿಂಗಾಯತ-ಮೇದಾರ, ಲಿಂಗಾಯತ-ಅಗಸ, ಲಿಂಗಾಯತ-ಆಚಾರ್, ಲಿಂಗಾಯತ-ಹೂಗಾರ, ಲಿಂಗಾಯತ-ಕುಂಬಾರ, ಲಿಂಗಾಯತ-ಸಿಂಪಿ, ಲಿಂಗಾಯತ-ನೇಕಾರ, ಲಿಂಗಾಯತ-ಅಕ್ಕಸಾಲಿ, ಲಿಂಗಾಯತ-ಹಡಪದ, ಲಿಂಗಾಯತ-ಗಾಣಿಗ ಮುಂತಾದುವು. ಜನಸಾಮಾನ್ಯರಲ್ಲಿ ಅವಿದ್ಯಾವಂತರಲ್ಲಿಯೂ ಲಿಂಗಾಯತ ಪದವೇ ಹೆಚ್ಚು ಪ್ರಚಲಿತವಿದೆ. ಆದರೆ ಈಗ ಕೆಲವು ಸಂಘಗಳು ಹೆಸರನ್ನು ಬದಲಾಯಿಸಿವೆ. ಉದಾಹರಣೆಗೆ .1905ರ ಲಿಂಗಾಯತ ವಿದ್ಯಾನಿಧಿ ಸಂಘದ ಹೆಸರು ವೀರಶೈವ ವಿದ್ಯಾನಿಧಿ ಸಂಸ್ಥೆ ಎಂದಾಗಿದೆ. ಇದು ಲಿಂಗಾಯತದ ಇತಿಹಾಸಕ್ಕೆ ಕಪ್ಪುಚುಕ್ಕೆ.

ಯಾವ ಗುಣಲಕ್ಷಣಗಳ ಕಾರಣಗಳಿಂದ ಭಾರತದಲ್ಲೇ ಜನಿಸಿರುವ ಜೈನ, ಬೌದ್ಧ, ಸಿಖ್ಖ ಧರ್ಮಗಳು ಸ್ವತಂತ್ರ ಧರ್ಮಗಳೆಂದು ಮಾನ್ಯತೆ ಪಡೆದಿವೆಯೋ ಅದೇ ಕಾರಣಗಳಿಂದಾಗಿ ಲಿಂಗಾಯತವು ಸಹ ಸ್ವತಂತ್ರ ಧರ್ಮದ ಮಾನ್ಯತೆ ಪಡೆಯಲು ಅರ್ಹವಾಗಿದೆ. ಅದರಿಂದ ಲಿಂಗಾಯತವು ಸ್ವತಂತ್ರ ಧರ್ಮವೆಂದು ಸಂವಿಧಾನಾತ್ಮಕ ಮಾನ್ಯತೆ, ಜನಗಣತಿಯಲ್ಲಿ ಪ್ರತ್ಯೇಕ ಸಂಕೇತ ಸಂಖ್ಯೆ, ಅಲ್ಪಸಂಖ್ಯಾತರ ಸ್ಥಾನಮಾನ ಸೌಲಭ್ಯಗಳನ್ನು ಕೇಂದ್ರ ಸರಕಾರದಿಂದ ಪಡೆಯಬೇಕಾಗಿದೆ. ಅದಕ್ಕಾಗಿ 'ಲಿಂಗಾಯತ ಧರ್ಮ' ಎಂಬ ಪದಬಳಕೆ ಇಂದಿನ ತುರ್ತು ಅಗತ್ಯ. ಈ ಪದವನ್ನು ಬಳಸದೆ ಲಿಂಗಾಯತರಿಗೆ ಭವಿಷ್ಯವಿಲ್ಲ.

ಹೀಗೆ ಲಿಂಗಾಯತ-ವೀರಶೈವಕ್ಕೆ ಮೂಲಭೂತ ವ್ಯತ್ಯಾಸಗಳಿರುವುದರಿಂದ ಅವು ಸ್ಪಷ್ಟವಾಗಿ ಬೇರೆ ಬೇರೆ ಎಂಬುದು ಸ್ವತಃಸಿದ್ಧವಾಗುತ್ತದೆ. ಆದ್ದರಿಂದ, ಲಿಂಗಾಯತವು ವೀರಶೈವಕ್ಕೆ ಪರ್ಯಾಯವಲ್ಲ. ಅದು ಪರಿಪೂರ್ಣ ಸ್ವತಂತ್ರ ಧರ್ಮವಾಗಿದೆ.

ಸು. ಮಲ್ಲಿಕಾರ್ಜುನಪ್ಪ
ಮತ್ತೀಪುರ-571443
ತಾ-ಕೊಳ್ಳೇಗಾಲ, ಚಾಮರಾಜನಗರ-ಜಿಲ್ಲೆ

ಸೆಪ್ಟಂಬರ್ ತಿಂಗಳಲ್ಲಿಯ ಕಾರ್ಯಕ್ರಮಗಳು

1. ಬೆಳಗಾಂ ಜಿಲ್ಲೆಯ ಸವದತ್ತಿ ತಾಲ್ಲೋಕಿನ ಅಸುಂಡಿ ಗ್ರಾಮದಲ್ಲಿ ಆಗಸ್ಟ್ ಒಂದರಿಂದ ಪೂಜ್ಯ ಶ್ರೀ ಸದ್ಗುರು ಮಾತೆ ಸತ್ಯಾದೇವಿಯವರಿಂದ ವಿಶ್ವಧರ್ಮ ಪ್ರವಚನವು ನಡೆಯುತ್ತಿದ್ದು ಇದರ ಮುಕ್ತಾಯ ಸಮಾರಂಭವು ಸೆಪ್ಟಂಬರ್ 1, ಶರಣ(ಶನಿ)ವಾರದಂದು ಜರುಗಲಿದೆ. ಮುಕ್ತಾಯ ಕಾರ್ಯಕ್ರಮದಲ್ಲಿ ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಮಾತೆ ಮಹಾದೇವಿಯವರು ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ.
2. ಧಾರವಾಡದ ರಾಷ್ಟ್ರೀಯ ಬಸವ ದಳದವರು 5 ತಂಡಗಳನ್ನು ಮಾಡಿಕೊಂಡು ಶ್ರಾವಣ ಮಾಸದ ಪರ್ಯಂತರ ಬಸವ ಜ್ಯೋತಿ ಕಾರ್ಯಕ್ರಮಗಳನ್ನು ಮಾಡಿದ್ದಾರೆ. ಈ ಬಸವ ಜ್ಯೋತಿ ಕಾರ್ಯಕ್ರಮದ ಸಮಾರೋಪ ಸಮಾರಂಭವು ಜಗನ್ಮಾತಾ ಅಕ್ಕಮಹಾದೇವಿ ಮಠದ ಬಸವ ಮಂಟಪದಲ್ಲಿ ದೇವ(ಭಾನು)ವಾರ ದಿ.2-9-2012ರಂದು ಬೆಳಿಗ್ಗೆ 10-30ರಿಂದ ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿಯವರ ದಿವ್ಯ ಸನ್ನಿಧಿಯಲ್ಲಿ ಜರುಗಲಿದೆ.
3. ಹುಬ್ಬಳ್ಳಿಯ ರಾಷ್ಟ್ರೀಯ ಬಸವ ದಳ ಮತ್ತು ಲಿಂಗಾಯತ ಧರ್ಮ ಮಹಾಸಭಾಗಳ ಸಂಯುಕ್ತ ಆಶ್ರಯದಲ್ಲಿ ಶ್ರಾವಣ ಮಾಸ ಪೂರ್ತಿ ಬಸವ ಜ್ಯೋತಿ ಕಾರ್ಯಕ್ರಮಗಳು ಜರುಗಿದ್ದು ಇದರ ಸಮಾರೋಪ ಸಮಾರಂಭವು ದೇವ(ಭಾನು)ವಾರ ದಿ.2-9-2012ರಂದು ಸಂಜೆ 5-30ರಿಂದ ಜರುಗಲಿದೆ. ಹುಬ್ಬಳ್ಳಿ ನಗರದ ಉಣಕಲ್ ಪ್ರದೇಶದ ಶ್ರೀನಗರದಲ್ಲಿರುವ ರಾಷ್ಟ್ರೀಯ ಬಸವ ದಳದ ಬಸವ ಮಂಟಪದಲ್ಲಿ ಸಮಾರಂಭವು ಜರುಗಲಿದ್ದು ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿಯವರು ದಿವ್ಯ ಸನ್ನಿಧಿ ವಹಿಸಲಿದ್ದಾರೆ.

ಓಂ ಶ್ರೀ ಗುರು ಬಸವಲಿಂಗಾಯ ನಮಃ

ಹೆಚ್. ಎ. ಶರಣಪ್ಪ
ನಿಯಂತ್ರಣಾಧಿಕಾರಿಗಳು (ಹಣಕಾಸು) ನಿವೃತ್ತ
ಕ.ವಿ.ಪ್ರ.ನಿ.ನಿ (ಕವಿಮಂ) ಬೆಂಗಳೂರು

ನಂ. 157, "ಅಕ್ಕಮಹಾದೇವಿ ನಿಲಯ"
4ನೇ ಮುಖ್ಯ ರಸ್ತೆ, 3ನೇ ಸ್ಟೇಜ್, 3ನೇ ಬ್ಲಾಕ್
ಬಸವೇಶ್ವರ ನಗರ ಬೆಂಗಳೂರು-560079
ದೂರವಾಣಿ : 080-23235623

ದಿ. 25-06-2012

ಗೆ,
ಡಾ॥ ಎಂ. ಚಿದಾನಂದಮೂರ್ತಿ
(ನಂ.6/ಎ), 1013, 4ನೇ ಕ್ರಾಸ್,
11ನೇ ಮುಖ್ಯ ರಸ್ತೆ, ಹಂಪಿನಗರ
ಬೆಂಗಳೂರು-560104

ಶ್ರೀಯುತರಿಗೆ ಶರಣಾರ್ಥಿಗಳು,

ಬಸವಾದಿ ಶರಣರ ಬಗ್ಗೆ ನಿಮ್ಮ ವಿಚಾರಧಾರೆಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದ್ದೇನೆ. ಶ್ರೀ ಗುರು ಬಸವಣ್ಣನವರ ಸಾಮಾಜಿಕ ವಿಚಾರಧಾರೆಗಳನ್ನು ನೀವು ಒಪ್ಪಿದ್ದೀರಿ ಎಂದಷ್ಟೇ ಹೇಳಬಲ್ಲೆ. ಅವರ ಸಾಮಾಜಿಕ ವಿಚಾರಧಾರೆಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡಿದ್ದೀರೋ ಇಲ್ಲವೋ ನನಗೆ ತಿಳಿಯದು. ಆದರೆ ಶ್ರೀ ಗುರು ಬಸವಣ್ಣನವರ ಧಾರ್ಮಿಕ ವಿಚಾರಧಾರೆಗಳನ್ನು ಮಾತ್ರ ಸಾರಾಸಗಟಾಗಿ ತಳ್ಳಿ ಹಾಕಿದ್ದೀರಿ ಎಂದು ಸ್ಪಷ್ಟವಾಗಿ ತಿಳಿದಿದ್ದೇನೆ. ಇದಕ್ಕೆ ಕಾರಣ ನಿಮ್ಮ ಜಾತಿ ಪ್ರೇಮವಲ್ಲವೆ ? ನೀವು ಮೇಲೆ ನಮೂದಿಸಿದ ಸಾಮಾಜಿಕ ವಿಚಾರಗಳನ್ನು ಹೇಳುವಾಗ "ವೀರಶವ" ಸಾರೀ ವೀರಶೈವ" ಪದವನ್ನು ತೂರಿಸದೇ ಬಿಟ್ಟಿಲ್ಲ. ಇಡೀ ಲಿಂಗಾಯತ ಸಮುದಾಯವೇ ಈಗ ಸ್ಪಷ್ಟ ನಿಲುವಿಗೆ ಬಂದಿದೆ, ಏನೆಂದರೆ ವೀರಶೈವವೇ ಬೇರೆ ಲಿಂಗಾಯತವೇ ಬೇರೆ ಎಂದು. ಕೆಲವೊಂದು ಜಾತಿವಾದಿ ಮಠಾಧಿಕಾರಿಗಳು ಮತ್ತು ಕೆಲ ನಿಮ್ಮಂತಹ ಜಾತಿವಾದಿ ಸಾಹಿತಿಗಳು ಮಾತ್ರ ಈ ವೀರಶೈವವನ್ನು ಲಿಂಗಾಯತದಲ್ಲಿ ತೂರಿಸುವ ಪ್ರಯತ್ನ ನಡೆಸುತ್ತಿದ್ದಾರೆ. ಕಾರಣವಿಷ್ಟೆ! ವೀರಶೈವ ಪದ ಉಪಯೋಗಿಸಿದರೆ ಹಿಂದುತ್ವ ಪ್ರಾಪ್ತಿಯಾಗುತ್ತದೆ. ವೀರಶೈವರು ಹಿಂದುಗಳಾದರೆ ಹಿಂದುಗಳು ನಂಬಿರುವ ವೇದ ಆಗಮುಗಳ ಅನುಕರಣೆಗೆ ದಾರಿಯಾಗುತ್ತದೆ. ಅಂದರೆ ಹುಟ್ಟಿನಿಂದ ಪ್ರಾಪ್ತವಾದ ಜಾತಿ ಶ್ರೇಷ್ಠತೆ ದೊರೆಯುತ್ತದೆ ಎನ್ನುವ ಭ್ರಮೆ ನಿಮ್ಮದು. ಇಷ್ಟಲಿಂಗ ಜನಕ ಶ್ರೀ ಗುರು ಬಸವಣ್ಣ, ಅಂದರೆ ಲಿಂಗಾಯತ ಧರ್ಮ ಹುಟ್ಟಿದ್ದು ಶ್ರೀ ಗುರು ಬಸವಣ್ಣನವರಿಂದ. 12ನೆಯ ಶತಮಾನ ಮತ್ತು ತದನಂತರ ಅನೇಕ ಜಾತಿ, ವರ್ಣ, ವರ್ಗದ ಜನರು ಶ್ರೀ ಗುರು ಬಸವಣ್ಣನವರು ಹುಟ್ಟು ಹಾಕಿದ ಹೊಸ ಧರ್ಮದಲ್ಲಿ ಸೇರಿ ಹೋದರು. ಹಾಗೆಯೇ ಸಪ್ತ ಶೈವಗಳಲ್ಲಿ ಒಂದಾದ ವೀರಶೈವ ಎನ್ನುವ ಒಂದು ಪಂಥ/ಜಾತಿಯವರು ಈ ಹೊಸ ಧರ್ಮ "ಲಿಂಗಾಯತ"ವನ್ನು ಸ್ವೀಕರಿಸಿದರು ಅಷ್ಟೆ. ಈಗಲೂ ಕೂಡ ಕೇರಳ, ಆಂಧ್ರ ಪ್ರದೇಶದ ಕೆಲವೆಡೆ ವೀರಶೈವರು ಇದ್ದಾರೆ. ಕೆಲವೊಂದು ವೀರಶೈವರು ಮಾಂಸಾಹಾರಿಗಳಾಗಿದ್ದಾರೆ. ಇದು ಸತ್ಯ ಸಂಗತಿ. ಬಹುಶಃ ನೀವೂ ಕೂಡ ಹಿಂದೆ ಸಸ್ಯಾಹಾರಿ ವೀರಶೈವರು, ಮಾಂಸಾಹಾರಿ ವೀರಶೈವರ ಹಾಗೆ ವೀರಶೈವರಿದ್ದಿರಬಹುದು. 12 ನೆಯ ಶತಮಾನ ಅಥವಾ ನಂತರದಲ್ಲಿ ನಮ ಧರ್ಮ ದ್ರಷ್ಟಾರ ಶ್ರೀ ಗುರು ಬಸವಣ್ಣನವರು ಸಂಸ್ಥಾಪಿಸಿದ 'ಲಿಂಗಾಯತ" ಧರ್ಮವನ್ನು ಸ್ವೀಕರಿಸಿರಬೇಕು. ಹೊಸ ಧರ್ಮ "ಲಿಂಗಾಯತ" ವನ್ನು ಸ್ವೀಕರಿಸಿದ ಮೇಲೆ ಪುನಃ ಪೂರ್ವಾಶ್ರಮದ ಜಾತಿಯನ್ನು ತೂರಿಸುವುದು ಕಿಡಿಗೇಡಿತನ, ಈ ಧರ್ಮಕ್ಕೆ ಎಸಗುವ ಅಪಚಾರ ಎಂದು ಹೇಳದೆ ಗತ್ಯಂತರವಿಲ್ಲ. ಯಾವುದೇ ಒಂದು ಧರ್ಮಕ್ಕೆ ಕೆಲವೊಂದು ತತ್ವ ಸಿದ್ಧಾಂತಗಳು ಇರುತ್ತವೆ. ಈ ಕೆಳಗೆ ನಮೂದಿಸಿದ ಒಂದು ಧರ್ಮದ ಲಕ್ಷಣಗಳನ್ನು ಗಮನಿಸಿರಿ.

1. ಧರ್ಮ ಸಂಸ್ಥಾಪಕ ಮತ್ತು ಧರ್ಮಗುರು ಇರುತ್ತಾನೆ
2. ಒಂದು ಧರ್ಮ ಸಂಹಿತೆ ಇರುತ್ತದೆ
3. ಧರ್ಮದ ತತ್ತ್ವಗಳು, ಸಿದ್ಧಾಂತಗಳು ಇರುತ್ತವೆ.
4. ಧರ್ಮದ ಪರಂಪರೆ ಇರುತ್ತದೆ.

ಲಿಂಗಾಯತ ಧರ್ಮಕ್ಕೆ ಮಾತ್ರ ಈ ಲಕ್ಷಣಗಳು ಇವೆ.

1. ಧರ್ಮ ಸಂಸ್ಥಾಪಕ ಮತ್ತು ಧರ್ಮಗುರು- ವಿಶ್ವಗುರು ಬಸವಣ್ಣನವರು

2. ಧರ್ಮ ಸಂಹಿತೆ- ಸಮಾನತೆ ಸಾರುವ ವಚನ ಸಾಹಿತ್ಯ
3. ಧರ್ಮದ ಲಾಂಛನ - ಸೃಷ್ಟಿಕರ್ತ ಪರಮಾತ್ಮನ ಕುರುಹಾದ ಇಷ್ಟಲಿಂಗ
4. ಧರ್ಮದ ಧ್ಯೇಯ - ಜಾತಿ ವರ್ಣ, ವರ್ಗ ರಹಿತ ಧರ್ಮಸಹಿತ ಶರಣ ಸಮಾಜ ನಿರ್ಮಾಣ.

ಈ ವೀರಶವ ಸಾರೀ ಈ ವೀರಶೈವ ನನಗೆ ತಿಳಿದಿರುವಂತೆ ನಾವು ವಾಸಿಸುತ್ತಿರುವ ಬೆಂಗಳೂರಿನಲ್ಲಿ ಮಾತ್ರ ಈ ಪದದ ಅಬ್ಬರ ಕಾಣುತ್ತೇವೆ. ಕರ್ನಾಟಕದ ಎಲ್ಲಿಗೆ ಹೋದರೂ ಈ ವೀರಶೈವ ಪದ ಗೊತ್ತೆ ಇಲ್ಲ. ಯಾವ ಮೂಲೆಗಳಲ್ಲಿ ಕೇಳಿದರೂ ನೀವು ಯಾರೆಂದರೆ ನಾವು ಲಿಂಗಾಯತರು ಎಂದು ಹೇಳುತ್ತಾರೆ.

ವೀರಶೈವ ಎಂದರೇನು ? ಎಂದು ಪ್ರಶ್ನಿಸಿದರೆ ಯಾರೂ ಕೂಡ ಸಮಂಜಸವಾದ ಉತ್ತರ ಕೊಡಲಾರರು? ಆದರೆ ಅದೇ ಲಿಂಗಾಯತ ಎಂದರೇನು ಎಂದರೆ ಒಬ್ಬ ಸಾಮಾನ್ಯನೂ ಸುಲಭವಾಗಿ ಉತ್ತರಿಸಬಲ್ಲನು. ಲಿಂಗವನ್ನು ಅರ್ಥಾತ್ ವಿಶ್ವಾತ್ಮನ ಕುರುಹಾದ ಇಷ್ಟಲಿಂಗವನ್ನು ಕೊರಳಲ್ಲಿ ಧರಿಸಿದವನು ಲಿಂಗಾಯತ ಎಂದು, ಏನೂ ತಿಳಿಯದವನೂ ಉತ್ತರಿಸಬಲ್ಲ. ಬೆಂಗಳೂರಿನಲ್ಲಿ ನೆಲೆಸಿರುವ ಕೆಲವೊಂದು ಜಾತಿವಾದಿ ಸಾಹಿತಿಗಳು ಮತ್ತು ಕೆಲವೊಂದು ದೊಡ್ಡ ದೊಡ್ಡ (ಶ್ರೀಮಂತ ಮಠಗಳು) ಜಾತಿವಾದಿ ಮಠಾಧಿಪತಿಗಳ ಬಾಯಲ್ಲಿ ಮಾತ್ರ ಈ ವೀರಶೈವ ಹೊರ ಹೊಮ್ಮುತ್ತದೆ ಎಂದು ಮತ್ತೊಮ್ಮೆ ಹೇಳ ಬಯಸುತ್ತೇನೆ. ಲಿಂಗಾಯತವು ಹಿಂದೂ ಅಲ್ಲ ಮತ್ತು ವೀರಶೈವವೂ ಅಲ್ಲ. ಸರ್ವಜ್ಞ ಕವಿಯ ಕಾಲದಲ್ಲಿ (15ನೇ ಶತಮಾನದಲ್ಲಿ) "ಲಿಂಗಾಯತ" ಧರ್ಮ ಸ್ಥಾಪಕನ ಬಗ್ಗೆ ಗೊಂದಲ ಹುಟ್ಟಿಸಿದಂತೆ ಕಾಣುತ್ತದೆ. ಅದಕ್ಕೆಂದೇ ಸರ್ವಜ್ಞ ಕವಿ ಈ ಕೆಳಗಿನಂತೆ ಮೂದಲಿಸಿದ್ದಾನೆ.

ಬಸವ ಗುರುವಿನ ಹೆಸರ ಬಲ್ಲವರಾರಿಲ್ಲ
ಹುಸಿ ಮಾತನಾಡಿ ಕೆಡದಿರಿ । ಲಿಂಗಾಯತಕೆ
ಬಸವನೇ ಕರ್ತೃ ಸರ್ವಜ್ಞ

ವೀರಶೈವದ ಗೊಂದಲ ಈಗ್ಗೆ ಸುಮಾರು ನೂರು ವರ್ಷಗಳಿಂದಿರಬಹುದು. ಜಾತಿವಾದಿ ಹಾನಗಲ್ ಕುಮಾರಸ್ವಾಮಿಗಳೆಂಬ ಧೂರ್ತರು ಈ ಪದವನ್ನು ತೂರಿಸುವ ಪ್ರಯತ್ನ ಮಾಡಿದರು. ಈ ಧೂರ್ತರೇ ವೀರಶೈವ ಮಹಾಸಭೆಯನ್ನು ಹುಟ್ಟು ಹಾಕುವುದರೊಂದಿಗೆ ಈ ಗೊಂದಲವನ್ನು ಸೃಷ್ಟಿ ಮಾಡಿದರು ಅಷ್ಟೆ.

ಇಂತಿ ಶರಣಾರ್ಥಿಗಳು
ಹೆಚ್.ಎ.ಶರಣಪ್ಪ

ಶರಣು ಬಸವೇಶಾ

ಶಿವಾನಂದ ಕಲಗೊಂಡ, ಬಿಜಾಪುರ

ಶರಣು ಗುರುವೆ ಶರಣು ಬಸವೇಶಾ
ಹೃತ್ಕಮಲ ವಾಸ ॥ ಪ ॥
ಮೂಢ ಭಕ್ತಿಯ ದೂರ ಓಡಿಸಿ
ಸತ್ಯ ಧರ್ಮವ ಎತ್ತಿ ತೋರಿಸಿ
ದಯೆಯು ಧರ್ಮದ ಮೂಲವೆಂದು
ಸಾರಿ ಹೇಳಿದ ಪರಮ ಗುರುವೆ ॥ 1 ॥ ಶರಣು

ಮೇಲು ಕೀಳಿನ ಭ್ರಮೆಯ ಬಿಡಿಸಿ
ಜಾತಿ ಮತಗಳ ಭೇದ ತೊಲಗಿಸಿ
ಸಕಲ ಜೀವಾತ್ಮರಿಗೆ ಲೇಸನು
ಬಯಸುವವನೆ ನಿಜದಿ ಕುಲಜನು
ಎಂದು ಸಾರುತ ದಾರಿ ತೋರಿದ
ಕಣ್ಣು ತೆರೆಸಿದ ಪರಮ ಗುರುವೆ ॥ 2 ॥ ಶರಣು

ಕಾಯಕವ ಕೈಲಾಸ ಮಾಡಿ
ದೇಹವ ದೇಗುಲವ ಮಾಡಿ
ಇಷ್ಟಲಿಂಗದ ಕುರುಹು ನೀಡಿ
ತನ್ನ ಪೂಜೆಯ ತಾನೇ ಮಾಡಲು
ದಾರಿ ತೋರಿದ ಪರಮ ಗುರುವೆ ॥ 3 ॥ ಶರಣು

ಚಿ.ಮೂ.ಅವರ ಪೂರ್ವಗ್ರಹ ಪೀಡಿತ ದೃಷ್ಟಿ

ವಿಜಯ ವಾಣಿಯಲ್ಲಿ (2-2-2007)ರಲ್ಲಿ ಪ್ರಕಟವಾದ ಹಿರಿಯರಾದ ಡಾ॥ ಎಂ. ಚಿದಾನಂದಮೂರ್ತಿಯವರ ಅಭಿಪ್ರಾಯ ಓದಿ ನನಗೆ ಅಚ್ಚರಿಯಾಗಲಿಲ್ಲ. ಆದರೆ ಖೇದವಾಯಿತು. ಎಂಭತ್ತರ ಗಡಿಯಲ್ಲಿರುವ ಚಿ.ಮೂ.ಅವರಿಗೆ ಯಾವಾಗಲೂ ಸುದ್ದಿಯಲ್ಲಿರುವಾಸೆ. ಅದರಲ್ಲಿಯೂ ಬಸವಣ್ಣನವರನ್ನು ಕುಬ್ಜಗೊಳಿಸುವ ಮನೋಜಾಡ್ಯ ಅವರನ್ನು ಹಿಡಿದಿದೆ. ಕೆಲವು ತಿಂಗಳುಗಳ ಹಿಂದೆ ಇಂಥದೇ ಪ್ರಯತ್ನ ರೂಪದ ಲೇಖನವನ್ನು ಇನ್ನೊಂದು ದಿನಪತ್ರಿಕೆಯಲ್ಲಿ (ವಿಜಯ ಕರ್ನಾಟಕ) ಇದಕ್ಕೂ ಹೀನಾಯವಾಗಿ ಬಸವಣ್ಣನವರನ್ನು ಟೀಕಿಸಿದ್ದರು. ಆಗ ಪ್ರೊ॥ ಟಿ.ಆರ್.ಚಂದ್ರಶೇಖರ್ ಮತ್ತು ನಾನು ಉತ್ತರಗಳನ್ನು ನೀಡಿದೆವು. ನಾನು ಅಂದು ಮಠದ ಚಿದಾನಂದಮೂರ್ತಿ ಅವರಿಗೆ ಹಾಕಿದ ಸವಾಲುಗಳಿಗೆ ಇದುವರೆಗೂ ಅವರು ಉತ್ತರಿಸಿಲ್ಲ. ಉತ್ತರಿಸುವುದೂ ಸಾಧ್ಯವಿಲ್ಲ ಎಂಬುದು ನನಗೆ ಗ್ಯಾರಂಟಿ ಇದೆ. ಚಿ.ಮೂ.ಅವರ ಆಕ್ಷೇಪಣೆಗಳೇನು ?

ಪ್ರಸ್ತುತ ಡಾ॥ ಚಿ.ಮೂ. ಅವರು ಉದಾಹರಿಸಿದ ಪುಸ್ತಕಗಳನ್ನೋದಿ ನನ್ನ ಸೌಮ್ಯರೂಪದ ಪ್ರತಿಕ್ರಿಯೆಯನ್ನು ನೀಡುತ್ತಲಿದ್ದೇನೆ. ಚಿ.ಮೂ.ಅವರು ಪೂರ್ಣ ಮಾಹಿತಿಯನ್ನು ಪಡೆಯದೇ ಇಂಥ ಪೂರ್ವಗ್ರಹ ಪೀಡಿತ ಹೇಳಿಕೆಯನ್ನು ನೀಡಿದ್ದಾರೆ.

"ರಾಜನೀತಿ ವಿವೇಚಕರು" ಎಂಬ ಹೆಸರಿನಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯದ ಬಿ.ಎ., ದ್ವಿತೀಯ ಸೆಮಿಸ್ಟರ್ ಹೊಸ ಪಠ್ಯಕ್ರಮಕ್ಕೆ ಅನುಗುಣವಾಗಿ ಮೂವರು ಪ್ರಾಧ್ಯಾಪಕರು (ಡಾ॥ ಜೆ.ಎಸ್.ಪಾಟೀಲ, ಡಾ॥ ಐ.ಎಸ್.ವಿದ್ಯಾಸಾಗರ ಮತ್ತು ಡಾ॥ ಕವಂಟಿ ಎಸ್.ಹೆಚ್.) ಸ್ವತಂತ್ರವಾಗಿ ಸುಮಾರು 160-190 ಪುಟಗಳ ಪುಸ್ತಕಗಳನ್ನು ರಚಿಸಿದ್ದಾರೆ. ಅವುಗಳನ್ನು ಪ್ರಕಟಿಸಿದವರು ಒಂದು ಖಾಸಗಿ ಸಂಸ್ಥೆ. ಈ ಪುಸ್ತಕಗಳ ರಚನೆ ಮತ್ತು ಪ್ರಕಾಶನದಲ್ಲಿ ಸದರಿ ವಿಶ್ವವಿದ್ಯಾಲಯವು ಯಾವುದೇ ಪಾತ್ರವನ್ನು ವಹಿಸಿಲ್ಲ. ಈ ಪಠ್ಯಕ್ರಮ 2006-2007 ಸಾಲಿನಿಂದಲೂ ಚಾಲ್ತಿಯಲ್ಲಿದೆ. ಈ ಪುಸ್ತಕಗಳು 2007ರಿಂದ ಎರಡು ಮೂರು ಮುದ್ರಣಗಳನ್ನು ಕಂಡಿವೆ. ಇಷ್ಟು ಸಂಕ್ಷಿಪ್ತದಲ್ಲಿ ಬರೆಯಬಹುದಾದ ವಾಸ್ತವ ಸಂಗತಿ.

ಇನ್ನು ಮಠದ ಚಿದಾನಂದಮೂರ್ತಿಯವರ ಅಸೂಯೆಗೆ ಗುರಿಯಾಗಿರುವ ಭಾಗಕ್ಕೆ ಬರೋಣ. ಮಾನ್ಯ ಹಿರಿಯ ಸಂಶೋಧಕರು, ಡಾ॥ ಜೆ.ಎಸ್. ಪಾಟೀಲರ ಪುಸ್ತಕದಲ್ಲಿ (ಪುಟ179 ಮತ್ತು 174) ಬಂದಿರುವ ಮಾತುಗಳನ್ನೆತ್ತಿಕೊಂಡು ಆಕ್ಷೇಪಣೆಗಳನ್ನು ಎತ್ತಿದ್ದಾರೆ. ಚಿ.ಮೂ. ಅವರ ಆಕ್ಷೇಪಣೆಗಳಲ್ಲಿ ಯಾವ ಹುರುಳಿಲ್ಲ. ಜಾಗತಿಕ ರಾಜಕೀಯ ಚಿಂತಕರ ಸಾಲಿನಲ್ಲಿ ಕನ್ನಡಿಗ ಬಸವಣ್ಣನವರನ್ನು ತೌಲನಿಕವಾಗಿ ಅಧ್ಯಯನ ಮಾಡಿರುವುದನ್ನು ನಾವೆಲ್ಲರೂ ಸ್ವಾಗತಿಸಬೇಕು. ಈ ಲೇಖಕರಾದ ಡಾ॥ ಪಾಟೀಲರು ರಾಜನೀತಿ ಶಾಸ್ತ್ರವನ್ನು ಆಳವಾಗಿ ಅಧ್ಯಯನ ಮಾಡಿದವರು. ಹಾಗೆಯೇ ವಚನ ಸಾಹಿತ್ಯವನ್ನು ತುಂಬಾ ಪ್ರೀತಿಯಿಂದ ಆಳವಾಗಿ ಅಧ್ಯಯನ ಮಾಡಿದ್ದಾರೆ. ಅವರಷ್ಟೇ ಅಲ್ಲ, ಇತರ ಇಬ್ಬರು ಲೇಖಕರು ಬಸವಣ್ಣನವರ ಕಾಲವನ್ನು ಕ್ರಿ.ಶ.1121-1167 ಎಂದು ಬರೆದಿದ್ದಾರೆ. ಬಸವಣ್ಣನವರ ಕಾಲ ಇದುವರೆವಿಗೂ ನಿರ್ಧಾರವಾಗಿಲ್ಲ ಎಂದು ಹೇಳಲು ಚಿ.ಮೂ. ಅವರಿಗೆ ಯಾವ ಅಧಿಕಾರ ಇದೆ. ಬಸವಣ್ಣನವರ ಕಾಲವನ್ನು ಕೆಲವರು ಕ್ರಿ.ಶ.1102-1163 ಎಂದೂ ಕೆಲವರು ಬರೆದಿದ್ದಾರೆ. ಈ ಎಲ್ಲಾ ಆಧಾರಗಳನ್ನೂ ವಿವರವಾಗಿ ಅಧ್ಯಯನ ಮಾಡಿರುವ ನಾನು ಕ್ರಿ.ಶ. 1131-1167 ಸರಿಯಾದುದು ಎಂದು ಒಪ್ಪುತ್ತೇನೆ. ಇದರಿಂದ ಡಾ॥ ಚಿ.ಮೂ ಅವರಿಗೇನು ತೊಂದರೆ ?

ಬಸವಣ್ಣನವರು ಲಿಂಗಾಯತ ಧರ್ಮದ ಸ್ಥಾಪಕರೆಂದು ಇಂದು (ಕೆಲವರನ್ನುಳಿದು) ಬಹುಪಾಲು ಸಂಶೋಧಕರು ಮತ್ತು ವಚನಸಾಹಿತ್ಯದ ಅಭ್ಯಾಸಿಗಳು ಒಪ್ಪುತ್ತಾರೆ. ಎಲ್ಲಾ ಲಿಂಗಾಯತ ಧರ್ಮಗುರುಗಳು ಒಪ್ಪಿದ್ದಾರೆ. ಇದಕ್ಕಾಗಿ ಹಲವಾರು ಆಧಾರಗಳಿವೆ. ಹಲವಾರು ಗ್ರಂಥಗಳು ಪ್ರಕಟವಾಗಿವೆ. ಆದರೆ ಕೆಲ ಮೂಲಭೂತವಾದಿಗಳು ಮತ್ತು ವೇದ ಪ್ರಣೀತ ಜಂಗಮರು ವಿನಾಕಾರಣವಾಗಿ ವಿರೋಧಿಸುತ್ತಾರೆ. ಇವರಿಗೆ ಪ್ರಾಚೀನತೆಯ ಭೂತ ಹಿಡಿದಿದೆ. ಅಂಥವರ ಸಂಖ್ಯೆ ದಿನೇ ದಿನೇ ಕಡಿಮೆ ಆಗುತ್ತಲಿದೆ. ಅದು ಸಂತಸದ ಸಂಗತಿ.

ಪಂಚಪೀಠಗಳ ಪ್ರಚೋದನೆ :

ಮುಂದುವರೆದು ಈ ಪುಸ್ತಕವನ್ನು ಕರ್ನಾಟಕ ಸರಕಾರ ರದ್ದುಪಡಿಸಬೇಕೆಂದು ಚಿ.ಮೂ ಆಗ್ರಹಿಸಿದ್ದಾರೆ. ಒಂದು ವೇಳೆ ಕರ್ನಾಟಕ ಸರಕಾರವು ಚಿ.ಮೂ ಅವರ ಪೂರ್ವಗ್ರಹ ಪೀಡಿತ ಹಾಗೂ ಕಾಮಣಿಗಣ್ಣಿನ ನೋಟಗಳನ್ನು ನಂಬಿ, ಯಾವುದೇ ಕ್ರಮ ಕೈಗೊಂಡರೆ ಸರ್ಕಾರದ ವಿರುದ್ಧ ಹಾಗೂ ಮಠದ ಚಿ.ಮೂ.ಅವರ ವಿರುದ್ಧ ಸಾವಿರಾರು ಬಸವ ಭಕ್ತರೂ, ವಿಚಾರವಾದಿಗಳೂ ಜಾತ್ಯತೀತ ಮನೋಭಾವದ ಪ್ರಗತಿಶೀಲರು ತೀವ್ರವಾದ ಹೋರಾಟವನ್ನು ಆರಂಭಿಸುತ್ತಾರೆ. ಇದು ಖಚಿತ !! ಸದರಿ ಲೇಖಕರಿಗೆ, ಪ್ರಕಾಶಕರಿಗೆ ಹಾಗೂ ವಿಶ್ವವಿದ್ಯಾಲಯಕ್ಕೆ ನನ್ನಂಥವರ ಬೆಂಬಲ ಇದೆ.

ಮಠದ ಚಿ.ಮೂ.ಅವರ ಹಿಂದೆ ಪಂಚಪೀಠಗಳ ಪ್ರಚೋದನೆ ಇದೆ ಎಂಬುದಕ್ಕೆ ಈ ಪತ್ರಿಕಾಗೋಷ್ಠಿಗೆ ನೆರವಾದ ಶ್ರೀ ರೇಣುಕ ಶಿವಾಚಾರ್ಯ ಸ್ವಾಮಿ ಮತ್ತು ಮಹಾಂತಲಿಂಗ ಶಿವಾಚಾರ್ಯ ಸ್ವಾಮಿಗಳೇ ಸಾಕ್ಷಿ ! ಬಸವಣ್ಣನವರ ಜೀವಿತಾವಧಿಯಲ್ಲಿ ಕಾಡಿದ ಮೂಲಭೂತವಾದಿಗಳು ಇದೇ ಆಚಾರ್ಯ ಪರಂಪರೆಯವರು. ವರ್ಣವರ್ಗೀಕರಣವೇ ಇವರ ಸಿದ್ಧಾಂತ. ಈ ಸಿದ್ಧಾಂತವು ಬಸವ ಸಿದ್ಧಾಂತಕ್ಕೂ ವಿರೋಧ ಹಾಗೂ ನಮ್ಮ ಭಾರತದ ಸಂವಿಧಾನಕ್ಕೂ ವಿರೋಧ. ಮೂಲಭೂತವಾದಿ ಚಿ.ಮೂ.ಅವರು "ಬಸವಣ್ಣನವರು" ಎಂಬ ಒಂದು 'ಡರ್ಟಿ ಬುಕ್' ಅನ್ನು ಬರೆದಿದ್ದಾರೆ.

ಡರ್ಟಿ ಬುಕ್ ನಲ್ಲಿರುವ ಮಠದ ಚಿ.ಮೂ.ಅವರ ವಿಚಾರಗಳು :

ಮಠದ ಚಿ.ಮೂ.ಅವರು ಅವರ ಸದರಿ ಪುಸ್ತಕವನ್ನು ಎನ್.ಬಿ.ಟಿ(National Book Trust)ಗಾಗಿ ಮೊದಲು ಇಂಗ್ಲೀಷಿನಲ್ಲಿ ಬರೆದರು. ನಂತರ ಅದನ್ನು ಶಂಶ ಐತಾಳರು ಕನ್ನಡಕ್ಕೆ ಅನುವಾದಿಸಿದ್ದಾರೆ. (1972). ಈ ಪುಸ್ತಕದ ಪುಟ 42ರಲ್ಲಿ "ರಾಜ್ಯದ ಸಂಪತ್ತಿನ ಒಂದು ಭಾಗವನ್ನು ಮಾತ್ರ ಧಾರ್ಮಿಕ ಉದ್ದೇಶಗಳಿಗಾಗಿ ಬಳಸಿಕೊಂಡಿರಬಹುದಾದ ಸಾಧ್ಯತೆ ಇದೆ." ಎಂದು ಬಸವಣ್ಣನವರ ಮೇಲೆ ರಾಜ್ಯದ ಬೊಕ್ಕಸದ ದುರುಪಯೋಗದ ಆರೋಪವನ್ನು ಮಠದ ಚಿ.ಮೂ. ಹೊರಿಸಿದ್ದಾರೆ !! ಬಸವಣ್ಣನವರೇ ತಮ್ಮ ಒಂದು ವಚನದಲ್ಲಿ "ಊರ ಮುಂದೆ ಹಾಲ ಹಳ್ಳ ಹರಿಯುತ್ತಿರಲು, ಓರೆಯಾವಿನ ಬೆನ್ನಲ್ಲಿ ಹರಿಯಲೇಕಯ್ಯಾ? ಲಜ್ಜೆಗೆಡಲೇಕೆ ? ನಾಣುಗೆಡಲೇಕೆ ? ಕೂಡಲಸಂಗಮದೇವನುಳ್ಳನ್ನಕ್ಕ ಬಿಜ್ಜಳನ ಭಂಡಾರವೆನಗೇಕಯ್ಯಾ?" ಎಂದು ಹೇಳುತ್ತಾರೆ. ಇದೇ ಮಾತನ್ನು ಎತ್ತಿ, ಒಂದು ಸಾರ್ವಜನಿಕ ಸಭೆಯಲ್ಲಿ ಮಠದ ಚಿ.ಮೂ. ಅವರಿಗೆ "ನೀವು ಈ ಆರೋಪವನ್ನು ಸಿದ್ಧಪಡಿಸಿದರೆ, ನಾನು ನಿಮಗೆ ಈ ರೋಡಿನ ಮೇಲೆಯೇ ಸಾಷ್ಟಾಂಗ ನಮಸ್ಕಾರ ಹಾಕುತ್ತೇನೆ. ಇಲ್ಲವಾದರೆ ನೀವು ಇನ್ನು ಮುಂದೆ ಬಸವಣ್ಣನವರ ಬಗ್ಗೆ ಅಥವಾ ವಚನ ಸಾಹಿತ್ಯದ ಬಗ್ಗೆ ಬರೆಯಲೇಬಾರದೆಂದು" ಚಾಲೆಂಜ್ ಹಾಕಿದೆ. ಆಗ ಮಠದ ಚಿ.ಮೂ.ಗಳು ಲಜ್ಜೆಗೆಟ್ಟು ಉತ್ತರಿಸಿಲ್ಲ. ಇದುವರೆಗೂ ಉತ್ತರಿಸಿಲ್ಲ. ಅದು ಅವರಿಂದ ಸಾಧ್ಯವೂ ಇಲ್ಲ.

ಇನ್ನೊಂದು ಪುಟದಲ್ಲಿ (ಪುಟ 50)ಮಾನಗೆಟ್ಟಿರುವ ಮಠದ ಚಿ.ಮೂ. "ಅವರ ಅನುಯಾಯಿಗಳು ಹಾಗೂ ಸಂಗಡಿಗರು ಬಡವರಾಗಿದ್ದರಿಂದ ದೇವಾಲಯಗಳನ್ನು ಬಹಿಷ್ಕರಿಸುವುದಲ್ಲದೆ, ಬೇರಾವ ಮಾರ್ಗವೂ ಬಸವಣ್ಣನವರಿಗೆ ಉಳಿದಿರಲಿಲ್ಲ." ಎಂದು ಫರ್ಮಾನು ಹೊರಡಿಸುತ್ತಾರೆ ! "ದೇಹವೇ ದೇವಾಲಯ"ವೆಂಬ ಅತ್ಯಂತ ವಿನೂತನ ಹಾಗೂ ಉದಾತ್ತ ತತ್ತ್ವವನ್ನು ಇವರು ಉಡಾಫೆ ಮಾತುಗಳಿಂದ ಧಿಕ್ಕರಿಸುತ್ತಾರೆ. ಈ ಪುಸ್ತಕವು ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾದ ಕೃತಿ. ಚಿ.ಮೂ. ಅವರ ಸುದೈವ. ಈ ಪುಸ್ತಕ ನನ್ನ ಕಣ್ಣಿಗೆ ಪ್ರಕಟವಾದಾಗಲೇ ಬಿದ್ದಿದ್ದರೆ, "ಆನು ದೇವಾ ಹೊರಗಣವನು" ಹಾಗೂ "ಧರ್ಮಕಾರಣ" ಕೃತಿಗಳಿಗೆ ಬಂದ ಗತಿ ಇದಕ್ಕೂ ಖಂಡಿತವಾಗಿ ಬರುತ್ತಿತ್ತು. ಮಠದ ಚಿ.ಮೂ. "ಧರ್ಮಕಾರಣ"ದ ಪರವಾಗಿ ದೇಶದ ಸರ್ವೋಚ್ಚ ನ್ಯಾಯಾಲಯದವರೆಗೆ ಹೋಗಿ, ಮುಖೇಡಿಯಾಗಿ ಹಿಂತಿರುಗಿದ್ದಾರೆ.

ಕವಿ ಕಂಡ ಚಿ.ಮೂ

ಪ್ರಗತಿಶೀಲ ಕವಿ ಗೆಳೆಯ ಪ್ರೊ॥ ಅಲ್ಲಮಪ್ರಭು ಬೆಟ್ಟದೂರು ಅವರು ಚಿದಾನಂದ ಮೂರ್ತಿ ಅವರನ್ನು ಕುರಿತು ಆರು ಚುಟುಕು ಕವನಗಳನ್ನು ಬರೆದಿದ್ದಾರೆ. ಅವುಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಉದ್ಧರಿಸುತ್ತೇನೆ.

"ಚಿದಾನಂದಮೂರ್ತಿ
ಹಿಂದೆಯಿತ್ತು ಕೀರ್ತಿ
ಕಳೆದು ಹೋಗಿ ಚಿಂತನೆಯ ನೀತಿ,
ಆದಿರೇಕೆ ಕೋಮುವಾದವ ಕೋತಿ !"

"ಚಿದಾನಂದಮೂರ್ತಿಗೆ ಕೊಡಿ ಅಧಿಕಾರ
ಅದಕ್ಕಾಗಿ ಹೋರಾಡೋಣ ಬಾರ !
ಇಲ್ಲದಿದ್ದರಾಗುವರು ಖಾರ !"

"ಚಿದಾನಂದಮೂರ್ತಿಗೆ ಹಿಡಿದಿರುವುದು ಹುಚ್ಚು !
ಅದಕ್ಕಾಗಿ ದಿನಕ್ಕೊಂದು ಕಡೆ ಹಚ್ಚುವರು ಕಿಚ್ಚು !

ಕನ್ನಡಕ್ಕಾಗಿ ಹಾಕುವೆನು ಬಾಂಬು
ಅಂದವರೀಗ ಯಾರದೋ ಕೈಯಲ್ಲಿ ಕಹಳೆ, ಕೊಂಬು !"

ಪಂಪಾ ಸರೋವರದಲ್ಲಿ ಧುಮುಕಿದರು
ಮೀನುಗಾರರು ಇವರ ಹೊರತೆಗೆದರು
"ಏನಾದರೂ ಮಾಡುತಿರು ತಮ್ಮ" ಸೂತ್ರದವರು!

ಇವರ ಪ್ರಯತ್ನದಿಂದಾಯ್ತು ಕನ್ನಡ ವಿ.ವಿ.
ಫಲಕೊಡಲಿಲ್ಲ ಕೀರ್ತಿ
ಕುಲಪತಿಗಳಾದರು ಬೇರೆ ಮೂರ್ತಿ !

-(ಗುಲಗಂಜಿ 2009)

ಬಸವಣ್ಣ ಸದ್ಬುದ್ಧಿ ಕರುಣಿಸಲಿ :

ನಾನು ಹಿಂದೊಂದು ಸಲ ಅವರಿಗೆ ಪತ್ರ ಬರೆದು "ನೀವು ಇದುವರೆಗೆ ಮಾಡಿರುವ ಸಂಶೋಧನೆ ಮತ್ತು ಸಾಧನೆಯ ಬಗ್ಗೆ ನನಗೂ, ನನ್ನಂಥ ಹಲವರಿಗೆ ಗೌರವ ಇದೆ. ಆದರೆ ಇತ್ತೀಚೆಗೆ ಪ್ರಚಾರದ ಹುಚ್ಚಿಗೆ ಬಿದ್ದು ಅವೈಜ್ಞಾನಿಕ ಹಾಗೂ ಅವಾಸ್ತವ ಮತ್ತು ಪ್ರಚೋದನಕಾರಿ ಹೇಳಿಕೆಗಳನ್ನು ಹೇಳುತ್ತಿರುವಿರಿ. ದಯವಿಟ್ಟು ಹೇಳಬೇಡಿ. ನಿಮ್ಮನ್ನು ಆ ಸ್ಥಾನದಿಂದ ಕೆಳಗಿಳಿಸಲು ನನಗಂತೂ ನೋವಾಗುತ್ತದೆ." ಈಗಲೂ ಅದೇ ಮಾತನ್ನು ಪುನರುಚ್ಚರಿಸುತ್ತೇನೆ. ಕೊನೆಯಲ್ಲಿ ಕವಿ ಕೇಶಿರಾಜನ ಒಂದು ಮಾತನ್ನು ಬರೆಯುತ್ತೇನೆ. "ಪಿರಿಯರಿವರೆಂದು ಧಿಕ್ಕರಿಸಿ ನುಡಿವುದು ತಕ್ಕುದಲ್ತು". ಗುರು ಬಸವಣ್ಣನವರು ಮಠದ ಚಿ.ಮೂ.ಅವರಿಗೆ ಸದ್ಬುದ್ಧಿಯನ್ನು ಕರುಣಿಸಲಿ ಎಂದು ಹಾರೈಸುತ್ತೇನೆ !!

ಡಾ॥ ಹೆಚ್. ಚಂದ್ರಶೇಖರ
ಸಂಗಮ, ಎಂ.ಐ.ಜಿ. 77, 6ನೇ ಕ್ರಾಸ್, 6ನೇ ಮುಖ್ಯರಸ್ತೆ
ಕೆಹೆಚ್‌ಬಿ ಕಾಲೋನಿ, 2ನೇ ಹಂತ
ಬಸವೇಶ್ವರ ನಗರ, ಬೆಂಗಳೂರು-560079
ದೂರವಾಣಿ : 080-23389473 / 94494 03786

ಬೆಳ್ಳಿ ನಾಣ್ಯ ಬಿಡುಗಡೆ

25ನೆಯ ಶರಣಮೇಳದ ಸವಿನೆನಪಿಗಾಗಿ 10 ಗ್ರಾಂ ತೂಕದ ಬೆಳ್ಳಿನಾಣ್ಯವನ್ನು ಬಿಡುಗಡೆ ಮಾಡಲಾಗಿದ್ದು ಮುಖ ಬೆಲೆ ರೂ.1000/- ಕೊರಿಯರ್ ಛಾರ್ಜು ರೂ.40/-. ಬೇಕಾದವರು ಮನಿಯಾರ್ಡರ್ ಇಲ್ಲವೇ ಬ್ಯಾಂಕ್ ಡ್ರಾಫ್ಟ್ ಮೂಲಕ ಹಣ ಕಳಿಸಬೇಕು. ಚೆಕ್ಕುಗಳನ್ನು ಸ್ವೀಕರಿಸಲಾಗುವುದಿಲ್ಲ. ಬ್ಯಾಂಕ್ ಡ್ರಾಫ್ಟ್ ತೆಗೆಸುವವರು "ಬಸವ ಧರ್ಮ ಪೀಠ, ಬೆಂಗಳೂರು" ಹೆಸರಿಗೆ ತೆಗೆಸಿ, ಬೆಂಗಳೂರಿನ ಬಸವ ಮಂಟಪದ ವಿಳಾಸಕ್ಕೆ ಕಳಿಸಬೇಕು. ಸಂಪರ್ಕಿಸುವ ದೂರವಾಣಿ : 9663385657.

ಬಸವ ಕಲ್ಯಾಣದಲ್ಲಿ ಲಭ್ಯವಿರುವ ವಸತಿ ಗೃಹಗಳು

1. ಹೋಟೆಲ್ ಕಮಲಾ ರೆಸಿಡೆನ್ಸಿ (ಕೆ.ಎಸ್.ಆರ್.ಟಿ.ಸಿ ಬಸ್ ಸ್ಟ್ಯಾಂಡ್ ಎದುರು.)

ಎ/ಸಿ ಇರುವ ಡಬ್ಬಲ್ ರೂಂ	800/-	(ಒಂದು ದಿನಕ್ಕೆ)
ಎ/ಸಿ ಇಲ್ಲದ ಡಬ್ಬಲ್ ರೂಂ	350/-	(ಒಂದು ದಿನಕ್ಕೆ)
ಎ/ಸಿ ಇಲ್ಲದ ರೂಮಿಗೆ ಹೆಚ್ಚುವರಿ ಹಾಸಿಗೆ	75/-	(ಒಂದು ದಿನಕ್ಕೆ)
ಎ/ಸಿ ಇರುವ ರೂಮಿಗೆ ಹೆಚ್ಚುವರಿ ಹಾಸಿಗೆ	100/-	(ಒಂದು ದಿನಕ್ಕೆ)

ಈ ಲಾಡ್ಜಿನಲ್ಲಿ ಎ/ಸಿ ಇಲ್ಲದ 8, ಎ/ಸಿ ಇರುವ 3 ರೂಮುಗಳಿವೆ
ಸಂಪರ್ಕಿಸುವ ದೂರವಾಣಿ : 08481-252751/251751/9886534239

2. ಬಸವ ಕಲ್ಯಾಣ ಅಭಿವೃದ್ಧಿ ಪ್ರಾಧಿಕಾರದ ವಿಶ್ರಾಂತಿ ಗ್ರಹ
ಎ/ಸಿ ಇಲ್ಲದ ಡಬ್ಬಲ್ ರೂಂ. 500 ರೂ. (2 ಕೋಣೆ ಮಾತ್ರ ಲಭ್ಯ)
ಸಂಪರ್ಕಿಸುವ ದೂರವಾಣಿ : 9901445848 (ವಿಜಯಕುಮಾರ್)

3. ಬಸವ ಕಲ್ಯಾಣ ಟೂರಿಸ್ಟ್ ಹೋಟೆಲ್ : (ಸಾದಾ ವ್ಯವಸ್ಥೆ)

ಎ/ಸಿ ಇಲ್ಲದ ಸಿಂಗಲ್ ರೂಂ	120/-	(ಒಂದು ದಿನಕ್ಕೆ)
ಎ/ಸಿ ಇಲ್ಲದ ಡಬ್ಬಲ್ ರೂಂ	250/-	(ಒಂದು ದಿನಕ್ಕೆ)

ಸ್ನಾನಗೃಹ-ಶೌಚಾಲಯ ಜೊತೆಗೆ ಇರದ ಡಬ್ಬಲ್ ರೂಂ. 150/-
ಇಲ್ಲಿ ಲಭ್ಯವಿರುವ ಕೋಣೆಗಳು 19(ಹತ್ತೊಂಬತ್ತು)
ಸಂಪರ್ಕಿಸುವ ದೂರವಾಣಿ : 08481-251666

4. ಕಲ್ಪನಾ ಲಾಡ್ಜ್ ಎಂಬುದು ಅಕ್ಟೋಬರ್ 1ಕ್ಕೆ ಉದ್ಘಾಟನೆಯಾಗುತ್ತಲಿದೆ. ನಂತರ ವಿವರ ತಿಳಿಸಲು ಸಾಧ್ಯ

ಹುಮನಾಬಾದಿನಲ್ಲಿ ಲಭ್ಯವಿರುವ ವಸತಿ ಗೃಹಗಳು

ಹುಮನಾಬಾದ್ ಬಸವಕಲ್ಯಾಣದಿಂದ ಕೇವಲ 22 ಕಿ.ಮಿ. ದೂರದಲ್ಲಿದ್ದು ಸ್ವಂತ ವಾಹನ ಇರುವವರು ಹೆದ್ದಾರಿಯ ಮೇಲಿರುವ ಹುಮ್ನಾಬಾದಿನಲ್ಲಿ ಇರುವ ವಸತಿ ಗೃಹಗಳಲ್ಲಿ ಇದ್ದು ಕಾರ್ಯಕ್ರಮಕ್ಕೆ ಬರಬಹುದು.

1. ಶ್ರೀ ವೀರಭದ್ರೇಶ್ವರ ಲಾಡ್ಜ್

ಎ/ಸಿ ಇಲ್ಲದ ಡಬ್ಬಲ್ ರೂಂ	350/- (ಒಂದು ದಿನಕ್ಕೆ)	2 ರೂಂ ಇವೆ
ಎ/ಸಿ ಇಲ್ಲದ 4 ಬೆಡ್ಡಿನ ರೂಂ	450/- (ಒಂದು ದಿನಕ್ಕೆ)	2 ರೂಂ ಇವೆ

ಸಂಪರ್ಕಿಸುವ ದೂರವಾಣಿ ಆರ್.ವಿ.ಪಾಟೀಲ್ : 08483-270369

2. ಸಾಯಿರಾಮ್ ಲಾಡ್ಜ್

ಎ/ಸಿ ಇರುವ ಡಬ್ಬಲ್ ರೂಂ	450/- (ಒಂದು ದಿನಕ್ಕೆ)	2 ರೂಂ ಇವೆ
ಎ/ಸಿ ಇಲ್ಲದ ಡಬ್ಬಲ್ ರೂಂ	250/- (ಒಂದು ದಿನಕ್ಕೆ)	3 ರೂಂ ಇವೆ
ಎ/ಸಿ ಇಲ್ಲದ ಸಿಂಗಲ್ ರೂಂ	150/- (ಒಂದು ದಿನಕ್ಕೆ)	2 ರೂಂ ಇವೆ

ಸಂಪರ್ಕಿಸುವ ದೂರವಾಣಿ ರೇವಣಸಿದ್ದಪ್ಪ : 8050166021
ಸಂತೋಷ್ : 8088548356

2. ನಾರಾಯಣಾದ್ರಿ ಲಾಡ್ಜ್ (ಬಸ್ ಸ್ಟ್ಯಾಂಡ್ ಹತ್ತಿರ)

ಎ/ಸಿ ಇರುವ ರೂಂ	200 ರಿಂದ 500/- (ಒಂದು ದಿನಕ್ಕೆ)	4 ರೂಂ ಇವೆ
ಎ/ಸಿ ಇರುವ ಡಬ್ಬಲ್ ರೂಂ	350 ರಿಂದ 900/- (ಒಂದು ದಿನಕ್ಕೆ)	4 ರೂಂ ಇವೆ

ಸಂಪರ್ಕಿಸುವ ದೂರವಾಣಿ : 9008733458 / 8861447652

ಹೆಚ್ಚಿನ ಸಹಾಯಕ್ಕಾಗಿ ಸಂಪರ್ಕಿಸಿರಿ - 94804 97346
ಪೂಜ್ಯ ಶ್ರೀ ಬಸವ ಪ್ರಭು ಸ್ವಾಮೀಜಿ, ಬಸವ ಮಹಾಮನೆ
ಬಸವ ಕಲ್ಯಾಣ

ಭಾಗ-45 **ಬಸವ ವಚನಾಮೃತ** - ಮಾತಾಜಿ

973. ಜೀವನದ ನಶ್ವರತೆ

ನಾರಗೋಣಿಯ ಮೂಲೆಯ ಹೊಲಿದು,
ನೀರ ಭಂಡವ ತುಂಬಿದರಯ್ಯಾ,
ಊರೊಳಗೈವರು ಕಳ್ಳರು ಸಾರಲೀಯರು: ಧರ್ಮವಿಲ್ಲಯ್ಯಾ,.
ಊರು ಸೂರೆಗೊಳ್ಳದ ಮುನ್ನ
ಕೂಡಿಕೊಳ್ಳಿ ಲಿಂಗದೇವನ. –ಬವದೀ. 975

ನಾರಿನಿಂದ ಮಾಡಿದ ಗೋಣಿ ಚೀಲದ ಮೂಲೆಯನ್ನು ಹೊಲಿದು ಅದರಲ್ಲಿ ನೀರನ್ನು ತುಂಬಿದರೆ ಆ ನೀರು ನಿಲ್ಲುವುದೆ ? ಅದೇ ರೀತಿ ಈ ಶರೀರದ ಗುಣಧರ್ಮ. ಇದಕ್ಕೆ ಒಂಭತ್ತು ದ್ವಾರಗಳು. ಈ ಶರೀರವೆಂಬ ಊರೊಳಗೆ ಪಂಚ ತನ್ಮಾತ್ರೆಗಳೆಂಬ ಕಳ್ಳರು ಬೇರೆ. ಇಲ್ಲಿ ಆತ್ಮವೆಂಬ (ಪರಮಾತ್ಮನ ಅಂಶ) ನಿಧಿ ಇರುವುದೇನೋ ನಿಜ. ಆದರೆ ಅದನ್ನು ಪಡೆಯಲು ಶಬ್ದ, ಸ್ಪರ್ಶ, ರೂಪ, ರಸ, ಗಂಧ ಎಂಬ ವಿಷಯಗಳು ಅವಕಾಶ ಕೊಡುತ್ತಲಿಲ್ಲ. ಅವುಗಳಲ್ಲಿ ದೇವರ ಕಡೆಗೆ ಒಲವಿಲ್ಲ. ಧರ್ಮವಿಲ್ಲ. ಶರೀರವೆಂಬ ಊರಿನೊಳಗೆ ಭಕ್ತಿ, ಜ್ಞಾನ, ವೈರಾಗ್ಯ, ವಿವೇಕ ಮುಂತಾದ ಸಂಪತ್ತು ಇದೆ. ತನ್ಮಾತ್ರೆಗಳ ಅಬ್ಬರದಲ್ಲಿ ಈ ಸಂಪತ್ತು ಸೂರೆಯಾಗುತ್ತಿದೆ. ಈ ಸಂಪತ್ತು ಸೂರೆಗೊಳ್ಳುವ ಮುನ್ನವೇ ಲಿಂಗದೇವನನ್ನು ಕೂಡಿಕೊಳ್ಳಬೇಕು.

974. ದಾಸೋಹದ ಹಂಬಲ

ಆಶೆ ಇಚ್ಛೆಗೆನ್ನ ಘಾಸಿ ಮಾಡದಿರಯ್ಯಾ,
ದಾಸೋಹಿಯಾಗಿರ್ಪ ದಾಸನಾಗಿರಿಸೆನ್ನ
ಲಿಂಗದೇವಾ, ನಿಮ್ಮ ಧರ್ಮ. –ಬವದೀ. 976

"ಆಸೆ ಮತ್ತು ಅಪೇಕ್ಷೆ (ಇಚ್ಛೆ) ಬಹು ದೊಡ್ಡ ಸೆಳೆತಗಳು. ಇನ್ನೂ ಹೆಚ್ಚು ಗಳಿಸಬೇಕು ಎಂಬ ಆಸೆ ಮತ್ತು ಏನೆಲ್ಲವನ್ನು ಪಡೆಯಬಹುದು ಎಂಬ ಹಂಬಲ ವ್ಯಕ್ತಿಯನ್ನು ಯಾವ್ಯಾವ ದಾರಿಗೋ ಎಳೆದುಕೊಂಡು ಹೋಗುತ್ತವೆ. ಅಂಥ ಸೆಳೆತಕ್ಕೆ ಲಿಂಗದೇವನೇ ನನ್ನನ್ನು ಸಿಕ್ಕಿಸದಿರು. ನಾನು ಬಯಸುವುದು ಭೃತ್ಯನಾಗಿ ಇರುವಂತಹ ದಾಸೋಹದ ಮನಸ್ಥಿತಿಯನ್ನು. ದಾಸತ್ವದಲ್ಲಿ ಈಶತ್ವವಿದೆ ನೀನು ಧರ್ಮಿಯಾದರೆ ಅದನ್ನೇ ನನಗೆ ಕರುಣಿಸು." ಎಂದು ಗುರು ಬಸವಣ್ಣನವರು ಲಿಂಗದೇವರಲ್ಲಿ ಬೇಡುತ್ತಾರೆ.

975. ಸದ್ಗುಣ ಮತ್ತು ದಾಸೋಹ

ಶ್ವಾನ ಮಡಕೆಯನಿಳುಹಿ ಬೋನವನುಂಡು
ಮಡಕೆಯನೇರಿಸಲರಿಯದಂತೆ
ನಾನು ಷಟ್‌ಸ್ಥಲವನೋದಿ ಏನ ಮಾಡುವೆನಯ್ಯಾ,
ಅವಗುಣಂಗಳೆನ್ನ ಬೆನ್ನ ಬಿಡದನ್ನಕ್ಕರ?
ಕಾರ್ಯವುಳ್ಳ ಕರ್ತ ಜಂಗಮಲಿಂಗದಲ್ಲಿ
ನಾನು ದಾಸೋಹವ ಮಾಡಲರಿಯದೆ ಕೆಟ್ಟೆನು ಲಿಂಗದೇವಾ. –ಬವದೀ. 977

ನಾಯಿಯು ಮಡಿಕೆಯೊಳಗಿರುವ ಆಹಾರವನ್ನು ಪಡೆಯಲು ನಿಗುರಿ ನಿಗುರಿ ಅದನ್ನು ಬಗ್ಗಿಸುವುದು. ಮಡಿಕೆಯೊಳಗಿನ ಆಹಾರವನ್ನು ನೆಕ್ಕಿ ತಿನ್ನುವುದು. ನಂತರ ಆ ಮಡಿಕೆಯನ್ನು ಸರಿಯಾಗಿ ಇಡಲಾರದು. ಆಗ ಮನೆಯ ಮಾಲಿಕರು ನೋಡಿ "ಇದು ನಾಯಿಯದೇ ಕೆಲಸ" ಎಂದು ಊಹಿಸಿ ಚೆನ್ನಾಗಿ ಬಡಿಯುವರು. ಹಾಗೆ ಕೆಲವರು ಧರ್ಮದ ಬಗ್ಗೆ, ಷಟಸ್ಥಲ, ಪಂಚಾಚಾರ ಇತ್ಯಾದಿಗಳ ಬಗ್ಗೆ ಬಹಳ ಚೆನ್ನಾಗಿ ಭಾಷಣ ಬಿಗಿಯುವರು. ಆದರೆ ವೈಯಕ್ತಿಕ ಜೀವನದಲ್ಲಿ ಅವಗುಣ ಬಿಟ್ಟಿರುವುದಿಲ್ಲ. ಸದ್ಗುಣ ಅಳವಡಿಸಿಕೊಂಡಿರುವುದಿಲ್ಲ. ಹೀಗಾಗಿ ಜನರಿಂದ ದೂಷಣೆಗೆ ಒಳಗಾಗುವರು. ಶರಣನ ನಿಜ ಲಕ್ಷಣವೆಂದರೆ ಸದ್ಗುಣ ಸಂಪನ್ನತೆ ಮತ್ತು ದಾಸೋಹಾಸಕ್ತಿ. ಗುರು ಬಸವಣ್ಣನವರು ಜಂಗಮನ ಕುರಿತು

ಒಂದು ಅರ್ಥಗರ್ಭಿತ ಪದವನ್ನು ಉಪಯೋಗಿಸಿದ್ದಾರೆ. ಜಂಗಮನನ್ನು "ಕಾರ್ಯವುಳ್ಳ ಕರ್ತ" ಎಂದಿದ್ದಾರೆ. ನಿಜ, ಲಿಂಗದೇವನು ನಿರಾಕಾರ, ನಿರವಯ, 'ನಿಷ್ಕ್ರಿಯ'. ಅವನ ಪ್ರತಿನಿಧಿಯಾದ ಜಂಗಮನು ಕ್ರಿಯಾ ಚಟುವಟಿಕೆಯಿಂದ ಕೂಡಿದ ಸಾಕಾರ. ದೈವೀಕೆಲಸಗಳನ್ನು ಮಾಡಲೆಂದೇ ಬಂದ, ಈ ಭುವಿಯಲ್ಲಿ ನಿಂದ ಜಂಗಮನಿಗೆ ಧನ ದಾಸೋಹ ಮಾಡದವರು ಕರ್ತವ್ಯ ಹೀನರಾಗುವರು.

976. ಶರಣಾಗತಿ

ಆನೆತ್ತ ಬಲ್ಲೆನಯ್ಯಾ ನಿಮ್ಮ ಭಕ್ತಿಯ ಘನವ?
ಆನೆತ್ತ ಬಲ್ಲೆನಯ್ಯಾ ನಿಮ್ಮ ಶ್ರೀಪಾದದ ನಿಲವ?
ಕಾಯದ ಕಳವಳದ
ಮರೆಯಲಿದ್ದವರಲ್ಲಿ ನಂಬುಗೆಯುಳವಡುವುದೆ?
ಲಿಂಗದೇವಾ, ಎನ್ನವಗುಣವ ನೋಡದೆ ಕರುಣದಿಂದ
ಭಕ್ತಿಯ ನಿಲವ ತೋರಾ ತಂದೆ. –ಬವದೀ. 978

ಭಕ್ತಿ ಒಂದು ದೊಡ್ಡ ಸಂಪತ್ತು. ಇದಕ್ಕೆ ಬಹು ಮುಖಿ ಆಯಾಮ ಉಂಟು. ಈ ಕ್ಷೇತ್ರದಲ್ಲಿ ಒಂದು ಬಣ್ಣದ ಕಲ್ಲನ್ನು ಪೂಜಿಸುವದೂ ಭಕ್ತಿ ಎನಿಸಿಕೊಳ್ಳುವುದು. ಸೃಷ್ಟಿಕರ್ತನಾದ ದೇವನನ್ನು ಪ್ರೌಢಭಕ್ತಿಯಿಂದ ಧ್ಯಾನದ ಮುಖಾಂತರ ಆರಾಧಿಸುವುದೂ ಭಕ್ತಿ ಎನಿಸಿಕೊಳ್ಳುವುದು. ಇಂಥ ಭಕ್ತಿಯ ಆಳವನ್ನು ಅರಿಯುವುದು ಬಹಳ ಕಷ್ಟಸಾಧ್ಯವಾದುದು ಎಂದು ಗುರು ಬಸವಣ್ಣನವರು ವಿಸ್ಮಯಪಡುತ್ತಾರೆ. ಹಾಗೆಯೇ ದೇವನ ನಿಲುವನ್ನು ಅರಿಯುವುದೂ ಕಷ್ಟಸಾಧ್ಯವಾದುದು. ಎಂತೆಂತಹ ಜ್ಞಾನಿಗಳೂ ಅರಿಯಲಾರದೆ ತತ್ತರಿಸಿಹೋಗಿದ್ದಾರೆ. ಇನ್ನು ನನ್ನ ಪಾಡೇನು ? ಎಂದು ವಿಷಾದ ವ್ಯಕ್ತಪಡಿಸುತ್ತಾರೆ. ಶರೀರದ ಸೆಳೆತ, ಮನದ ಮರೆವೆ, ಇವುಗಳ ಮರೆಯಲ್ಲಿ ಇರುವವರಲ್ಲಿ ದೇವರಲ್ಲಿ ನಂಬಿಕೆ ಅಳವಡುವುದುಂಟೆ ? "ನನ್ನಲ್ಲಿ ಏನಿದೆಯೋ ಏನಿಲ್ಲವೋ ನಾನರಿಯೆ. ನೀನೆ ನನ್ನ ಅವಗುಣಗಳನ್ನು ಗಮನಿಸದೆ ನಿಜವಾದ ಭಕ್ತಿ ಅಳವಡುವಂತೆ ಮಾಡು ಲಿಂಗತಂದೆ" ಎಂದು ಲಿಂಗದೇವನಲ್ಲಿ ಬೇಡುತ್ತಾರೆ.

977. ಸಂದೇಹ ಬೇಡ

ಎನ್ನ ಭಕ್ತಿ ಎಲವದ ಕಾಯ ಫಲದಂತೆ ನೋಡಯ್ಯಾ,
ಹೊರಗೆ ಹೆಂಪು, ಒಳಗೆ ಬೂರವಯ್ಯಾ,
ನಿಮ್ಮ ದೇವರೆಂದು ಪೂಜಿಸಿ, ಮಾನವರೆಂದು ಮರೆದೆನು.
ಸುಗುಣ ನಿರ್ಗುಣವೆರಡೂ ಅಳವಡದ ಸಂದೇಹಿ ನಾನಯ್ಯಾ.
ಲಿಂಗದೇವಾ,
ಎನ್ನ ಅಪರಾಧವ ಸೈರಿಸುವಡೆ ನೀವಲ್ಲದೆ ಮತ್ತಾರನೂ ಕಾಣೆ,
ಶರಣಾರ್ಥಿ ಶರಣಾರ್ಥಿ, ಕೃಪೆಯಿಂದ ಕರುಣಿಸಿರಯ್ಯಾ. –ಬವದೀ. 979

ಗುರು ಬಸವಣ್ಣನವರು ತಮ್ಮ ಮೇಲೆ ಹಾಕಿಕೊಂಡು ತತ್ತ್ವವನ್ನು ಹೇಳುವರು. ಕೆಲವರ ಭಕ್ತಿ ಎಲವದ ಕಾಯಿಯಂತೆ. ನೋಡಲಿಕ್ಕೆ ಕಾಯಿ ಸುಂದರವಾಗಿ ಇರುತ್ತದೆ. ಅವು ಒಣಗಿದಾಗ ಸಿಡಿಯುತ್ತವೆ. ಒಳಗಡೆ ಅತ್ಯಂತ ನಯವಾದ ರೇಷ್ಮೆ ಎಳೆಯಂಥ ನೂಲು ಇರುತ್ತದೆ. ಕಾಯಿ ಸಿಡಿದು ಒಳಗಿನ ಬೂರಗವು ಗಾಳಿಯಲ್ಲಿ ಚದುರಿ ಬಿಡುವುದು, ಕೈಗೆ ಸಿಗುವುದೇ ಕಷ್ಟ. (ಬಹಳ ಕಷ್ಟಪಟ್ಟು ಸಂಗ್ರಹಿಸಿ ಕರಕುಶಲಗಾರರು ಬೂರಗದ ಅರಳೆಯಿಂದ ಹಾಸಿಗೆ, ದಿಂಬು ಸಿದ್ಧಪಡಿಸುವರು. ಅವು ಬಹಳ ತುಟ್ಟಿ.) ಎಲವದ (ಬೂರಲ) ಮರ ಮತ್ತು ಬೂರಗ ಒಂದೆಯೋ, ಬೇರೆ ಬೇರೆಯೋ ಎಂಬ ಸಂದೇಹ ನನಗೆ ಪರಿಹಾರವಾಗಿಲ್ಲ. ಏಕೆಂದರೆ ಬೂರಗದ ಅರಳೆಗೆ ವಿಪರೀತ ಬೆಲೆ. ಅದನ್ನು ನಿಷ್ಪ್ರಯೋಜಕ ಎನ್ನಲಾಗದು. ಇನ್ನೊಂದು ವಚನದಲ್ಲಿ ಧರ್ಮಪಿತರು 'ಎಲವದ ಮರ ಹೂತು ಫಲವಾದ ತೆರನಂತೆ, ಸಿರಿಯಾದರೇನು ಶಿವಭಕ್ತಿ ಇಲ್ಲದನ್ನಕ್ಕ' ಎನ್ನುತ್ತಾರೆ. ಇಲ್ಲಿ ಎಲವದ ಮರದ ಫಲ, ಶಿವಭಕ್ತಿಯಿಲ್ಲದ ಸಿರಿ ನಿಷ್ಪ್ರಯೋಜಕ ಎಂಬ ಭಾವವಿದೆ. ಸಿರಿಯನ್ನು ನೋಡಿ ಜಂಗಮರು (ಮತ್ತು ಯಾಚಕರು) ಕೆಲವು ಶ್ರೀಮಂತರ ಮನೆಗೆ

ಹೋಗುತ್ತಾರೆ. ಅಲ್ಲಿ ಭಕ್ತಿ ಇರದ್ದರಿಂದ ಬರಿಗೈಯಲ್ಲಿ ಬರಬೇಕಾಗುತ್ತದೆ. ಹಾಗೆ ಬೂರಗದ ವೈಭವ ; ನೋಡಲು ಅರಳೆ ಚಂದ ಅದು ಕೈಗೆ ಸಿಗದು. ಎಲವ(ಬೂರಲ)ದ ವಿವರಣೆ ನೋಡಿದರೆ ಹೊರಗಡೆ ನೋಡಲು ಚಂದ ಒಳಗಡೆ ಪೊಳ್ಳು ಎನಿಸುತ್ತದೆ. ಆದ್ದರಿಂದ ಎಲವದ ಮರ ಬೂರುಗ ಬೇರೆ ಬೇರೆ ಎಂದು ತಿಳಿದವರಿದ್ದರೆ ನಮಗೆ ತಿಳಿಸಿರಿ.)

"ಪರಮಾತ್ಮನಲ್ಲಿ ಅನನ್ಯವಾದ ಭಕ್ತಿ ಇರುತ್ತದೆ. ಪರಮಾತ್ಮನ ಸಾಕಾರ ಮುಖವೇ ಜಂಗಮ ಎಂದು ತಿಳಿದ ಮೇಲೆ ಜಂಗಮರನ್ನು ಗೌರವಿಸಬೇಕು. ಆದರೆ ಅವರನ್ನು ಮಾನವರು ಎಂದು ಕಡೆಗಣಿಸುವೆನು. ಏನು ಮಾಡಲಿ ಸಗುಣ, ನಿರ್ಗುಣ ಎರಡೂ ಅಳವಡದ ಸಂದೇಹಿ ನಾನು" ಎಂದು ಗುರು ಬಸವಣ್ಣನವರು ಚಟಪಟಿಸುವರು. (ಗುರು ಬಸವಣ್ಣನವರು ಅಸಂಖ್ಯಾತ ಜಂಗಮರಿಗೆ ಆಶ್ರಯ ನೀಡಿ ಧರ್ಮ ಪ್ರಚಾರ ಮಾಡಿಸುತ್ತಿದ್ದರು. ಎಲ್ಲರೂ ಒಂದೇ ಮಟ್ಟಕ್ಕೆ ಏರಿದವರಿರುತ್ತಿರಲಿಲ್ಲ. ಹೆಚ್ಚಿನ ಗೌರವ ಕೊಟ್ಟರೆ ಅದನ್ನು ತಾಳಿಕೊಳ್ಳುವ ಅರ್ಹತೆ ಕೆಲವರಿಗೆ ಇರುವುದಿಲ್ಲ. ಕೆಲವೊಮ್ಮೆ ಸಾಮಾನ್ಯರು ಎಂದು ತಿಳಿದರೆ ಅವರು ಆಂತರಿಕವಾಗಿ ಹೆಚ್ಚಿನ ವ್ಯಕ್ತಿತ್ವ ಉಳ್ಳವರಾಗಿರುತ್ತಿದ್ದರು. ಒಳಗಿನ ವ್ಯಕ್ತಿತ್ವವನ್ನು ಅರಿಯುವುದು ಹೇಗೆ ಎಂಬ ಸಂದಿಗ್ಧತೆ ಈ ವಚನದಲ್ಲಿ ಅಭಿವ್ಯಕ್ತವಾಗಿದೆ.)

978. ಭೃತ್ಯನಿಗೆ ಬೇಕು ವಿನಯ

ಎನ್ನ ನುಡಿ ಎನಗೆ ನಂಜಾಯಿತು; ಎನ್ನ ಅಲಗೆ ಎನ್ನ ಕೊಂದಿತ್ತು.
ಆನು ಪಾಪಿಯಯ್ಯಾ, ಆನು ಕೋಪಿಯಯ್ಯಾ.
ತರಳತನದಲ್ಲಿ ಕೆಟ್ಟೆನಯ್ಯಾ,
ಭಕ್ತಿಯ ಹೊಲಬನರಿಯದೆ ಮರುಳಾದೆನಯ್ಯಾ.
ಆಳು ಮುನಿದಡೆ ಆಳೇ ಕೆಡುವೆನು;
ಆಳ್ದ ಮುನಿದಡೆ ಆಳೇ ಕೆಡುವನು;
ನೀವು ಮುನಿದಡೆ ನಾನೇ ಕೆಡುವೆನಯ್ಯಾ ಲಿಂಗದೇವಾ. –ಬವದೀ. 980

ಮಾನವನಲ್ಲಿರುವ ಅತ್ಯಂತ ಶಕ್ತಿಶಾಲಿ ಆಯುಧ ನಾಲಿಗೆ. ಅದರಿಂದ ಹೊರಹೊಮ್ಮುವ ಮಾತುಗಳು ಜಗಳ, ವಿನಾಶವನ್ನು ತರಬಲ್ಲವು ; ಪ್ರೀತಿ ಸಾಮರಸ್ಯವನ್ನು ತರಬಲ್ಲವು. ದುಡುಕುತನದಿಂದ ಆಡುವ ಮಾತುಗಳು ಹಾಲಾಹಲವನ್ನೇ ಸೃಷ್ಟಿಸಬಲ್ಲವು. ನಾಲಿಗೆಯಿಂದ ಬರುವ ದ್ವೇಷದ ನುಡಿಗಳು ಎದುರಾಳಿಯನ್ನು ನೋಯಿಸುವುದರಿಂದ ಎದುರಾಳಿ ತಾನಷ್ಟು ತೀಕ್ಷ್ಣವಾಗಿ ಮಾತನಾಡುವಂತಾದರೆ ಅಥವಾ ನಿಸ್ಸಹಾಯಕನಾಗಿ ಅಳುವಂತಾದರೆ ಮಾತನಾಡಿದವನು ಖುಷಿಯಿಂದ ತನ್ನ ವಾಗ್ಬಾಣ ಗುರಿ ಮುಟ್ಟಿತೆಂದು ಹರ್ಷಿಸಬಹುದು. ಆದರೆ ಗುರು ಬಸವಣ್ಣನವರ ದೃಷ್ಟಿಯಲ್ಲಿ ಮಾತನ್ನಾಡಿದವನ ವ್ಯಕ್ತಿತ್ವವೇ ನಾಶವಾಗಿರುತ್ತದೆ. ದ್ವೇಷದ ಮಾತು ಪಾಪಕ್ಕೆ ಕಾರಣವಾಗುತ್ತದೆ. ಆ ದ್ವೇಷಕ್ಕೆ ಕಾರಣ ಕೋಪ. ಹುಡುಗು ಬುದ್ಧಿಯ ದುಡುಕುತನದ ವರ್ತನೆ ಮಾಡಿ ವಿನಾಶವನ್ನು ಮೈಮೇಲೆ ತಂದು ಕೊಳ್ಳುತ್ತಾರೆ.

ಭಕ್ತಿಯ ದಾರಿ ಬಹಳ ಸೂಕ್ಷ್ಮ. ಇಲ್ಲಿ ಕೆಲವೊಮ್ಮೆ ಸೋತುಗೆಲ್ಲಬೇಕಾಗುತ್ತದೆ. ಭೃತ್ಯಾಚಾರವು ಒಡೆಯ–ಸೇವಕ ಸಂಬಂಧದ ಸೂಕ್ಷ್ಮತೆ ಕುರಿತು ಬೋಧಿಸುತ್ತದೆ. ಒಡೆಯನಿಗೆ ಒಮ್ಮೆ ಸಿಟ್ಟು ಬಂದಿದೆ ಎಂದುಕೊಳ್ಳುವ. ತಪ್ಪು ಅವನದೆ ಎಂದುಕೊಳ್ಳುವ. ಇದು ಗೊತ್ತಿದ್ದರೂ ಸೇವಕನು ತಾತ್ಕಾಲಿಕವಾಗಿ ಶಾಂತಿಯನ್ನು ತಂದುಕೊಂಡು ವಿನೀತನಾಗಿ ವರ್ತಿಸಬೇಕು. ಮಾಲಿಕನು ಶಾಂತನಾಗಿದ್ದಾಗ ಅವನ ತಪ್ಪು ಎತ್ತಿ ತೋರಿಸಬೇಕು. ಹಾಗಲ್ಲದೆ ಒಡೆಯನು ಸಿಟ್ಟಿನಲ್ಲಿದ್ದಾಗ ಅವನ ತಪ್ಪು ಎತ್ತಿ ತೋರಿಸಿದರೆ ಕೆಲಸದವನನ್ನು ಅವನ ಕೆಲಸದಿಂದ ತೆಗೆದುಹಾಕುವನು. ಒಡೆಯ ಮುನಿದರೂ ಸೇವಕನಿಗೇ ಹಾನಿ. ಸೇವಕನೇ ಮುನಿಸಿಕೊಂಡರೂ ಅವನಿಗೇ ನಷ್ಟ. ಆದ್ದರಿಂದ ಸೇವಕರಲ್ಲಿ ವಿಧೇಯತೆ ಬಹಳವಿರಬೇಕು. ವಿಧೇಯತೆ ವಿನಯತೆ ಎಂದರೆ ತತ್ತ್ವ ಭ್ರಷ್ಟತೆ ಏನಲ್ಲ.

ಇನ್ನು ಭಕ್ತನು ದೇವರ ಜೊತೆ ಎಂದೂ ಮುನಿಸಿಕೊಳ್ಳಬಾರದು. ಹಗುರವಾಗಿ ದೇವರ ಕೃಪೆ ಕುರಿತು ಮಾತನಾಡಬಾರದು, ಹಾಗೆ ಮಾತನಾಡಿದರೆ ಅವನು ಪಾಪದಿಂದ ಸುತ್ತುವರಿಯಲ್ಪಡುವನು.

979. ಶರಣರನ್ನರಿಯದ ಪರಿತಾಪ

ನಡುದೊರೆಯೊಳಗೆ ಹರುಗೋಲನಿಳಿದಂತಾಯಿತ್ತೆನ್ನ ಭಕ್ತಿ.
ಮರನನೇರಿ ಕೈಯ ಬಿಟ್ಟಂತಾಯಿತ್ತೆನ್ನ ಭಕ್ತಿ.
ಶಿವಶಿವಾ, ಕೆಟ್ಟೆನಲ್ಲಾ ಗುರುವೆ, ಲಿಂಗದೇವಾ,
ಈ ಮರುಳುಶಂಕರದೇವರ ಕೃಪೆ
ಎನಗಿನ್ನೆಂದಪ್ಪುದು ಹೇಳಾ, ಪ್ರಭುವೆ. –ಬವದೀ. 981

ಗುರು ಬಸವಣ್ಣನವರ ಮಹಾಮನೆ ಅಪೂರ್ವ ಶರಣರತ್ನಗಳ ಭಾಂಡಾರ. ವಜ್ರದ ಗಣಿಯಲ್ಲಿ ಎಲ್ಲೆಂದರಲ್ಲಿ ವಜ್ರಗಳು ಸಿಗುವಂತೆ ಬಸವ ಮಹಾಮನೆಯ ಅನುಭವ ಮಂಟಪದಲ್ಲಿ ಮಾತ್ರವಲ್ಲ ಪಾಕ ಗೃಹ, ಪ್ರಸಾದ ನಿಲಯದಲ್ಲೂ ಮಹಿಮಾನ್ವಿತರಾದ ಶರಣರು ಇದ್ದರು. ಹೊರಗಡೆ ಏನೂ ತೋರಿಸಿಕೊಳ್ಳದೆ ಸಾಧನಾ ಮಗ್ನನಾಗಿ ಇದ್ದ ಅಪೂರ್ವ ಶರಣ ಮರುಳು ಶಂಕರದೇವ, ಹೊರಗಡೆ ನೋಡಲಿಕ್ಕೆ ಮರುಳನಂತೆ, ಹುಚ್ಚನಂತೆ ತೋರುವನು. ಕಣ್ಣುಗಳೋ ಅಪೂರ್ವ ಕಾಂತಿಯಿಂದ ಬೆಳಗುತ್ತಿದ್ದವು. ಆಗಮಿಸಿದ ಅಲ್ಲಮ ಪ್ರಭುದೇವರಿಗೆ ಮಹಾಮನೆಯ ವಿವಿಧ ಭಾಗಗಳನ್ನು ಗುರು ಬಸವಣ್ಣನವರು ತೋರಿಸುತ್ತ ಬಂದಾಗ ಪ್ರಸಾದ ಕುಂಡದಲ್ಲಿ ಮರುಳು ಶಂಕರದೇವರು ಕಣ್ಣಿಗೆ ಕಂಡರು. ದಾಸೋಹದಲ್ಲಿ ಶರಣರು ಊಟ ಮಾಡಿದ ನಂತರ ಆ ತಟ್ಟೆಗಳನ್ನು ತೊಳೆದಿಡುವ ಕಾಯಕ ಮರುಳು ಶಂಕರ ದೇವರದ್ದು. ಅವರೊಬ್ಬ ಮೌನ ತಪಸ್ವಿ. ತಟ್ಟೆ ತೊಳೆಯುವ ಕಾಯಕ ಸೇವೆ ಮಾಡುತ್ತ ದಾಸೋಹದಲ್ಲಿ ಪ್ರಸಾದ ಸ್ವೀಕರಿಸಿ ತಮ್ಮ ಪಾಡಿಗೆ ತಾವು ಅನಾಮಿಕರಾಗಿ ಇದ್ದು ಬಿಟ್ಟರು. ಪ್ರಭುದೇವರು, ಹೊಳೆಯುವ ನಕ್ಷತ್ರಗಳಂತೆ ದೃಷ್ಟಿಯೋಗದಿಂದ ಥಳಗುಡುತ್ತಿದ್ದ ಮರುಳು ಶಂಕರದೇವರ ಕಣ್ಣುಗಳಿಂದ ಆಕರ್ಷಿತರಾಗಿ "ಇವರು ಸಾಮಾನ್ಯರಲ್ಲ." ಎಂದಾಗ ಗುರು ಬಸವಣ್ಣನವರ ಆದಿಯಾಗಿ ಎಲ್ಲ ಶರಣರ ಗಮನ ಮರುಳುಶಂಕರ ದೇವರ ಕಡೆಗೆ ಹರಿಯಿತು. ವಿದೇಶ–ಅಫ್‌ಘಾನಿಸ್ತಾನದಿಂದ ಬಂದ ವಿರಕ್ತ ಸಾಧಕ ; ಇಂಥ ತ್ಯಾಗಿ, ಯೋಗಿಯನ್ನು ನಾನೇಕೆ ಅರಿಯಲಿಲ್ಲ ಎಂದು ಗುರು ಬಸವಣ್ಣನವರು ಪರಿತಪಿಸುವುದನ್ನು ಈ ವಚನದಲ್ಲಿ ಕಾಣುತ್ತೇವೆ. "ನದಿಯನ್ನು ದಾಟುವಾಗ ಅರ್ಧ ನದಿಯಲ್ಲಿ ಇದ್ದಾಗ ಹರಿಗೋಲಿನಿಂದ ಇಳಿಯುವುದು ಮೂರ್ಖತನ. ಗಿಡವನ್ನು ಹತ್ತುವಾಗ ಕೈ ಬಿಡುವುದು ದಡ್ಡತನ. ಇಂಥಾ ಮೂರ್ಖತನ ನನ್ನದಾಯಿತಲ್ಲ. ಇಂಥ ಮಹಾತ್ಮನ ನಿಲುವನ್ನು ಅರಿಯಲಾರದೆ ಹೋದೆ. ಇಂಥ ಶರಣನ ಕೃಪೆ ನನಗೆ ಎಂದು ಆಗುವುದೋ ಹೇಳಿರಿ ಪ್ರಭುದೇವರೆ !" ಎಂದು ಗುರು ಬಸವಣ್ಣನವರು ಅವಲತ್ತುಕೊಳ್ಳುತ್ತಾರೆ.

980. ಜಂಗಮವನರಿಯದ್ದಕ್ಕೆ ಪಶ್ಚಾತ್ತಾಪ

ಮತಿಗೆಟ್ಟು ಧೃತಿಗುಂದಿ ಬೇಳಾದೆನಯ್ಯಾ,
ಗತಿಗೆಟ್ಟು ವ್ರತಗೆಟ್ಟು ಧಾತುಗೆಟ್ಟ ಬಾಹಿರ ನಾನಯ್ಯಾ,
ಕಹಿಸೋರೆ ಮುತ್ತಂತಾಯಿತ್ತೆನ್ನ ಭಕ್ತಿ.
ನಡೆಲಿಂಗ ಜಂಗಮ ಮನೆಗೆ ಬರಲು
ಇಂಬುಗೊಳಲರಿಯದೆ ಕೆಟ್ಟ ಕೇಡನೇನೆಂದುಪಮಿಸುವೆನಯ್ಯಾ,
ನವರತ್ನವ ಕಿತ್ತು ಮಡುವಿನೊಳಗೆ
ಹಾಯ್ಕಿದ ಕಪಿಯಂತಾಯಿತ್ತೆನ್ನ ಭಕ್ತಿ.
ಲಿಂಗದೇವರ ತಂದುಕೊಟ್ಟಡೆ
ನಿಮ್ಮ ಚಮ್ಮಾವುಗೆಯ ಹೊತ್ತು ಕುಣಿದಾಡುವೆನು
ಕಾಣಾ, ಚೆನ್ನಬಸವಣ್ಣಾ. –ಬವದೀ. 982

ಅಲ್ಲಮ ಪ್ರಭುದೇವರು ಸಿದ್ಧರಾಮೇಶ್ವರರ ಜೊತೆಗೂಡಿ ಬಸವ ಮಹಾಮನೆಗೆ ಬಂದಿರುತ್ತಾರೆ. ಆಗ ಗುರು ಬಸವಣ್ಣನವರು ಲಿಂಗಾಂಗಯೋಗದಲ್ಲಿ ನಿರತರಾಗಿರುತ್ತಾರೆ. ಸಾಧಕ ಜೀವಿಗಳು ಇಂತಿಷ್ಟು ಸಾಧನೆ ಮಾಡಬೇಕು ಎಂದು ನೇಮವನ್ನು ಹಾಕಿಕೊಂಡಿರುತ್ತಾರೆ. ಅವರು ಪೂಜಾನಂದದಲ್ಲಿ ತನ್ಮಯರಾಗಿರುವಾಗ ಹಡಪದ ಅಪ್ಪಣ್ಣ ಶರಣರು "ಯಾರೋ ಮಹಿಮಾತ್ಮರು ಬಂದಿದ್ದಾರೆ. ಸ್ವಾಗತಿಸಲು ಬನ್ನಿ." ಎನ್ನುವರು. "ಪೂಜೆಯನ್ನು ಪೂರ್ತಿಗೊಳಿಸಿ ಬರುತ್ತೇನೆ. ನೀವು ಹೋಗಿ ಅವರನ್ನು ಸ್ವಾಗತಿಸಿ." ಎಂದು ಗುರು

ಬಸವಣ್ಣನವರು ಹೇಳಿ ಕಳಿಸುತ್ತಾರೆ. ಪ್ರಭುದೇವರು ಬಡಪೆಟ್ಟಿಗೆ ಒಪ್ಪುವುದಿಲ್ಲ. ಅಪ್ಪಣ್ಣನವರು ಚನ್ನಬಸವಣ್ಣನವರಿಗೆ ತಿಳಿಸುತ್ತಾರೆ. ಅವರು ಹೋಗಿ ಕರೆದರೂ ಪ್ರಭುದೇವರ ಮುನಿಸು ಇಳಿಯುವುದಿಲ್ಲ. ಮುನಿದು ಅವರು ವಾಪಸ್ಸು ಹೋಗುವಾಗ ಚನ್ನಬಸವಣ್ಣನವರು ಬಂದು ಗುರು ಬಸವಣ್ಣನವರಿಗೆ ತಿಳಿಸುತ್ತಾರೆ. ಆಗ ಅವರು ಹೇಳಿರಬಹುದಾದ ವಚನವಿದು.

"ನಾನು ಬುದ್ಧಿಹೀನನಾಗಿ, ಧೈರ್ಯಗೆಟ್ಟು ಪೆದ್ದನಾದೆ. ಭಕ್ತನ ಗತಿಗೆಟ್ಟು, ಹಾಕಿಕೊಂಡ ವ್ರತವೂ ಕೆಟ್ಟು ಆತ್ಮಬಲವನ್ನು ಕಳೆದುಕೊಂಡವನಾದೆ. ನನ್ನ ಪರಿಸ್ಥಿತಿ ಕಹಿ ಸೋರೆಯಕಾಯನ್ನು ಮುತ್ತಿಟ್ಟಂತಾಗಿದೆ. ಪರಮಾತ್ಮನ ಸಾಕಾರ ರೂಪವಾದ ಜಂಗಮ ಮೂರ್ತಿ ನಮ್ಮ ಮನೆಬಾಗಿಲಿಗೆ ಬಂದಿರುವಾಗ ಅವರನ್ನು ಬರಮಾಡಿಕೊಳ್ಳಲರಿಯದ ಮೂರ್ಖತನ ನನ್ನದಾಯಿತು. ಅಮೂಲ್ಯವಾದ ನವರತ್ನದ ಮಣಿಯನ್ನು ಅದರ ಮಹತ್ವವರಿಯದೆ ಒಂದು ಮಡುವಿನ ನೀರಿನಲ್ಲಿ ಎಸೆದ ಕಪಿಯ ಪರಿಸ್ಥಿತಿಯಂತೆ ನನ್ನ ಮೂರ್ಖತನವಾಯಿತು. ಚನ್ನಬಸವಣ್ಣಾ, ಆ ಮಹಾಮಹಿಮರನ್ನು ಸಮಾಧಾನ ಪಡಿಸಿ ಮರಳಿ ಕರೆತಂದರೆ ನಿಮ್ಮ ಚಮ್ಮಾವುಗೆಯನ್ನು ತಲೆಯ ಮೇಲೆ ಹೊತ್ತು ಕುಣಿದಾಡುವೆನು"

ಶೂನ್ಯ ಸಂಪಾದನೆಯಲ್ಲಿ ಪ್ರಭುದೇವರ ಆಗಮನ ಕುರಿತು ಒಂದು ಪೂರ್ಣ ಸಂಪಾದನೆ ಇದ್ದು ಅವರು ಕೋಪದಿಂದ ಹಾರಾಡುವುದನ್ನು ಕಾಣುತ್ತೇವೆ. ನನ್ನ ಅಭಿಪ್ರಾಯದಲ್ಲಿ ಈ ಸಂಪಾದನೆ ಶೂನ್ಯ ಸಂಪಾದನೆಕಾರರ ಕೃತ್ರಿಮ ಸೃಷ್ಟಿ ಎನಿಸುತ್ತದೆ. ಅಲ್ಲಮಪ್ರಭುದೇವರ ಗರ್ಜನೆ, ಆಟಾಟೋಪ, ಬಯ್ಗುಳ- ಇವುಗಳ ಮೂಲಕ ವಿರಕ್ತರಾದ ಅವರನ್ನು ಉನ್ನತ ಮಟ್ಟಕ್ಕೆ ಏರಿಸುವುದು ; ಗೃಹಸ್ಥರಾದ ಗುರು ಬಸವಣ್ಣನವರನ್ನು ಕೆಳಗೆ ಇಳಿಸುವುದೂ ಶೂನ್ಯ ಸಂಪಾದನೆಕಾರರ ಉದ್ದೇಶವಿದ್ದಂತೆ ತೋರುತ್ತದೆ. ಸಹಜವಾದ ನಿಜ ವಚನಗಳ ಜೊತೆಗೆ ಕೃತ್ರಿಮ ವಚನಗಳನ್ನೂ ಸೇರಿಸಿ ಪ್ರಸಂಗವನ್ನು ಸೃಷ್ಟಿ ಮಾಡಿದಂತೆ ತೋರುತ್ತದೆ.

ಗುರು ಪ್ರಭುದೇವರು ಬಂದಾಗ ಗುರು ಬಸವಣ್ಣನವರು ಪೂಜೆಗೆ ಕುಳಿತಿರುತ್ತಾರೆ. ಇದನ್ನು ತಿಳಿಸಿ ಹಡಪದ ಅಪ್ಪಣ್ಣ ಶರಣರು ಒಳಗೆ ಕರೆದಾಗ ಪೂಜೆ ಬಿಟ್ಟು ಬಸವಣ್ಣನವರು ತಮ್ಮನ್ನು ಸ್ವಾಗತಿಸಲು ಎದ್ದು ಬರಲಿ ಎಂದು ನಿರೀಕ್ಷಿಸುವಷ್ಟು ಪ್ರಭುದೇವರು ಶಿಷ್ಟಾಚಾರವಿಲ್ಲದವರೆ ? ಮೊದಲೇ ತಿಳಿಸಿ ಬಂದಿದ್ದರೆ ಗುರುಬಸವಣ್ಣನವರು, ಶರಣರ ಬರುವೆಮಗೆ ಪ್ರಾಣ ಜೀವಾಳ ಎನ್ನುವವರು, ಅದ್ದೂರಿಯ ಸ್ವಾಗತ ನೀಡದೆ ಇರುತ್ತಿದ್ದರೆ ? ಗುರು ಚನ್ನಬಸವಣ್ಣನವರೇ ಬಂದು ವಿನಂತಿಸಿದರೂ ಒಳಗೆ ಬರದೆ ಪ್ರಭುದೇವರು ಕೋಪ ಮಾಡಿಕೊಳ್ಳುವುದು ಅವರ ವ್ಯಕ್ತಿತ್ವಕ್ಕೆ ಶೋಭೆ ತರದೆ ಕುಂದುತರುತ್ತದೆ. ಗುರು ಬಸವಣ್ಣನವರ ಸಾನ್ನಿಧ್ಯ ಬಯಸಿ ದೂರದಿಂದ ಬಂದು, ಸನಿಹ ಬಂದಾಗ ಕೋಪ ಆಟೋಪಗಳಿಂದ ವರ್ತಿಸಿ ಗುರು ಬಸವಣ್ಣನವರನ್ನು ನಿಂದಿಸುವುದು ಅಸಂಭವ ಎಂದು ನನ್ನ ವೈಯುಕ್ತಿಕ ಅಭಿಪ್ರಾಯ.

981. ಶರಣಾಗತಿ

ಭವರೋಗವೈದ್ಯನೆಂದು ನಂಬಿದೆ ನಾನು,
ಒಮ್ಮಿಂಗೆ ಕರುಣಿಸಯ್ಯಾ ಭಕ್ತಿಫಲಪ್ರದಾಯಕ.
ನೀನು ಒಮ್ಮಿಂಗೆ ಕರುಣಿಸಯ್ಯಾ
ಜಯ ಜಯ ಶ್ರೀ ಮಹಾದೇವ ಎನುತಿರ್ದೆನು.
ಲಿಂಗದೇವಯ್ಯಾ,
ನಿಮ್ಮ ಶ್ರೀಪಾದಕ್ಕೆ ನಮೋ ನಮೋ ಎನುತಿರ್ದೆನು. –ಬವದೀ. 983

ಹುಟ್ಟು ಸಾವುಗಳ ಚಕ್ರವಾದ ಭವ ಎಂಬ ರೋಗಕ್ಕೆ ಸೂಕ್ತವಾದ ಚಿಕಿತ್ಸೆ ನೀಡುವ ವೈದ್ಯ ಎಂದು ನಾನು ನಂಬಿದ್ದೇನೆ. ನೀನು ಭಕ್ತಿ ಎಂದ ಫಲವನ್ನು ಕರುಣಿಸುವವನು. ತಡಮಾಡದೆ ನನಗೆ ಭಕ್ತಿಯನ್ನು ಒಮ್ಮೆಗೇ ಕರುಣಿಸು. ಜಯ ಜಯ ಶ್ರೀ ಮಹಾದೇವ ಎನ್ನುತ್ತ ಲಿಂಗದೇವರೇ ನಿನಗೆ ಶರಣಾಗಿ ನಮೋ ನಮೋ ಎನ್ನುತ್ತಿರುವೆನು.

982. ಶಿಷ್ಟಾಚಾರ ಸಂಹಿತ

ಇನ್ನೇವೆನಿನ್ನೇವೆ ಕೆಮ್ಮನೆ ಕೆಟ್ಟೆನು,

ಇನ್ನೇವೆನಿನ್ನೇವೆ ಕೆಮ್ಮನೆ ಕೆಟ್ಟೆನು.
ನಿಮ್ಮ ಶರಣರು ಬಂದು ಬಾಗಿಲೊಳಿರಲು,
ದಿಮ್ಮನೆ ಇದಿರೆದ್ದು ವಂದಿಸಲರಿಯದೆ
ಕೆಟ್ಟ ಕೇಡನೇನೆಂದುಪಮಿಸುವೆನು.
ಲಿಂಗದೇವಾ,
ನಾನುಭಯಭ್ರಷ್ಟನೆಂಬುದು ಎನಗಿಂದರಿಯಬಂದಿತ್ತು. –ಬವದೀ. 984

"ಅಯ್ಯೋ ನಾನು ಎಂಥಾ ತಪ್ಪು ಮಾಡಿಬಿಟ್ಟೆ. ಶರಣರು ಬಂದು ಬಾಗಿಲಲ್ಲಿ ನಿಂತಿರುವಾಗ ಕಂಡ ತಕ್ಷಣವೇ ಎದುರಿಗೆ ಹೋಗಿ ನಮಸ್ಕರಿಸಿ ಸ್ವಾಗತ ಮಾಡದೆ ತಪ್ಪು ಮಾಡಿಬಿಟ್ಟೆ. ಲೌಕಿಕವೂ ಇಲ್ಲ, ಪಾರಮಾರ್ಥವೂ ಇಲ್ಲ ಎಂಬಂತೆ ನಾನು ಉಭಯ ಭ್ರಷ್ಟನಾದೆ" ಈ ವಚನದ ಮೂಲಕ ಗುರು ಬಸವಣ್ಣನವರು ಸದ್ಭಕ್ತರಿಗೆ ಶಿಷ್ಟಾಚಾರವನ್ನು ಕಲಿಸುತ್ತಿದ್ದಾರೆ. "ಸಹ ಧರ್ಮೀಯರಾದ ಶರಣರು ಬಂದಾಗ ತಲೆ ಬಾಗಿಲಿಗೆ ಹೋಗಿ ವಂದಿಸಿ ಅವರನ್ನು ಒಳಗೆ ಕರೆತರಬೇಕು. ಹಾಗೆ ಮಾಡದೆ, ಉದಾಸೀನ ಮಾಡಿದರೆ ಅಪಮಾನ ಮಾಡಿ ಕಳಿಸಿದರೆ ಕೇಡು ತಪ್ಪಿದ್ದಲ್ಲ. ತನ್ನ ಧರ್ಮಕ್ಕೆ ಅಪಚಾರ ಮಾಡಿದ ಉಭಯ ಭ್ರಷ್ಟತೆ ಎರಗುತ್ತದೆ." ಎಂದು ಬೋಧಿಸುತ್ತಾರೆ.

983. ಡಾಂಭಿಕ ಭಕ್ತ

ನಾನು ಭಕ್ತನಲ್ಲಯ್ಯಾ, ನಾನು ಯುಕ್ತನಲ್ಲಯ್ಯಾ,
ನಾನು ಮುಕ್ತನಲ್ಲಯ್ಯಾ !
ಕಪಟವೇಷದ ಡಂಭಕ ನಾನು.
ಲಿಂಗದೇವಾ, ಎನ್ನ ಭಕ್ತಿ ಒಳಲೊಟ್ಟೆ
ಎಂಬುದ ನೀವು ತೋರಬಂದಿರಾಗಿ
ಎನಗಿಂದರಿಯ ಬಂದಿತ್ತು ! –ಬವದೀ. 985

ಕೆಲವರು ಥಾಳಾಗಿ ವಿಭೂತಿ, ರುದ್ರಾಕ್ಷಿ ಧರಿಸಿಕೊಂಡು ಇಷ್ಟಲಿಂಗವನ್ನು ಎಲ್ಲರಿಗೂ ಕಾಣುವಂತೆ ಎದೆಯ ಮೇಲೆ ಹಾಕಿಕೊಂಡು ಭಕ್ತರೆಂಬಂತೆ ನಟಿಸುವರು. ಇವರ ವೇಷಭೂಷಣ ನೋಡಿ ಜಂಗಮರು ಹಸಿದು ಪ್ರಸಾದಕ್ಕೆ ಹೋಗಬಹುದು ಅಥವಾ ಕಾರ್ಯೋದ್ದೇಶಗಳಿಗಾಗಿ ಕಾಣಿಕೆ ಕೇಳಬಹುದು. ಆಗ ಅವರು ತೋರುವ ಉದಾಸೀನತೆ ಅಥವಾ ಕೋಪದಿಂದ ಅವರ ಭಕ್ತಿಯ ಬೂಟಾಟಿಕೆ ಬಯಲಾಗಿ, ಅವರು ಭಕ್ತರೂ ಅಲ್ಲ, ವಿವೇಕಿಗಳು (ಯುಕ್ತರು) ಅಲ್ಲ, ಭವ ಬಂಧನ ವ್ಯಾಮೋಹ ಹರಿದುಕೊಂಡ ಮುಕ್ತರೂ ಅಲ್ಲ ಎಂಬುದು ಮನವರಿಕೆಯಾಗುವುದು. ಕಪಟ ವೇಷದ ಈ ಡಂಭಕರು ಒಳಲೊಟ್ಟೆ- ಹೊರಗೆ ನುಣ್ಪು ಒಳಗೆ ಪೊಳ್ಳು ಎಂಬುದು ತಿಳಿಯುವುದು ಜಂಗಮರೊಡನೆ ಅವರು ವರ್ತಿಸುವ ರೀತಿಯಿಂದ. ಹೀಗಾಗಿ ಜಂಗಮರು ಭಕ್ತಿಯ ಪರೀಕ್ಷಕರು ಎಂಬುದು ಒಂದು ಪರಮ ಸತ್ಯ.

984. ಸಂಸಾರ ಮೋಹ ಮುಕ್ತಿಗೆ ಹಂಬಲ.

ಮುದ್ದ ನೋಡಿ, ಮುಖವ ನೋಡಿ,
ಮೊಲೆಯ ನೋಡಿ, ಮುಡಿಯ ನೋಡಿ,
ಕರಗಿ ಕೊರಗುವುದೆನ್ನ ಮನ,
ಲಿಂಗದೇವನ ಧ್ಯಾನವೆಂದಡೆ ಕರಗಿ ಕೊರಗದೆನ್ನ ಮನ.
ಆನು ಭಕ್ತನೆಂಬಡೆ ಲಜ್ಜೆಯಿಲ್ಲ ನೋಡಯ್ಯಾ.
ಎನ್ನ ತಂದೆ ಲಿಂಗದೇವಯ್ಯ
ಒಲಿದು ಒಪ್ಪಗೊಂಡನಾದಡೆ,
ಆನು ಚೆಂಗಳೆಯ ಬಸುರಲ್ಲಿ ಬಾರದಿಹೆನೆ? –ಬವದೀ. 986

ಇದು ಗುರು ಬಸವಣ್ಣನವರ ವೈಯಕ್ತಿಕ ಜೀವನಕ್ಕೆ ಸಂಬಂಧಿಸಿದ ವಚನ. ಸಾಕಷ್ಟು ಅಧ್ಯಯನ ಮತ್ತು ದೀರ್ಘ ಚಿಂತನೆಯಿಂದ ನಾನು ಕೆಲವೊಂದು ನಿರ್ಣಯಕ್ಕೆ ಬಂದಿದ್ದೇನೆ. ಒಂದನೆಯದು, ಗುರು

ಬಸವಣ್ಣನವರಿಗೆ ಇದ್ದುದು ಒಬ್ಬಳೇ ಪತ್ನಿ, ಸೋದರ ಸೊಸೆ ನೀಲಗಂಗಾ; ಇಬ್ಬರು ಹೆಂಡತಿಯರು ಇರಲಿಲ್ಲ. ಕೆಲವರು ನೀಲಮ್ಮ ಎಂದರು, ಮತ್ತೆ ಕೆಲವರು ಗಂಗಮ್ಮ ಎಂದರು. ಎರಡನೆಯದಾಗಿ ಗುರು ಬಸವಣ್ಣನವರಿಗೆ ಬಾಲ್ಯದಲ್ಲೇ ವಿವಾಹವಾಯಿತು. ನಾಲ್ಕು ವರ್ಷದ ಬಾಲಕನಿಗೆ ತೊಟ್ಟಿಲ ಕೂಸಾಗಿದ್ದ ನೀಲಾಂಬಿಕೆಯನ್ನು ಕೊಟ್ಟು ವಿವಾಹ ಮಾಡಲಾಗಿತ್ತು. ಗುರು ಕುಲದಲ್ಲಿ ಅಭ್ಯಾಸ ಮಾಡಿದ ಬಸವರಸರಿಗೆ ವೈರಾಗ್ಯ ಜೀವನದಲ್ಲಿ ಆಸಕ್ತಿ ಮೊಳೆತಿದ್ದರೂ ಬಾಲ್ಯದಲ್ಲೆ ವಿವಾಹವಾಗಿದ್ದ ನೀಲಗಂಗಳ ಭವಿಷ್ಯ ದೃಷ್ಟಿಯಿಂದ ವಿವಾಹವಾಗಲು ಒಪ್ಪಿಕೊಂಡರು, ಆದರೂ ಅವರ ಪ್ರೇಮವು ದೇವರ ಕಡೆಗೇ ಹೆಚ್ಚಿತ್ತು. ವಿವಾಹವಾಗುವಾಗ ಧರ್ಮಪಿತರು ಹೇಳುವ ವಚನ ಹೀಗಿದೆ. : "ಸಂಸಾರವೆಂಬ ಶ್ವಾನನ ಅಟ್ಟಿ ಮೀಸಲ ಬೀಸರ ಮಾಡದಿರಯ್ಯ. ಕನ್ನೆಯ ಕೈ ಹಿಡಿವೆನು, ನಿಮ್ಮಲ್ಲಿ ನೆರೆವೆನು. ಸತಿಯಾನು ಪತಿ ನೀನು ಅಯ್ಯಾ ನಿಮಗೋತ ಮನವ ಅನ್ಯಕ್ಕೆ ಹರಿಸಿದರೆ ನಿಮ್ಮ ಅಭಿಮಾನಕ್ಕೆ ಹಾನಿ ಲಿಂಗದೇವ."

ಮದುವೆಯಾಗಿ ಹೊಸದರಲ್ಲಿ ತಾಯಿ ನೀಲಾಂಬಿಕೆ ಎಲ್ಲ ಗೃಹಿಣಿಯರಂತೆ ಸಹಜವಾಗಿ ಪತಿಯ ಸಾನ್ನಿಧ್ಯ, ಸಾಮೀಪ್ಯಗಳಿಗೆ ಹಂಬಲಿಸಿರುವುದು ಸಾಧ್ಯ. ಬೆಳಗಿನ ಬ್ರಾಹ್ಮೀ ಮೂಹೂರ್ತದಲ್ಲಿ ಇಷ್ಟಲಿಂಗಯೋಗ ಮಾಡಿಕೊಳ್ಳಲು ಬಸವಣ್ಣನವರಿಗೆ ಆಸೆ. ಆದರೆ ಒಡನಿರುವ ಪತ್ನಿ ಬಿಡಬೇಕಲ್ಲ. ಆಕೆಯ ಮನಸ್ಸು ನೋಯಿಸಿ ಪೂಜೆಗೆ ಹೋಗಬೇಕಲ್ಲ ಎಂದು ಧರ್ಮಪಿತರಿಗೆ ಸಂದಿಗ್ಧತೆ. ಇಂಥ ಹೊಯ್ದಾಟದಲ್ಲಿ ಬರೆದಿರುವ ಆತ್ಮಕಥೆಯಂತಿದೆ ಈ ವಚನ.

"ಮುದ್ದಾದ ಮುಖದ ಮುಗ್ಧೆ, ಚೆಲುವಿನ ಖಣಿ ನೀಲಗಂಗಾ, ಸುಂದರ ಶರೀರ ಉಳ್ಳವಳು, ದಟ್ಟವಾದ ಕೇಶರಾಶಿಯಿಂದ ಕೂಡಿದವಳು, ಗಾಢವಾದ ನಿದ್ದೆಯಲ್ಲಿದ್ದಾಳೆ. ಇವಳನ್ನು ನೋಯಿಸಿ ಹೇಗೆ ಎದ್ದು ಹೋಗುವುದು? ಎಂದು ನನ್ನ ಮನ ಆಲೋಚಿಸುತ್ತಿದೆ. ಅದೇ ಲಿಂಗದೇವನ ಧ್ಯಾನ ಎಂದರೆ ಸ್ವಲ್ಪವೂ ಕರಗದು. ನಾನು ಭಕ್ತ ಎನ್ನಿಸಿಕೊಳ್ಳಲು ನಾಚಿಕೆಯಾಗಬೇಕು. ದೇವರು ನನಗೆ ಒಲಿದು ಆಶೀರ್ವದಿಸಿದರೆ ಮುಂದಿನ ಜನ್ಮದಲ್ಲಿ ಶರಣೆ ಚೆಂಗಳೆಯ ಹೊಟ್ಟೆಯಲ್ಲಿ ಹುಟ್ಟಿ ಬರದೆ ಇರುವೆನೆ ?"

ವಚನಗಳು ಆತ್ಮಕಥೆಯಂತೆ ವೈಯಕ್ತಿಕ ಜೀವನದ ವಿವರ ಸಹ ನೀಡುತ್ತವೆ.

985. ನಿರೀಕ್ಷೆ.

ಹಮ್ಮಿ ಹನ್ನೆರಡು ಸಂವತ್ಸರ ಹಿರಿದಾಯಿತ್ತು,
ಏನ ಮಾಡಿದಡೆನಯ್ಯಾ, ಎನ್ನಲ್ಲಿ ದಿಟವಿಲ್ಲದನ್ನಕ್ಕರ?
ಏನ ಹಮ್ಮಿದಡೇನಯ್ಯಾ, ಎನ್ನಲಿ ದಿಟವಿಲ್ಲದನ್ನಕ್ಕರ?
ಎನ್ನ ಪುಣ್ಯದ ಫಲ, ಲಿಂಗದೇವಾ,
ಬಾಯಿನದುಂಡಿಗೆ ತೋಯನಟ್ಟಂತಾಯಿತ್ತು. –ಬವದೀ. 987

ಹಮ್ಮಿಕೊಂಡು ಹನ್ನೆರಡು ವರ್ಷಗಳು ಸರಿದು ಹೋದವು. ಏನು ಮಾಡಿದರೇನು ನನ್ನಲ್ಲಿ ಸತ್ಯತೆ ಇಲ್ಲದಿದ್ದರೆ ? ಏನು ಹಮ್ಮಿಕೊಂಡರೇನು ಎನ್ನಲ್ಲಿ ದಿಟವಿಲ್ಲದಿದ್ದರೆ ? ನನ್ನ ಪುಣ್ಯದ ಫಲವೆಲ್ಲವೂ ವ್ಯರ್ಥ. ಬಾಗಿನದ ಉಂಡೆಗೆ ನೀರು ಬಿಟ್ಟಂತೆ ಆಗುತ್ತಿದೆ" ಗುರು ಬಸವಣ್ಣನವರು ಬಸವ ಕಲ್ಯಾಣವನ್ನು ವಿಕ್ರಮ ನಾಮ ಸಂವತ್ಸರದಲ್ಲಿ ಪ್ರವೇಶಿಸಿದರು. ಧರ್ಮ ಪ್ರಚಾರದ ಕೆಲಸ ಆರಂಭಿಸಿದರು. ಅನುಭವ ಮಂಟಪ ಸ್ಥಾಪಿಸಿದರು. ಇದಕ್ಕೆ ಒಬ್ಬ ಸೂಕ್ತ ಅಧಿಕಾರಿ ಬೇಕು ಎಂದು ಹನ್ನೆರಡು ವರ್ಷಗಳ ಕಾಲ ಹಂಬಲಿಸಿದರು. ಅನುಭವ ಮಂಟಪ ಕಟ್ಟಿ 12 ವರ್ಷಗಳಾದವು. ಇನ್ನೂ ಸೂಕ್ತ ಅಧಿಕಾರಿ ಇಲ್ಲಿಗೆ ಬರಲಿಲ್ಲವಲ್ಲ ಎಂದು ಈ ವಚನದಲ್ಲಿ ಪರಿತಪಿಸಿದಂತೆ ತೋರುತ್ತದೆ. "ಬಾಯಿನದುಂಡೆಗೆ ತೋಯನಟ್ಟಂತಾಯಿತ್ತು." ಎಂಬುದು ಆಗಿನ ಕಾಲದ ನಾಣ್ನುಡಿ ಇದ್ದಂತೆ ತೋರುತ್ತದೆ. ಮೊರದ ಬಾಗಿನದಲ್ಲಿ ಉಂಡೆಗಳನ್ನು ಜೋಡಿಸಿ, ನೀರನ್ನು ಬಿಟ್ಟರೆ ಆ ಉಂಡೆಗಳು ಅಂಟು ಅಂಟಾಗಿ ತಿನ್ನಲು ಬರುವುದಿಲ್ಲ. ಎಲ್ಲ ವ್ಯರ್ಥವಾಗುವುವು.

986. ಅನುಗ್ರಹಕ್ಕಾಗಿ ಮೊರೆ

ಸತ್ಯ ಸದಾಚಾರ ಸಂಬಂಧವಾದ ಭೃತ್ಯಾಚಾರ ಎನಗಿಲ್ಲಯ್ಯಾ,
ಆನು ನಿಮ್ಮ ನೆನೆಯಲು ಎನಗೆ ಭಕ್ತಿಯಿಲ್ಲಯ್ಯಾ,
ಕರುಣದಿಂ ಕೃಪೆಮಾಡಾ, ಲಿಂಗದೇವಾ. –ಬವದೀ. 988

ಭೃತ್ಯಾಚಾರ ಎಂಬುದು ಪಂಚ ಆಚಾರಗಳೆಂಬ ಸಾಮಾಜಿಕ ನೀತಿಯಲ್ಲಿ ಐದನೆಯ ಆಚಾರ. ಇದು ಸೇವೆಯನ್ನೇ ಪ್ರಧಾನವಾಗಿ ಹೊಂದಿದ ನೀತಿ ಸಂಹಿತೆ. ಈ ಭೃತ್ಯಾಚಾರವು ಒಡೆಯ-ಸೇವಕ, ಗುರು-ಶಿಷ್ಯ, ಪತಿ-ಪತ್ನಿ, ದೇವ-ಭಕ್ತ ಹೀಗೆ ಉಭಯತರ ಮಧ್ಯೆ ಇರುತ್ತದೆ. ಇದರ ಮುಖ್ಯ ಲಕ್ಷಣವೆಂದರೆ ಸತ್ಯ-ಪ್ರಾಮಾಣಿಕತೆ ಮತ್ತು ಸದಾಚಾರ-ಕಾಯಕನಿಷ್ಠೆ ಮತ್ತು ಸನ್ನಡತೆ. ಈ ಭೃತ್ಯಾಚಾರವು ಇಲ್ಲ ; ಇನ್ನು ನಿನ್ನ ನೆನೆಯಬೇಕೆಂದರೆ ನನ್ನಲ್ಲಿ ಭಕ್ತಿ ಇಲ್ಲ. "ನನ್ನ ಕೊರತೆಯನ್ನು ನೋಡಿ ನನ್ನನ್ನು ದೂರಮಾಡದೆ ನೀನು ಕರುಣೆಯಿಟ್ಟು ಅನುಗ್ರಹಿಸು ಲಿಂಗದೇವಾ" ಎಂದು ಗುರು ಬಸವಣ್ಣನವರು ದೇವನಲ್ಲಿ ಬೇಡುತ್ತಾರೆ.

987. ಮರೆವಿನ ಕೋಪ

ಅಯ್ಯಾ, ನಿಮ್ಮ ಶರಣರು ಬಂದೆನ್ನ ಅಂಗಳದೊಳಗೆ ರಕ್ಷಿಸಿಹೆವೆಂದಿರಲು
ನಾನು ತೆರಹು-ಮರಹಾಗಿರ್ದು ಕೆಟ್ಟೆನಯ್ಯಾ,
ನಾನು ಕೆಟ್ಟ ಕೇಡಿಂಗೆ ಕಡೆಯಿಲ್ಲವಯ್ಯಾ, ಲಿಂಗದೇವಾ,
ಎನ್ನ ಭಕ್ತಿ ಸಾವಿರ ನೋಂಪಿಯ ನೋಂತು
ಹಾದರದಲ್ಲಿ ಅಳಿದಂತಾಯಿತ್ತಯ್ಯಾ. –ಬವದೀ. 989

ಜ್ಞಾನಿಗಳಾದ ಜಂಗಮರು, ಶರಣರು ಜ್ಞಾನವನ್ನು ನೀಡಿ ಸಂಸಾರ ಕೂಪದಿಂದ ಮೇಲಕ್ಕೆ ಎತ್ತಿಕೊಳ್ಳುತ್ತೇವೆ ಎಂದು ಬೋಧೆ ಮಾಡಲು ಬರುತ್ತಾರೆ. ಆಗ ಅನೇಕರಿಗೆ ಒಂದು ಬಗೆಯ ಮರೆವು, ಶ್ರೀಮಂತಿಕೆಯ ಹಮ್ಮು ಮತ್ತೆ ಕೆಲವರಿಗೆ ಸಂಸಾರ ತಾಪತ್ರಯ. (ಈ ಕಾಲದಲ್ಲಿ ಟಿ.ವಿ. ಧಾರಾವಾಹಿಗಳ ಆಕರ್ಷಣೆ.) ಹೀಗಾಗಿ ಬಹಳ ನಷ್ಟವನ್ನು ಮಾಡಿಕೊಳ್ಳುತ್ತಾರೆ. ಏಕೆಂದರೆ ಇಂದ್ರಿಯಗಳನ್ನು ಕೆರಳಿಸುವ ದೃಶ್ಯಗಳು, ಸಾಹಿತ್ಯ ಎಲ್ಲಿ ಬೇಕಾದರೂ ಸಿಗುತ್ತದೆ. ಮನಸ್ಸನ್ನು ಅರಳಿಸುವ, ಬುದ್ಧಿಯನ್ನು ವಿಕಸಿಸುವ ಸಾಹಿತ್ಯ, ವಾತಾವರಣ ಹಣ ಕೊಟ್ಟರೂ ಸಿಕ್ಕದು. ಹೀಗಾಗಿ ಬಸವಶರಣರಾದ ಅಂಬಿಗರ ಚೌಡಯ್ಯನವರು ಹೇಳುವಂತೆ ಗಾಳಿ ಬಂದಾಗ ತೂರಿಕೊಳ್ಳಬೇಕು. ಧಾರ್ಮಿಕ ಜ್ಞಾನ, ಅಭಯ ನೀಡಲು ಶರಣರು, ಜಂಗಮರು ಬಂದಾಗ ಉದಾಸೀನ ಮಾಡುವುದು ವ್ಯಕ್ತಿಯ ಕೆಡುಕಿಗೆ ಕಾರಣವಾಗುವುದು. ಸುವರ್ಣ ಗಳಿಗೆಯೊಂದು ಬಂದಾಗ ಉದಾಸೀನ ಮಾಡುವುದು ಹೇಗೆ ಎಂದರೆ ಸಾವಿರಾರು ವ್ರತಗಳನ್ನು ಮಾಡಿ ಪುಣ್ಯವನ್ನು ಗಳಿಸಿ ಹಾದರವನ್ನು ಮಾಡಿದರೆ ಹೇಗೋ ಹಾಗೆ.

ಈ ವಾಕ್ಯ ಅರ್ಥಪೂರ್ಣ. ನೈತಿಕತೆ ಅಧ್ಯಾತ್ಮಕ್ಕೆ ಪೂರ್ವಭಾವಿ ಮೆಟ್ಟಿಲು. ಒಬ್ಬ ವ್ಯಕ್ತಿ ಪರಸತಿ/ಪರಪುರುಷನಿಗೆ ಎಳಸಿ ದೇವರ ಭಕ್ತಿ ಮಾಡುತ್ತೇನೆ ಎನ್ನುವುದರಲ್ಲಿ ಅರ್ಥವಿಲ್ಲ. ಕೆಲವರು ಹೋಮ ಹವನ ಮಾಡುವುದೇನು, ಗುಡಿಗುಡಿ ಸುತ್ತುವುದೇನು, ದಾನ ಮಾಡುವುದೇನು, ದೇವರುಗಳಿಗೆ ವಜ್ರಾಭರಣ ತೊಡಿಸುವುದೇನು. ಆಡಂಬರದ ವೇಷ ಧರಿಸುವುದೇನು? ಆದರೆ ನೈತಿಕವಾಗಿ ಪಾತಾಳಕ್ಕೆ ಇಳಿದಿರುತ್ತಾರೆ. ಪರಧನ, ಪರಸತಿಯನ್ನು ಲಪಟಾಯಿಸುವಲ್ಲಿ ನಿರತರಾಗಿರುತ್ತಾರೆ. ಇಂಥ ಆಡಂಬರದ ಭಕ್ತಿಗಿಂತಲೂ ಪ್ರಾಮಾಣಿಕ, ನೀತಿಯುತ ಬದುಕು ಮಾಡುವ ಬಡ ಭಕ್ತ ಎಲ್ಲ ವಿಧದಲ್ಲೂ ಲೇಸು. ಸಾವಿರ ವ್ರತಗಳನ್ನು ಮಾಡಿದರೇನಂತೆ ನೀತಿಯುತ ಬದುಕು ಇಲ್ಲದಿದ್ದರೆ ಆ ವ್ರತಗಳು ನಿರರ್ಥಕ.

ಆದ್ದರಿಂದ ಶರಣರು (ಜಂಗಮರು) ಬಂದಾಗ ಅವರು ಕೊಡುವ ಜ್ಞಾನಕ್ಕಾಗಿ ಜಾತಕ ಪಕ್ಷಿ ಮಳೆ ಹನಿಗಾಗಿ ಕಾಯುವಂತೆ ಸದ್ಭಕ್ತರು ಕಾಯಬೇಕು.

988. ಭಕ್ತನಾಗಿ ಬಾಳಲು ಕರೆ

ಹಾವು ಹದ್ದು ಕಾಗೆ ಗೂಗೆ ಅನಂತಕಾಲ ಬದುಕವೆ?
ಬೇಡವೋ ಮಾನವಾ, ಲೇಸೆನಿಸಿಕೊಂಡು ಬದುಕು,
ಮಾನವಾ ಶಿವಭಕ್ತನಾಗಿ, ಅದೆಂತೆಂದಡೆ:
ಜೀವಿತಂ ಶಿವಭಕ್ತಾನಾಂ ವರಂ ಪಂಚದಿನಾನಿ ಚ ।
ಅಜಕಲ್ಪ ಸಹಸ್ರೇಭ್ಯೋ ಭಕ್ತಿಹೀನಂ ನ ಶಾಂಕರಿ ॥ ಎಂದುದಾಗಿ,
ನಮ್ಮ ಲಿಂಗದೇವರ ಭಕ್ತಿವಿಡಿದು,
ಐದು ದಿವಸವಾದಡು ಬದುಕಿದಡೆ ಸಾಲದೆ? –ಬವದೀ. 990

ಜಗತ್ತಿನಲ್ಲಿ ಅನೇಕ ಪ್ರಾಣಿಗಳು, ಪಶುಪಕ್ಷಿಗಳು, ಕ್ರಿಮಿಕೀಟಗಳು ಬದುಕುತ್ತವೆ. ಸಬಲ ಪ್ರಾಣಿಗಳು ದುರ್ಬಲ ಪ್ರಾಣಿಗಳನ್ನು ಕೊಂದು, ತಿಂದು ಹೇಗೋ ಅನಂತಕಾಲ ಬದುಕುತ್ತವೆ. ಎಲೈ ಮಾನವ, ನೀನು ಸಹ ಹಾವು, ಹದ್ದು, ಕಾಗೆ, ಗೂಗೆಯಂತೆ ಹಾಗೆ ಬದುಕಿದರೆ ಹೇಗೆ? ಬೇಡ ಬೇಡ ; ಉತ್ತಮನೆನಿಸಿಕೊಂಡು, ಲೇಸು ಎನ್ನುವ ಬಾಳನ್ನು ಅಳವಡಿಸಿಕೊ. ಈ ಲೇಸುತನ ಬರುವುದು ಭಕ್ತಿಯ ಜೀವನದಿಂದ. ಸೃಷ್ಟಿಕರ್ತನಾದ ಪರಮಾತ್ಮನಿಗೆ ಶರಣಾಗತನಾಗಿ ಈ ಮಾನವ ಜನ್ಮ ಕೊಟ್ಟುದಕ್ಕಾಗಿ ಆ ದೇವನಿಗೆ ಕೃತಜ್ಞತೆ ಸಲ್ಲಿಸಿ ಬದುಕು.

ಶಿವಾಗಮದಲ್ಲಿ ಶಿವನು ಪಾರ್ವತಿಗೆ ಹೇಳುತ್ತಾನೆ, "ಶಂಕರಿ, ಭಕ್ತಿ ಹೀನನಾಗಿ ಅಜಕಲ್ಪ ಸಹಸ್ರ ವರ್ಷ ಬದುಕುವುದಕ್ಕಿಂತ ಶಿವಭಕ್ತನಾಗಿ ಐದು ದಿನ ಬದುಕುವುದು ಅರ್ಥಗರ್ಭಿತ" ಎಂದು. ಲಿಂಗದೇವರ ಭಕ್ತಿ ಅರ್ಚನೆಯನ್ನು ಮಾಡುತ್ತ ಐದೇ ಐದು ದಿನ ಬದುಕಿದರೂ ಸಾಕು.

989. ಲಿಂಗ ಜಂಗಮವ ನಂಬು

ನಿನ್ನ ಜನ್ಮದ ಪರಿಭವವ ಮರೆದೆಯಲ್ಲಾ ಮನವೆ.
ಲಿಂಗವ ನಂಬು ಕಂಡಾ ಮನವೆ.
ಜಂಗಮವ ನೆರೆ ನಂಬು ಕಂಡಾ ಎಲೆ ಮನವೆ,
ಲಿಂಗದೇವರ ಬೆಂಬತ್ತು ಕಂಡಾ ಎಲೆ ಮನವೆ. –ಬವದೀ. 991

ಎಲೈ ಮನಸ್ಸೆ, ನಿನ್ನ ಹಿಂದಿನ ಜನ್ಮದ ಸಂಕಷ್ಟವನ್ನು ಮರೆತು ಬಿಟ್ಟೆಯಲ್ಲ. ಹಲವು ಜನ್ಮಗಳ ತಿರುಗಣಿ ಮಡುವಿನಲ್ಲಿ ಸಿಕ್ಕಿ ಒದ್ದಾಡಿದ್ದು ಮರೆವಾಯಿತೆ ? ಈಗಲಾದರೂ ಈ ಭವಚಕ್ರದಿಂದ ಪಾರಾಗುವ ಉಪಾಯ ಆಲೋಚಿಸು. ಲಿಂಗದೇವನನ್ನು ದೃಢವಾಗಿ ನಂಬು, ಜ್ಞಾನಿಗಳು, ತ್ಯಾಗಿಗಳು ಆದ ಜಂಗಮರು ಆ ದೇವನ ಪ್ರತಿನಿಧಿ ಎಂದು ಅಚಲವಾಗಿ ನಂಬು, ಏನೇ ಬರಲಿ, ಉರಿ ಬರಲಿ, ಸಿರಿ ಬರಲಿ ಲಿಂಗದೇವನನ್ನು ಬಿಡದೆ ಬೆಂಬತ್ತು.

989. ಭ್ರಾಂತಿ ಬೇಡ

ಸಾಕಾರ ಸಂಗನಲ್ಲಿ ನಿರಾಕಾರವಿಲ್ಲೆಂದು
ನಿರಾಕಾರ ಸಂಗವನರಸಿ ತೊಳಲಿ ಬಳಲಿದೆನಯ್ಯಾ.
ನಿಶ್ಚಿಂತ ನಿಜಭಜನೆ ನೆಲೆಗೊಳ್ಳದೆನಗೆ,
ಭ್ರಾಂತು ಭ್ರಮೆಯಿಲ್ಲದಂತೆ ಎಂದಪ್ಪುದೋ ಎನಗೆ,
ಲಿಂಗದೇವಾ, ಕೇಳಯ್ಯಾ. –ಬವದೀ. 992

ಸಾಧಕರ ಜೀವನದಲ್ಲಿ ಒಂದು ಬಗೆಯ ಹೊಯ್ದಾಟವಿರುವುದು. ಇನ್ನೂ ತತ್ತ್ವಗಳು ಗಟ್ಟಿಗೊಳ್ಳದಿರುವಾಗ ಮನಸ್ಸಿನಲ್ಲಿ ದ್ವಂದ್ವಗಳು ಸುಳಿಯುತ್ತವೆ. ಸಮಾಜದ ಸಂಕಷ್ಟ ನೋಡಿ ಸೇವೆ ಮಾಡಬೇಕೆಂದು ಮಾನವೀಯತೆಯಿಂದ ಮಿಡಿಯುವ ಮನಸ್ಸು ತುಡಿಯುತ್ತದೆ. ಅಧ್ಯಾತ್ಮಿಕವಾಗಿ ಚಿಂತನೆ ಮಾಡುವ ಅಂತರ್ಮನ ಸಮಾಜ ಸೇವೆಯಲ್ಲಿ ತೃಪ್ತಿ ಪಡದೆ ನಿರಾಕಾರ ದೇವರ ಸಾಕ್ಷಾತ್ಕಾರ ಮಾಡಿಕೊಳ್ಳಬೇಕೆಂದು ಇದಕ್ಕಾಗಿ ಉತ್ಕಟವಾಗಿ ಸಾಧನೆ ಮಾಡಬೇಕೆಂದು ಹಂಬಲಿಸುತ್ತದೆ. ಈ ಹೊಯ್ದಾಟದಲ್ಲಿ ಸಾಧಕ ತೊಳಲಿ ಬಳಲುತ್ತಾನೆ. ಇಂತ ಒಂದು ಮಧ್ಯಂತರದ ಚಿಂತನೆಯಲ್ಲಿ, ಹೊಯ್ದಾಟದಲ್ಲಿ ಘಾಸಿಗೊಂಡ ಗುರು ಬಸವಣ್ಣನವರ ಮನಸ್ಸು "ನಿಶ್ಚಿಂತ ನಿಜಭಜನೆ ನೆಲೆಗೊಳ್ಳದೆನಗೆ, ಭ್ರಾಂತಿ, ಭ್ರಮೆ ಹೊಯ್ದಾಟವಿಲ್ಲದ ಸ್ಥಿತಿ ನನಗೆ ಎಂದು ಪ್ರಾಪ್ತವಾಗುವುದೊ" ಎಂದು ಪರಿತಪಿಸುತ್ತಾರೆ.

990. ಸಂದೇಹ ಬೇಡ

ತನು ದೊರೆಕೊಂಡಡೆ ಮನ ದೊರೆಕೊಳ್ಳದು,
ಮನ ದೊರೆಕೊಂಡಡೆ ತನು ದೊರೆಕೊಳ್ಳದು,
ತನುಮನ ದೊರೆಕೊಂಡಡೆ ಧನ ದೊರೆಕೊಳ್ಳದು,
ತನುಮನಧನ ದೊರೆಕೊಂಡಡೆ
ಸತಿಸುತರೆಡೆಯಾಟ ದೊರೆಕೊಳ್ಳದು,
ಸತಿಸುತರೆಡೆಯಾಟ ದೊರೆಕೊಂಡಡೆ

ಜಂಗಮಕ್ಕೆ ಮಾಡುವ ಮರ್ಮ ದೊರೆಕೊಳ್ಳದು,
ಲಿಂಗದೇವಾ. –ಬವದೀ. 993

ಧರ್ಮವಂತಿಕೆ ಒಂದು ಅಂಗದ ಮೂಲಕ ಅಭಿವ್ಯಕ್ತವಾದರೆ ಸಾಲದು. ಅದು ಸರ್ವಾಂಗದಲ್ಲೂ ಪ್ರತ್ಯಕ್ಷಗೊಳ್ಳಬೇಕು. ಕೆಲವರಿಗೆ ಶರೀರವು ಸದೃಢವಾಗಿರುತ್ತದೆ. ಶಾರೀರಿಕವಾಗಿ ಧರ್ಮಕ್ಕಾಗಿ, ದೇವರಿಗಾಗಿ ದುಡಿಯುವ ಅವಕಾಶವಿರುತ್ತದೆ. ಆದರೆ ಅವರಿಗೆ ದುಡಿಯುವ ಮನಸು, ಹಂಬಲ ಇರುವುದಿಲ್ಲ. ಮತ್ತೆ ಕೆಲವರಿಗೆ ಮನಸ್ಸಿನ ಉತಾಹ ಅದಮ್ಯವಾಗಿರುತ್ತದೆ. ಆದರೆ ಶರೀರವು ಸಹಕರಿಸದೆ ದುರ್ಬಲವಾಗಿರುತ್ತದೆ. ಮತ್ತೆ ಕೆಲವರಿಗೆ ತನು, ಮನ ಎರಡೂ ಇರುತ್ತವೆ. ಆದರೆ ದಾನಧರ್ಮ ಮಾಡಬೇಕೆಂದರೆ ಹಣದ ಕೊರತೆ ಎದುರಾಗುತ್ತದೆ. ಮತ್ತೆ ಕೆಲವರಿಗೆ ಈ ಮೂರು ಇರುತ್ತವೆ. ಹೆಂಡತಿ ಮಕ್ಕಳ ಸಹಕಾರವಿರುವುದಿಲ್ಲ. ಒಬ್ಬರು ಶರಣರಿದ್ದಾರೆ. ಅವರು ಸ್ವಂತ ಪರಿಶ್ರಮದಿಂದ ವ್ಯಾಪಾರ ಬೆಳೆಸಿದ್ದಾರೆ. ದೇವರ ಕೃಪೆಯಿಂದ ಲಭ್ಯವಾಗಿದೆ ಎಂಬ ಕೃತಜ್ಞತೆಯಿಂದ ಉದಾರವಾಗಿ ಧರ್ಮಕ್ಕೆ, ದೇವರಿಗೆ, ಬಡಬಗ್ಗರಿಗೆ ಸಹಾಯ ಮಾಡುತ್ತಾ ಬಂದರು. ಇರುವ ಒಬ್ಬ ಮಗನಿಗೆ ವ್ಯಾಪಾರದ ಜವಾಬ್ದಾರಿ ವಹಿಸಿದ್ದಾರೆ. ಎಲ್ಲವನ್ನೂ ಗಳಿಸಿಟ್ಟ ಅಪ್ಪನಿಗೆ ದಾನಧರ್ಮ ಮಾಡದಂತೆ ಮಗ ನಿರ್ಬಂಧ ವಿಧಿಸಿದ್ದಾನೆ. ಹೆಂಡತಿ–ಮಕ್ಕಳಿಗೆ ಅಂಜಿ ಇಂದು ದಾನಮಾಡಲಾರದೆ ಇರುವ ಪರಿಸ್ಥಿತಿಯಲ್ಲಿದ್ದು ಬಹಳ ನೊಂದುಕೊಳ್ಳುತ್ತಾರೆ. ಇಂಥ ಸಂಸಾರದ ಪರಿಸ್ಥಿತಿ ನೋಡಿಯೇ ಬಸವಣ್ಣನವರು, "ತನುಮನಧನ ದೊರೆಕೊಂಡಡೆ ಸತಿಸುತರೆಡೆಯಾಟ ದೊರೆಕೊಳ್ಳದು." ಎಂದಿದ್ದಾರೆ. ಕೆಲವೊಮ್ಮೆ ತನುಮನಧನ ಜೊತೆಗೆ ಸತಿ ಸುತರ ಸಹಕಾರವೂ ಸಿಕ್ಕಿರುತ್ತದೆ ಎಂದುಕೊಳ್ಳುವ. ಆದರೆ ಬಹಳ ಜನರಿಗೆ ಜಂಗಮಕ್ಕೆ ಮಾಡುವ ಮರ್ಮವೇ ತಿಳಿದಿರದು. ಒಬ್ಬರು ವರ್ಷಕ್ಕೊಮ್ಮೆ ಸಾಧುಗಳಿಗೆ ಉಣ್ಣಿಸುವ ಕಾರ್ಯಕ್ರಮ ಇಡುತ್ತಾರೆ. ಆ ದಿನ ಎಲ್ಲೆಲ್ಲಿಂದಲೋ ಸಾಧುಗಳು ಒಂದು ವಿಶಿಷ್ಟ ಸ್ಥಳದಲ್ಲಿ ಸೇರುತ್ತಾರೆ. ಅವರಿಗೆ ಊಟ–ಬಟ್ಟೆ ಕೊಟ್ಟ ನಂತರ ದುಡ್ಡು(ಕಾಣಿಕೆ) ಕೊಡುವುದಲ್ಲದೆ ಭಂಗಿ, ಅಫೀಮುಗಳನ್ನು ಸೇದಲು ಕೊಡುತ್ತಾರೆ. ಇದು ಸಾರ್ಥಕವಾದ ದಾನವೇ? ಎಂಬ ಪ್ರಜ್ಞೆ ಆ ದಾನಿಗಳಲ್ಲಿಲ್ಲ. ಅದಕ್ಕಾಗಿಯೇ ಧರ್ಮಪಿತರು ಹೇಳುವುದು, "ಲಿಂಗದೇವನ ಶರಣರಿಗಲ್ಲದೆ ಮಾಡುವ ಅರ್ಥ ವ್ಯರ್ಥ ಕಂಡಯ್ಯ" ಎಂದು. ತನ್ನ ಗಳಿಕೆಯು ಸತ್ಪಾತ್ರಕ್ಕೆ ಸಲ್ಲಬೇಕು ಎಂಬ ಪ್ರಜ್ಞೆ ದಾಸೋಹಿಗಳಲ್ಲಿರಬೇಕು.

ಲಿಂಗಾಯತ ಧರ್ಮದ ಬಗ್ಗೆ ಡಾ॥ ಎಂ.ಎಂ.ಕಲಬುರ್ಗಿ
(ವಿಶ್ರಾಂತ ಕುಲಪತಿಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ) ಅವರ ಅಭಿಪ್ರಾಯ

ಉತ್ತರ ಕರ್ನಾಟಕ ಶರಣ ಸಿದ್ಧಾಂತದ ಜನ್ಮಭೂಮಿ, ಇಲ್ಲಿ ಔಷಧಕ್ಕೂ ವೀರಶೈವ ಪದ ಜನಬಳಕೆಯಲ್ಲಿರಲಿಲ್ಲ. 1868ರಲ್ಲಿ ಡೆಪ್ಯೂಟಿ ಚನ್ನಬಸಪ್ಪನವರು ಬೆಳಗಾವಿಯಲ್ಲಿ ಸ್ಥಾಪಿಸಿದುದು ಲಿಂಗಾಯತ ಫ್ರೀ ಬೋರ್ಡಿಂಗ್. ಧಾರವಾಡ ನಿವಾಸಿಯಾದ ಕಿಟೆಲ್ 1875ರಲ್ಲಿ ಪ್ರಕಟಿಸಿದ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಕಾಣಿಸಿಕೊಂಡ ಸಾಹಿತ್ಯ ಘಟ್ಟದ ಹೆಸರು ಲಿಂಗಾಯತ ಲಿಟರೇಚರ್. 1883ರಲ್ಲಿ ಗಿಲಗಂಜಿ ಗುರುಸಿದ್ದಪ್ಪ, ಅರಟಾಳ ರುದ್ರಗೌಡರು ಧಾರವಾಡದಲ್ಲಿ ಸ್ಥಾಪಿಸಿದುದು ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ. 1907ರಲ್ಲಿ ವಾರದ ಮಲ್ಲಪ್ಪನವರು ಸೊಲ್ಲಾಪುರದಲ್ಲಿ ಸ್ಥಾಪಿಸಿದುದು ಲಿಂಗಾಯತ ಅಸೋಸಿಯೇಷನ್. 1910ರಲ್ಲಿ ಫ.ಗು.ಹಳಕಟ್ಟಿಯವರು ಬಿಜಾಪುರದಲ್ಲಿ ಸ್ಥಾಪಿಸಿದುದು ಬಿಜಾಪುರ ಲಿಂಗಾಯತ ಡಿಸ್ಟ್ರಿಕ್ಟ್ ಎಜ್ಯುಕೇಶನಲ್ ಅಸೋಸಿಯೇಶನ್. 1917ರಲ್ಲಿ ಬೆಳಗಾವಿಯಲ್ಲಿ ಅಸ್ತಿತ್ವಕ್ಕೆ ಬಂದುದು ಕರ್ನಾಟಕ ಲಿಂಗಾಯತ ಎಜುಕೇಶನ್ ಸೊಸೈಟಿ. ಹೀಗೆ ಈ ಭಾಗದಲ್ಲಿ ಹುಟ್ಟಿದುವೆಲ್ಲ ಲಿಂಗಾಯತ ಹೆಸರಿನ ಸಂಸ್ಥೆಗಳು. ಇಂಥ ಸಂದರ್ಭದಲ್ಲಿ ರೈಲು ಸೌಕರ್ಯ ಕಾರಣವಾಗಿ ಕಾಶಿಗೆ ಹೋಗುವ ವಿದ್ವಾಂಸರ ಸಂಖ್ಯೆ ವರ್ಧಿಸಿತು. ಅಲ್ಲಿ ಆರಾಧ್ಯ ವೀರಶೈವ ಕೃತಿಗಳಾದ ಕ್ರಿಯಾಸಾರ, ಶ್ರೀಕರಭಾಷ್ಯಗಳನ್ನು ಈ ಪರಂಪರೆಯ ಕೆಳದಿ ರಾಜ್ಯದ ಸಂಸ್ಕೃತ ಕೃತಿಗಳನ್ನು ಓದಿ ಕರ್ನಾಟಕಕ್ಕೆ ಬಂದ ಈ ಪಂಡಿತರು ಮಠಕ್ಕೆ ಸ್ವಾಮಿಯಾಗುವಲ್ಲಿ ಸಿಗದಿದ್ದರೆ ಪಾಠಶಾಲೆಗೆ ಶಾಸ್ತ್ರಿಯಾಗುವಲ್ಲಿ ಲಿಂಗಾಯತ ಶಬ್ದ ತಳ್ಳಲ್ಪಟ್ಟು ವೀರಶೈವ ಶಬ್ದ ನಿಧಾನವಾಗಿ ಪ್ರಚಾರವಾಗತೊಡಗಿತು. 1904ರ ವೇಳೆಗೆ ಧಾರವಾಡದಲ್ಲಿ ಶ್ರೀ ಮದ್ವೀರಶೈವ ಮಹಾಸಭಾ ಹೆಸರಿನ ಸಂಸ್ಥೆ ತಲೆಯೆತ್ತಿ ವೀರಶೈವ ಶಬ್ದಕ್ಕೆ ಅಧಿಕೃತ ಮುದ್ರೆ ಬೀಳುವಲ್ಲಿ, ಲಿಂಗಾಯತ ಶಬ್ದ ಇನ್ನೂ ವೇಗವಾಗಿ ಮರೆಯಾಗತೊಡಗಿತು. ಈಗ "ಲಿಂಗಾಯತ ಖಾನಾವಳಿ" ಎಂಬ ಬೋರ್ಡುಗಳು "ವೀರಶೈವ ಲಿಂಗಾಯತ ಖಾನಾವಳಿ" ಎಂದಾದವು. ಕೊನೆಗೆ ವೀರಶೈವ ಖಾನಾವಳಿ ಎಂದಾದವು. ಇದೇ ರೀತಿ ಲಿಂಗಾಯತ ಸಂಘ ಸಂಸ್ಥೆಗಳು ಹೆಸರು ಬದಲಾಯಿಸಿಕೊಳ್ಳುತ್ತಾ ಬಂದವು. ಉದಾ: ಬೆಂಗಳೂರಿನ "ಲಿಂಗಾಯತ ವಿದ್ಯಾಭಿವೃದ್ಧಿ ನಿಧಿ ಸಂಘ" ಹೆಸರನ್ನು "ಕರ್ನಾಟಕ ವೀರಶೈವ ವಿದ್ಯಾಭಿವೃದ್ಧಿ ಸಂಸ್ಥೆ" (1973) ಎಂದು, ಸೊಲ್ಲಾಪುರದ "ಲಿಂಗಾಯತ ಅಸೋಸಿಯೇಶನ್" ಹೆಸರನ್ನು ವೀರಶೈವ ಮಹಾಜನ ಸಭೆ ಎಂದು ಬದಲಾಯಿಸಲಾಯಿತು.

–ಸಂಗ್ರಹ : ಶರಣ. ಎಸ್.ಸೋಮಶೇಖರಯ್ಯ ಯಳನಾಡು

ಗಟ್ಟಿ ಕಾಳುಗಳೇ ಸಾಕು

ಪ್ರಭುಲಿಂಗ ಎಸ್ ಮಠಪತಿ
ರಾಷ್ಟ್ರೀಯ ಬಸವ ದಳ, ಕೊಪ್ಪಳ

ಹೊಲವ ಅಗೆದು, ಕಸವ ತೆಗೆದು,
ಹಸನು ಮಾಡಿ, ಬೀಜವ ಬಿತ್ತಿ,
ಬೆಳೆಯ ಬೆಳೆದನಯ್ಯಾ ರೈತನು.
ಕಣ್ಣುಕಟ್ಟುವಂತೆ ಬೆಳೆಯು ಬೆಳೆದು ನಿಂತಿತ್ತಯ್ಯಾ..
ಕೊಯ್ಲು ಮಾಡಿ ನೋಡಲು ನೂರಾರು ಚೀಲ
ತುಂಬುವಂತೆ ರಾಶಿ ಬಿದ್ದಿತ್ತಯ್ಯಾ..
ಸಂತೋಷದಿಂದ ಕಣಜ ತೂರಿ ನೋಡಲು
ಟೊಳ್ಳು- ಜೊಳ್ಳು ಗಾಳಿಗೆ ಹಾರಿ ಹೋಗಿ
ಮೂರಾರು ಚೀಲವೇ ಉಳಿದವಯ್ಯಾ..
ಧೃತಿಗೆಡದ ರೈತ ಸಂತೋಷದಿಂದ ಹೇಳಿದನಯ್ಯಾ
ಗಟ್ಟಿಯಾದ ಮೂರುಚೀಲವ ಬಿತ್ತಿ
ನೂರಾರು ಚೀಲ ಪಡೆಯಬಹುದು
ಟೊಳ್ಳು-ಜೊಳ್ಳಿನಿಂದೇನು ಉಪಯೋಗವೆಂದು
ತಿಪ್ಪೆಗೆಸೆದನಯ್ಯಾ..
ಅಂತೆಯೇ.. ಮಾತಾಜಿ
ಬಸವ ತತ್ವ ಪ್ರಚಾರಕ್ಕಾಗಿ ನಿಂತಾಗ
ಸಹಸ್ರ-ಸಹಸ್ರ ಸಂಖ್ಯೆಯಲ್ಲಿ ಜನ
ಮಾತಾಜಿಯವರೊಂದಿಗೆ ಕೈಜೋಡಿಸಿದರಯ್ಯಾ..
ನಿಜವಾಗಿಯೂ ಬಸವಾಭಿಮಾನಿಗಳಾ ಇವರು?
ಎಂದು ಪರೀಕ್ಷಿಸಲೋಸುಗ..
ಲಿಂಗದೇವನೆಂಬ ಅರ್ಥಗರ್ಭಿತ ವಚನಾಂಕಿತವಿಡಲು
ಗಾಳಿಗಿಟ್ಟ ಕಣಜದಂತೆ ದೂರ ಹಾರಿ ಹೋಗಿಬಿಟ್ಟರಯ್ಯಾ
ಸ್ವಾರ್ಥ ಸಾಧನೆಗೆ ಸಮಯವಿದೆಂದರಿತು
ಮನ ಬಂದಂತೆ ನಿಂದಿಸತೊಡಗಿದರಯ್ಯಾ..
ಸತ್ಯ ಮರೆಮಾಚಿ ಸುಳ್ಳನ್ನೇ ಎತ್ತಿ ಹಿಡಿದರಯ್ಯಾ..
ಮುಗ್ಧ ಜನರ ತಲೆಯಲ್ಲಿ ದ್ವೇಷದ ಬೀಜವ ಬಿತ್ತಿ
ಮಾತೆಯ ವಿರುದ್ಧ ಎತ್ತಿಕಟ್ಟಿದರಯ್ಯಾ..
ಧೃತಿಗೆಡದ ಮಾತೆ,
ಅರಿಯದ ಅಜ್ಞಾನಿಗಳು
ಸಹಸ್ರ ಸಂಖ್ಯೆಯಲ್ಲಿದ್ದಡೇನು?
ಅರಿತು, ತಿಳಿದು, ತತ್ವ ಹಿಡಿದು ನಡೆಯುವ
ನೂರಾರು ಜನರೇ ಸಾಕೆಂದು ವಿರೋಧವನ್ನೆಲ್ಲ ಎದುರಿಸಿದರಯ್ಯಾ..
ನೂರೆಂಟು ಅಡಿ ಬಸವ ಪುತ್ಥಳಿಯ ನಿರ್ಮಿಸಿ

ವಿರೋಧಿಸುವವರ ಬಾಯಿ ಮುಚ್ಚುವಂತೆ ಸಾಧಿಸಿ ತೋರಿಸಿದರಯ್ಯಾ..
ಇಂತಹ ಮಹಾ ಮಾತೆಯ ದಿಟ್ಟತನವ ಕಂಡು
ಲೋಕವೇ ನಿಬ್ಬೆರಗಾಗಿ ನೋಡುತ್ತಿರುವುದಯ್ಯಾ
ಗುರುಬಸವ ಮಹಾಪ್ರಭು ತಂದೆ

ಲಿಂಗದೇವ ಬಸವ ದ್ರೋಹವೆ ?

ಎಡೆ ಮಾಡಿದ ತಟ್ಟೆಯಲ್ಲಿ
ಭಕ್ಷ್ಯ-ಭೋಜನವ ನೀಡಿ
ಹಾಗಲಕಾಯಿಯ ಪಲ್ಯ ಇಟ್ಟೊಡೆ
ಹಾಗಲಕಾಯಿಯ ಪಲ್ಯಕ್ಕೆ ವಿಷವೆಂದು
ಬಲ್ಲವರೇ ಬೊಬ್ಬಿಟ್ಟರಯ್ಯಾ..!!!
ಅರಿಯದ ಮುಗ್ಧ ಜನರು
ತಟ್ಟೆ ಬಿಟ್ಟು ಓಡುತ್ತಿರುವರಯ್ಯಾ..!!
ಹಾಗಲಕಾಯಿಯ ಪಲ್ಯ ವಿಷವೆಂತಾಗುವುದಯ್ಯಾ...!!??
ಅಂತೆಯೇ...
ಮಾತಾಜಿ ದೇಶ-ವಿದೇಶ ಸಂಚರಿಸಿ
ಹಳ್ಳಿ-ಹಳ್ಳಿ ತಿರುಗಾಡಿ,
ಮನೆ-ಮನದಲ್ಲಿ ಬಸವ ಜ್ಯೋತಿಯ ಹೊತ್ತಿಸಿ
ಲಿಂಗದೇವನೆಂಬ ಅರ್ಥಗರ್ಭಿತ ವಚನಾಂಕಿತವಿಡಲು
ಸ್ವಾರ್ಥ ಸಾಧಕ ಜನರು
ಬಸವ ದ್ರೋಹವಾಯಿತ್ತೆಂದು ಬೊಬ್ಬಿಟ್ಟರಯ್ಯಾ...!!
ಅದೆಂತು ಬಸವ ದ್ರೋಹವಾಯಿತ್ತಯ್ಯಾ...???
ಬಸವ ದ್ರೋಹ ಅದಾವುದೆಂದಡೆ...?
ಕಲ್ಯಾಣ ಪರ್ವ ಪಥಸಂಚಲನದ ವೇಳೆಯಲ್ಲಿ
ಹಣೆ ಮೇಲೆ ವಿಭೂತಿ.. ಕೊರಳಲ್ಲಿ ರುದ್ರಾಕ್ಷಿ, ಲಿಂಗವ ಧರಿಸಿ
ಗುರುಬಸವ ನಾಮವ ನುಡಿಯುತ್ತ..
ಆನಂದದಿಂದ ಆಡುತ್ತ- ಹಾಡುತ್ತ ಬರುವ ಶರಣರ ಕಂಡು
ದೇವ ಸ್ವರೂಪಿಗಳೆಂದರಿಯದೆ..,
ಅಲ್ಲ ಸಲ್ಲದ ಮಾತಿನಿಂದ ನಿಂದಿಸಿದ್ದೆ ಬಸವ ದ್ರೋಹ..!!
ಪಥಸಂಚಲನಕ್ಕೆ ತಡೆಯೊಡ್ಡಿದ್ದೇ ಬಸವ ದ್ರೋಹ..!!
ಹಣೆ ಮೇಲೆ ವಿಭೂತಿ ಕೊರಳಲ್ಲಿ ಲಿಂಗವಿರಲು
ಲಿಂಗಿಎಂಬೆ, ಸಂಗಿಎಂಬೆ, ಸಾಕ್ಷಾತ್ ಲಿಂಗದೇವನೆಂಬೆ:
ಎಂಬ ಗುರು ವಚನ ಅರಿಯದೆ ಅಜ್ಞಾನಿಗಳಂತೆ
ವರ್ತಿಸಿರುವುದೆ ಬಸವ ದ್ರೋಹ..!!
ಇಂತಪ್ಪ ಬಸವ ದ್ರೋಹವೆಸಗಿ, ಬಸವಾಭಿಮಾನಿಗಳೆಂದು
ಹುಚ್ಚೆದ್ದು ಹೇಳಿಕೊಳ್ಳುತ್ತಿರುವವರ ಕಂಡು
ಬೆಚ್ಚಿ ಬೆರಗಾದೆನಯ್ಯಾ..
ಗುರುಬಸವ ಮಹಾಪ್ರಭು ತಂದೆ....!!!!

ಕಲ್ಯಾಣ ಕಿರಣ ಮಾಸ ಪತ್ರಿಕೆ
ಒಂದು ಮನವಿ
ದಯವಿಟ್ಟು ಬೇಸರಿಸಿಕೊಳ್ಳಬೇಡಿ

ಕಲ್ಯಾಣ ಕಿರಣ ಮಾಸ ಪತ್ರಿಕೆಯು ದಿ.14-1-1970ರಂದು ಪ್ರಾರಂಭವಾಯಿತು. ಬಸವ ತತ್ತ್ವ ಪ್ರಚಾರವನ್ನೇ ಮುಖ್ಯ ಗುರಿಯಾಗಿ ಇರಿಸಿಕೊಂಡು ಪತ್ರಿಕೆ ಸಾಗಿ ಬಂದು ಧರ್ಮಜಾಗೃತಿಯ ಕಾರ್ಯದಲ್ಲಿ ಮಹತ್ತರವಾದುದನ್ನು ಸಾಧಿಸಿತು. ಹತ್ತು ಸಾವಿರ ಪ್ರತಿಗಳವರೆಗೆ ಮುದ್ರಣಗೊಳ್ಳುತ್ತಿತ್ತು. ಅದು ಜನಪ್ರಿಯ ಧಾರ್ಮಿಕ ಪತ್ರಿಕೆಯಾಗಿ ಕೆಲಸ ಮಾಡಿದೆ ಎಂದು ಹೇಳಲು ಹೆಮ್ಮೆ ಎನಿಸುತ್ತದೆ.

ಚಂದಾದಾರರಲ್ಲಿ ವಾರ್ಷಿಕ ಸದಸ್ಯರಿಗಿಂತಲೂ ಆಜೀವ ಸದಸ್ಯರ ಸಂಖ್ಯೆಯೇ ಹೆಚ್ಚಿತ್ತು. ಪತ್ರಿಕೆ ಪ್ರಾರಂಭಿಸಿದಾಗ ಒಂದು ನೂರು ರೂಪಾಯಿ ಆಜೀವ ಸದಸ್ಯತ್ವವಿದ್ದಿತ್ತು. 10ರೂ. ವಾರ್ಷಿಕ ಚಂದಾ ಇತ್ತು. ಹುಮ್ಮಸ್ಸಿನಿಂದ 48 ಪುಟ, 64ಪುಟ ಹೀಗೆಲ್ಲ ಕೊಡಲಾಗುತ್ತಿತ್ತು. ಆಜೀವ ಸದಸ್ಯತ್ವ ಒಂದು ಸಾವಿರ ರೂ.ವರೆಗೆ 42 ವರ್ಷಗಳಲ್ಲಿ ಏರಿತು. ನೂರು ರೂಪಾಯಿ ಕೊಟ್ಟವರಿಗೂ 42ವರ್ಷ ಕಲ್ಯಾಣ ಕಿರಣ ಕಳಿಸುತ್ತ ಬಂದೆವು. ಅಂದು ಆಜೀವ ಸದಸ್ಯರಾದವರಲ್ಲಿ ಎಷ್ಟೋ ಜನ ಲಿಂಗೈಕ್ಯರೂ ಆದರು. ಹಲವಾರು ಕಾರಣಗಳಿಂದ ಕಲ್ಯಾಣ ಕಿರಣದ ಸಂಖ್ಯೆ ಏರಿತಾದರೂ ನಷ್ಟವೂ ಏರಿತು. ಪ್ರತಿ ತಿಂಗಳೂ ಸಂಸ್ಥೆಯ ಮೇಲೆ ನಲವತ್ತು ಸಾವಿರ ರೂ.ಗಳ ಭಾರ ಬೀಳತೊಡಗಿತು. ಈ ಭಾರವನ್ನು ತಪ್ಪಿಸುವ ಸಲುವಾಗಿ ಬೆಂಗಳೂರಿನ ರಾಷ್ಟ್ರೀಯ ಬಸವ ದಳದ ಪ್ರಮುಖರು ಸಭೆ ಸೇರಿ ಆಜೀವ ಸದಸ್ಯರಿಗೆ ಕಲ್ಯಾಣ ಕಿರಣ ಕಳಿಸುವುದನ್ನು ನಿಲ್ಲಿಸಬೇಕೆಂದು, ಅವರ ಸದಸ್ಯತ್ವ ನವೀಕರಿಸಲು ವಿನಂತಿ ಮಾಡಬೇಕೆಂದು ನಿರ್ಣಯಿಸಿದರು. ಸುಮಾರು ಮೂರು ತಿಂಗಳು ಕಾಲ ನವೀಕರಿಸುವ ಇಲ್ಲದಿದ್ದರೆ ನಿಲ್ಲಿಸುವ ಸೂಚನೆಯನ್ನು ಕಲ್ಯಾಣ ಕಿರಣದಲ್ಲಿ ನೀಡಿ ಜೂನ್ ಸಂಚಿಕೆಯಿಂದ ಪತ್ರಿಕೆ ಕಳಿಸುವುದನ್ನು ನಿಲ್ಲಿಸಲಾಯಿತೆಂದು ತಿಳಿಸಲು ವಿಷಾದಿಸುತ್ತೇವೆ. ಇದು ತೀರಾ ಅನಿವಾರ್ಯವಾಯಿತು.

ಕಾಣಿಕೆ ಕೊಟ್ಟವರು ಗೌರವ ಸದಸ್ಯರು

5000 ರೂ. ಮತ್ತು ಮೇಲೆ ಕೊಟ್ಟವರಿಗೆ ಗೌರವ ಸದಸ್ಯರೆಂದು ಭಾವಿಸಿ ಉಚಿತವಾಗಿ ಪತ್ರಿಕೆಯನ್ನು ಕಳಿಸಲಾಗುತ್ತಿತ್ತು. ಕೆಲವರು ಎರಡು ಮೂರು ಸಲ ಕಾಣಿಕೆ ಕೊಟ್ಟಾಗಲೊಮ್ಮೆ ಗೌರವ ಸದಸ್ಯರೆಂದು ದಾಖಲಾಗಿ ಒಬ್ಬರಿಗೇ 2-3 ಪತ್ರಿಕೆ ಹೋಗುತ್ತಿದ್ದವು. ಆಜೀವ ಸದಸ್ಯರ ಪಟ್ಟಿ, ಗೌರವ ಸದಸ್ಯರ ಪಟ್ಟಿ ಸೇರಿಕೊಂಡು ಬಿಟ್ಟಿತು. ಈ ಎಲ್ಲಾ ಕಾರಣಗಳಿಂದಾಗಿ ದಾನಿಗಳಿಗೂ ಪತ್ರಿಕೆ ಕಳಿಸಲಾಗಲಿಲ್ಲ. ಇದರಿಂದ ಕೆಲವು ದಾನಿಗಳು ತುಂಬಾ ಬೇಸರಗೊಂಡಿರಬಹುದು. ಈಗ ಕಲ್ಯಾಣ ಕಿರಣದ ವಾರ್ಷಿಕ ಚಂದಾ 200ರೂ. ಐದು ವರ್ಷದ ಚಂದಾ 1000ರೂ. ಆಜೀವ ಸದಸ್ಯತ್ವ ಸ್ವೀಕರಿಸುವುದಿಲ್ಲ. ಆದ್ದರಿಂದ ಎಲ್ಲರೂ ಚಂದಾದಾರರಾಗಿ ಸಹಕರಿಸಬೇಕು. ದಾನಿಗಳೂ ಸಹಿತ ಚಂದಾದಾರರಾಗಿ ಸಹಕರಿಸಬೇಕು. ಕೆಲವರು 2010, 2011ರಲ್ಲಿ 1000 (ಒಂದು ಸಾವಿರ) ರೂ. ತುಂಬಿರುವರು. ಅವರು ತಾವು ಹಣ ತುಂಬಿ ಪಡೆದ ರಸೀತಿಯ ಜೆರಾಕ್ಸ್ ಪ್ರತಿಯನ್ನು ಕಳಿಸಿದರೆ ಅವರಿಗೆ ಐದು ವರ್ಷದ ಚಂದಾದಾರರೆಂದು ಪರಿಗಣಿಸಿ ಉಳಿದ ಅವಧಿಗೆ ಪತ್ರಿಕೆ ಕಳಿಸಲಾಗುತ್ತದೆ. ದಾನಿಗಳಿದ್ದು ಕಲ್ಯಾಣ ಕಿರಣ ಬರುತ್ತಿದ್ದು ಈಗ ನಿಂತಿದ್ದರೆ ತಮ್ಮ ವಿಳಾಸ ಕೊಟ್ಟರೆ ಅವರಿಗೆ ಪುನಃ ಕಳಿಸಲಾಗುವುದು. ಬೇಸರಿಸದೆ ಪತ್ರ ವ್ಯವಹಾರ ಅಥವಾ ಫೋನ್ ಮೂಲಕ ಸಂಪರ್ಕಿಸಬೇಕೆಂದು ಕೋರುತ್ತೇವೆ.

20-7-2012

ಜಂಗಮ ದೂರವಾಣಿ:
9731038983

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಕಾರ್ಯಾಧ್ಯಕ್ಷೆ, ವಿಶ್ವಕಲ್ಯಾಣ ಮಿಷನ್ ಚಾರಿಟಬಲ್ ಟ್ರಸ್ಟ್
ಬಸವ ಮಂಟಪ, 2035, 20ನೆಯ ಮೇನ್,
2ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-560010



ಧಾರವಾಡದ ರಾಷ್ಟ್ರೀಯ ಬಸವ ದಳದವರಿಂದ ಬಸವ ಜ್ಯೋತಿ ಉದ್ಘಾಟನೆ. ದಿ.22-7-2012, ಶರಣೆ. ಎಸ್.ಎಂ. ಮುಶೆಣ್ಣನವರಿಂದ ಉದ್ಘಾಟನೆ



ಧಾರವಾಡದ ಅಕ್ಕಮಹಾದೇವಿ ಅನಾಥಾಲಯದ ಮಕ್ಕಳು ಮತ್ತು ಶರಣ ಸಂಗಮದಲ್ಲಿ ಭಾಗವಹಿಸಿದ ಶರಣರು.



ಕೂಡಲ ಸಂಗಮದಲ್ಲಿ ಬಸವ ಪಂಚಮಿ ಕಾರ್ಯಕ್ರಮದ ಉದ್ಘಾಟಣೆ ಪೂಜ್ಯ ಶ್ರೀ ಮಹದೇಶ್ವರ ಸ್ವಾಮೀಜಿಯವರಿಂದ

ಶರಣರುಗಳಾದ ಶ್ರೀಶೈಲ ಕಲ್ಯಾಣಪ್ಪ ಪರಮಾದಿ, ವೀರಣ್ಣ ಕೊರ್ಲ್ಹಳ್ಳಿ, ಶರಣೆ. ಗಂಗಾಂಬಿಕೆ ಬಸವರಾಜ ಉಪಸ್ಥಿತರಿದ್ದರು



ಡಾ॥ ವಿಜಯಲಕ್ಷ್ಮಿ ಬಾಳೇಕುಂದ್ರಿ ಅವರಿಗೆ "ಶರಣ ರತ್ನ" ಪ್ರಶಸ್ತಿ ಪ್ರಧಾನ.





ಬಸವ ಪಂಚಮಿಯಂದು ಕುಷ್ಠರೋಗಿಗಳ ಆಸ್ಪತ್ರೆಯಲ್ಲಿ ಹಣ್ಣು-ಹಾಲು ವಿತರಣೆ
ಬೆಂಗಳೂರು ರಾಷ್ಟ್ರೀಯ ಬಸವ ದಳದಿಂದ

CPMG/KA/BGW/50/2012-2014, RNI.No. 19980/70, Posted at MBC Bangalore GPO on 3rd, 10th, 20th of every month. licenced to post without prepayment wpp-17, Pages 32+4(Cover pages)